ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 5 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 111 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯಕ್ಕೆ ಸುರ್ಜೇವಾಲ, ವೇಣುಗೋಪಾಲ್ ಭೇಟಿ

ನಾವು ಯಾವುದಕ್ಕೂ ಜಗ್ಗಲ್ಲ

ಮತ್ತೊಮ್ಮೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆನ್ನಿಗೆ ನಿಂತ ಕಾಂಗ್ರೆಸ್ ವರಿಷ್ಠರು

ಸಿಎಂ ನಿವಾಸದಲ್ಲಿ ಸಚಿವರೊಂದಿಗೆ ಎಐಸಿಸಿ ಪ್ರತಿನಿಧಿಗಳ ಮಹತ್ವದ ಸಭೆ

ಬೆಂಗಳೂರು, ಆ. 4– ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ನೋಟಿಸ್ ನೀಡಿರುವ ಹಿನ್ನೆಲೆಯಲ್ಲಿ ರಾಜ್ಯದ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಎಐಸಿಸಿ ಪ್ರತಿನಿಧಿಗಳಾದ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಇಂದು ಸಂಜೆ ಬೆಂಗಳೂರಿಗೆ ಆಗಮಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನಿವಾಸದಲ್ಲಿ ಸಚಿವರುಗಳೊಂದಿಗೆ ಸಭೆ ನಡೆಸಿ ಸುದೀರ್ಘವಾಗಿ ಚರ್ಚಿಸಿದ ಬಳಿಕ ಎಐಸಿಸಿ, ಮುಖ್ಯಮಂತ್ರಿಗಳ ಬೆಂಬಲಕ್ಕೆ ಗಟ್ಟಿಯಾಗಿ ನಿಲ್ಲಬೇಕೆಂಬ ತೀರ್ಮಾನ ಕೈಗೊಂಡಿದೆ. ಒಂದು ವೇಳೆ ರಾಜ್ಯಪಾಲರು ಸಿದ್ದರಾಮಯ್ಯ ವಿರುದ್ಧ ಪ್ರಕರಣದ ತನಿಖೆಗೆ ಅನುಮತಿ ನೀಡಿದರೆ ಒಂದೆಡೆ ಕಾನೂನು ಹೋರಾಟ ಹಾಗೂ ಮತ್ತೊಂದೆಡೆ ಜನತೆಗೆ ವಾಸ್ತವ್ಯ ಸ್ಥಿತಿ ತಿಳಿಸುವ ತೀರ್ಮಾನ ಕೈಗೊಳ್ಳಲಾಗಿದೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಸಿ. ವೇಣುಗೋಪಾಲ್, ಕರ್ನಾಟಕದ ರಾಜಕಾರಣದಲ್ಲಿ ನಡೆಯುತ್ತಿರುವ ಗಂಭೀರ ಬೆಳವಣಿಗೆಗಳ ಕುರಿತು ಸಚಿವರುಗಳೊಂದಿಗೆ ಚರ್ಚಿಸಲಾಯಿತು. ಬಿಜೆಪಿ, ಸರ್ಕಾರಗಳನ್ನು ಉರುಳಿಸುವ ಇತಿಹಾಸವನ್ನು ಹೊಂದಿದೆ. ಅದೇ ಕೆಲಸವನ್ನು ಕರ್ನಾಟಕದಲ್ಲಿ ಮಾಡಲು ಪ್ರಯತ್ನಿಸುತ್ತಿದೆ. ಬಿಜೆಪಿ ಮತ್ತು ಜೆಡಿಎಸ್ ಪಿತೂರಿಗೆ ನಾವು ಜಗ್ಗುವುದಿಲ್ಲ. ಜನರ ಬಳಿಗೆ ಹೋಗುತ್ತೇವೆ. ಅವರಿಗೆ ವಾಸ್ತವಾಂಶ ವಿವರಿಸುತ್ತೇವೆ. ಎಲ್ಲರೂ ಒಗ್ಗಟ್ಟಾಗಿ ಹೋರಾಡುತ್ತೇವೆ ಎಂದು ಹೇಳಿದರು.

ದುರದೃಷ್ಟವಶಾತ್ ರಾಜ್ಯದ ರಾಜ್ಯಪಾಲರು ಬಿಜೆಪಿ ಪಿತೂರಿಯ ಸಾಧನವಾಗಿದ್ದಾರೆ. ಮುಖ್ಯಮಂತ್ರಿಯವರಿಗೆ ಶೋಕಾಸ್ ನೋಟಿಸ್ ನೀಡುವ ಮೂಲಕ ಸರ್ಕಾರ ಅಸ್ಥಿರಗೊಳ್ಳಲಿದೆ ಎಂಬ ಭಾವನೆ ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಆದರೆ, ಇದಕ್ಕೆಲ್ಲಾ ಕಾಂಗ್ರೆಸ್ ಜಗ್ಗುವುದಿಲ್ಲ. ಸಚಿವರು, ಶಾಸಕರು ತಮ್ಮ ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡಿ ಜನರಿಗೆ ಸರ್ಕಾರದ ಸಾಧನೆಗಳನ್ನು ವಿವರಿಸಿ, ಗ್ಯಾರಂಟಿ ಯೋಜನೆಗಳನ್ನು ಮುಗಿಸುವ ಬಿಜೆಪಿ ಮತ್ತು ಜೆಡಿಎಸ್ ಹುನ್ನಾರವನ್ನು ಬಯಲಿಗೆಳೆಯಲಾಗುವುದು. ಅದಕ್ಕಾಗಿಯೇ ಇಂದು ಸಭೆ ನಡೆಸಿದ್ದು, ರಾಜ್ಯದ ಬಡ ಜನತೆ ಕುರಿತು ಕಾಂಗ್ರೆಸ್ ಸರ್ಕಾರಕ್ಕೆ ಅತೀವ ಕಾಳಜಿ ಇದ್ದು, ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಲಾಗುವುದು ಎಂದರು.

ಸಿದ್ದರಾಮಯ್ಯ ಅವರು ಬೆಳೆದು ಬಂದ ಹಾದಿ ಎಲ್ಲರಿಗೂ ತಿಳಿದಿದೆ. ಅವರ ಪ್ರಾಮಾಣಿಕತೆ ಬಗ್ಗೆ ಅರಿವಿದೆ. ಅವರು ಮುಖ್ಯಮಂತ್ರಿ ಪದವಿಗೆ ಹೊಸಬರೇನಲ್ಲ. ಅವರ ರಾಜಕೀಯ ಬದುಕು, ತತ್ವ ಸಿದ್ಧಾಂತ ಹಿನ್ನೆಲೆ ಅವರು ಹೇಗಿದ್ದಾರೆ ಎಂಬುದು ಕರ್ನಾಟಕದ ಜನತೆಗೆ ಚೆನ್ನಾಗಿ ತಿಳಿದಿದೆ ಎಂದರು.

ಆರೋಪಗಳ ಕುರಿತು ಕಾನೂನು ತನ್ನದೇ ಆದ ಕ್ರಮ ವಹಿಸಲಿದೆ. ಈ ಬಗ್ಗೆ ನಮಗೆ ಅಳುಕಿಲ್ಲ. ನಿಜವಾಗಿಯೂ ಸಮಸ್ಯೆ ಇದ್ದರೆ ಕಾನೂನು ಮೊರೆ ಹೋಗಲಿ. ಅದನ್ನು ಬಿಟ್ಟು ಪ್ರತೀದಿನ ಸಿದ್ದರಾಮಯ್ಯ ವಿರುದ್ಧ ಪದೇ ಪದೆ ಭ್ರಷ್ಟಾಚಾರದ ಆರೋಪ ಮಾಡುವುದು ಸರಿಯಲ್ಲ. ಬಿಜೆಪಿ ಭ್ರಷ್ಟಾಚಾರ ಕುರಿತು ಮಾತನಾಡುತ್ತಿರುವುದು ಅತ್ಯಂತ ಹಾಸ್ಯಾಸ್ಪದ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮೇಲೆ ಎಷ್ಟು ಆರೋಪಗಳಿವೆ? ಪ್ರಜ್ವಲ್ ರೇವಣ್ಣ ವಿರುದ್ಧ ಆರೋಪಗಳಿಲ್ಲವೇ? ಎಂದು ಪ್ರಶ್ನಿಸಿದ ಅವರು, ತಮ್ಮ ರಾಜಕೀಯ ಜೀವನದುದ್ದಕ್ಕೂ ಜನಪರ ಕಾಳಜಿ ಹೊಂದಿದ, ರಾಜ್ಯ ಬಡಜನರ ನೆರವಿಗೆ ನಿಂತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಅವರನ್ನು ಮುಗಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ವೇಣುಗೋಪಾಲ್ ಹೇಳಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಉಪಸ್ಥಿತರಿದ್ದರು.



ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಇದ್ದಾರೆ.

2018ರಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಉರುಳಿದ್ದೇ ಬಿಜೆಪಿ ಕೇಂದ್ರ ನಾಯಕತ್ವದ ಪಿತೂರಿಯಿಂದ. ಅದೇ ರೀತಿಯ ಸ್ಪಷ್ಟ ಉದ್ದೇಶದಿಂದ ಈಗಲೂ ಕರ್ನಾಟಕ ಕಾಂಗ್ರೆಸ್ ಸರ್ಕಾರವನ್ನು ಬಿಜೆಪಿ ಕೇಂದ್ರ ನಾಯಕತ್ವ ಗುರಿಯಾಗಿಸಿಕೊಂಡಿದೆ. ಪ್ರಜ್ವಲ್ ರೇವಣ್ಣ ಪ್ರಕರಣ ಬೆಳಕಿಗೆ ಬಂದಾಗಲೇ ಕಾಂಗ್ರೆಸ್ ಸರ್ಕಾರದ ವಿರುದ್ಧದ ಪಿತೂರಿಯನ್ನು ದೇಶದ ಜನ ಗಮನಿಸಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ತಮ್ಮ ಮಕ್ಕಳನ್ನು ಉಳಿಸಿಕೊಳ್ಳಲು ತಮ್ಮ ಚುನಾಯಿತ ಸರ್ಕಾರವನ್ನು ಗುರಿಯಾಗಿಸಿಕೊಂಡಿದ್ದಾರೆ.

- ಕೆ.ಸಿ. ವೇಣುಗೋಪಾಲ್

ಕೆಇಎಯಿಂದ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತಾ ಪಟ್ಟಿ ಪ್ರಕಟ

ಬೆಂಗಳೂರು, ಆ.4– ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ ಮತ್ತು ಹೋಮಿಯೋಪಥಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆದು, ರಾಜ್ಯದವರೆಂದು ಕ್ಲೇಮ್ ಮಾಡಿರುವ 92,858 ಮಂದಿಯ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.



ಪಟ್ಟಿಯಲ್ಲಿ ಅತಿ ಹೆಚ್ಚು ಅಂಕ (716 ಅಂಕ) ಪಡೆದ ಪದ್ಮನಾಭ ಮೆನನ್ ಮೊದಲ ಸ್ಥಾನದಲ್ಲಿ ಇದ್ದಾರೆ. ಅತಿ ಕಡಿಮೆ ಅಂದರೆ 127 ಅಂಕ ಪಡೆದವರು ಕೂಡ ಈ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ವೈದ್ಯಕೀಯ ಕೋರ್ಸ್‌ಗೆ ಅರ್ಹತೆ ಪಡೆದು ಇನ್ನೂ ಅರ್ಜಿ ಸಲ್ಲಿಸದೇ ಇರುವವರಿಗೆ ಒಂದೆರಡು ದಿನದಲ್ಲಿ ಹೊಸದಾಗಿ ನೋಂದಣಿ ಮಾಡಿಕೊಳ್ಳಲು ಲಿಂಕ್ ಬಿಡುಗಡೆ ಮಾಡಲಾಗುವುದು. ನಂತರ ನೀಟ್ ಅಂಕ ದಾಖಲಿಸಲು ಎಲ್ಲ ಅರ್ಹರಿಗೂ ಅವಕಾಶ ನೀಡಲಾಗುವುದು ಎಂದೂ ಅವರು ವಿವರಿಸಿದ್ದಾರೆ.



ಮನೆಯಲ್ಲಿ ಊಟ ಮಾಡುತ್ತಾ ಕುಳಿತಿದ್ದವರಿಗೆ ಬಂತು 'ಓವರ್ ಸ್ಪೀಡ್' ದಂಡದ ನೋಟಿಸ್!

- ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿರುವ ಎಎನ್‌ಪಿಆರ್ ಕ್ಯಾಮರಾ ಅವಾಂತರ
- ಮೈಸೂರಿನ ದೀಪಕ್‌ಕುಮಾರ್‌ಗೆ ಬಂದ ನೋಟಿಸ್, ಎಕ್ಸ್ ಖಾತೆಯಲ್ಲಿ ಈ ವಿಚಾರ ಪೋಸ್ಟ್ ಮಾಡಿದ ತಕ್ಷಣ ಸ್ಪಂದಿಸಿ, ನೆರವಾದ ಎಡಿಜಿಪಿ ಅಲೋಕ್‌ಕುಮಾರ್

ಮೈಸೂರು, ಆ.4(ಬಿಎಲ್‌ಯು)– ಮೈಸೂರಿನ ಸರಸ್ವತಿಪುರಂ ನಿವಾಸಿ ದೀಪಕ್ ಕುಮಾರ್ ಅವರ ಮೊಬೈಲ್‌ಗೆ ಒಂದು ಎಸ್‌ಎಂಎಸ್ ಬರುತ್ತದೆ. ಅದರಲ್ಲಿ ಅವರ ಬೈಕ್ ಸಂಖ್ಯೆಯನ್ನು ನಮೂದಿಸಿ "ಜುಲೈ 29ರಂದು ರಾತ್ರಿ 10.30ರ ವೇಳೆಯಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಮಂಡ್ಯ ಜಿಲ್ಲೆಯ ಮಾದನಾಯಕನಹಳ್ಳಿ ಬಳಿ ನೀವು ವಾಹನವನ್ನು ನಿಗದಿತ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಚಾಲನೆ ಮಾಡಿದ್ದೀರಿ, ಹೀಗಾಗಿ ಸಾವಿರ ರೂ. ದಂಡ ಪಾವತಿಸಿ" ಎಂಬ ಸಂದೇಶವಿತ್ತು.

ಅರೇ, ನಾನು ಆ ದಿನ ಆ ವೇಳೆಯಲ್ಲಿ ಮೈಸೂರಿನ ಮನೆಯಲ್ಲಿ ಊಟ ಮಾಡುತ್ತಾ ಕುಳಿತಿದ್ದೆ. ಅದು ಹೇಗೆ ಎಕ್ಸ್‌ಪ್ರೆಸ್‌ವೇನಲ್ಲಿ ಚಲಿಸಿತು? ಎಂದು ಗೊಂದಲಕ್ಕೊಳಗಾದರು.

ತಕ್ಷಣವೇ ಅವರು ಎಡಿಜಿಪಿ ಅಲೋಕ್ ಕುಮಾರ್ ಅವರನ್ನು ಟ್ಯಾಗ್ ಮಾಡಿ, ತಮಗೆ ಬಂದಿದ್ದ ನೋಟಿಸ್‌ನ ಸ್ಕ್ರೀನ್‌ಶಾಟ್ ಜೊತೆ "ಸರ್, ನಾನು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ನಿಗದಿತ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಸಂಚರಿಸಿದ್ದಾಗಿ ನನಗೆ ನೋಟಿಸ್ ಬಂದಿದೆ. ಆದರೆ, ನೋಟಿಸ್‌ನಲ್ಲಿ ನಮೂದಿಸಿರುವ ಜುಲೈ 29ರಂದು ರಾತ್ರಿ 10.30ರ ವೇಳೆಯಲ್ಲಿ ಮೈಸೂರಿನ ನನ್ನ ಮನೆಯಲ್ಲಿ ಊಟ ಮಾಡುತ್ತಾ ಕುಳಿತಿದ್ದೆ. ಹೀಗಿದ್ದರೂ ನನಗೆ ಏಕೆ ನೋಟಿಸ್ ಜಾರಿಯಾಗಿದೆ ಎಂಬುದು ತಿಳಿಯುತ್ತಿಲ್ಲ. ದಯವಿಟ್ಟು ಸಹಾಯ ಮಾಡಿ" ಎಂದು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದರು. ■ 5ನೇ ಪುಟಕ್ಕೆ

ವಯನಾಡು ಭೂಕುಸಿತ: ಮನೆಗಳಿಗೆ ನುಗ್ಗಿ ಕಳ್ಳತನ



ವಯನಾಡು, ಆ.4– ಭಾರಿ ಮಳೆ ಮತ್ತು ಭೀಕರ ಭೂಕುಸಿತದಿಂದಾಗಿ ನಲುಗಿ ಹೋಗಿರುವ ಕೇರಳದ ವಯನಾಡಿನಲ್ಲಿ ಇದೀಗ ಕಳ್ಳರ ಹಾವಳಿ ಆರಂಭವಾಗಿದ್ದು, ಭೂಕುಸಿತದಲ್ಲಿ ನಿರಾಶ್ರಿತವಾಗಿರುವ ಮನೆಗಳಿಗೆ ನುಗ್ಗಿ ಕಳ್ಳತನ ಮಾಡಲಾಗುತ್ತಿದೆ ಎಂದು ಸಂತ್ರಸ್ತರು ಅಳಲು ತೋಡಿಕೊಂಡಿದ್ದಾರೆ.

ಭೂಕುಸಿತದ ಬಳಿಕ ಸಂತ್ರಸ್ತರನ್ನು ವಯನಾಡಿನ ಪುನರ್ವಸತಿ ಕೇಂದ್ರಗಳಿಗೆ ರವಾನೆ ಮಾಡಲಾಗುತ್ತಿದ್ದು, ಇಂತಹ ಮನೆಗಳನ್ನೇ ಗುರಿಯಾಗಿಸಿಕೊಂಡು ಕಳ್ಳರು ಮನೆಗಳ್ಳತನ ಮಾಡುತ್ತಿದ್ದಾರೆ. ಮನೆಗಳಲ್ಲಿ ಸಿಕ್ಕ ಸಿಕ್ಕ ವಸ್ತುಗಳನ್ನು ಕದ್ದು ಹೊತ್ತೊಯ್ಯುತ್ತಿದ್ದಾರೆ. ಹಾನಿಗೊಳಗಾದ ಮನೆಗಳಿಗೆ ಕಳ್ಳರು ನುಗ್ಗಿ ಅಳಿದುಳಿದ ವಸ್ತುಗಳನ್ನು ಕದ್ದೊಯ್ಯುತ್ತಿದ್ದಾರೆ ■ 5ನೇ ಪುಟಕ್ಕೆ

ವಯನಾಡು ಭೂಕುಸಿತ: 'ರಾಷ್ಟ್ರೀಯ ವಿಪತ್ತು' ಘೋಷಿಸುವ ಬಗ್ಗೆ ಪರಿಶೀಲನೆ

ವಯನಾಡು (ಕೇರಳ), ಆ.4– ವಯನಾಡು ಭೂಕುಸಿತವನ್ನು 'ರಾಷ್ಟ್ರೀಯ ವಿಪತ್ತು' ಎಂದು ಘೋಷಿಸಬೇಕೆಂಬ ಬೇಡಿಕೆಯನ್ನು ಕಾನೂನಿನ ಅಂಶಗಳ ಆಧಾರದ ಮೇಲೆ ಕೇಂದ್ರ ಸರ್ಕಾರ ಪರಿಶೀಲನೆ ನಡೆಸಲಿದೆ ಎಂದು ಕೇಂದ್ರ ಪೆಟ್ರೋಲಿಯಂ, ಪ್ರವಾಸೋದ್ಯಮ ಖಾತೆಯ ರಾಜ್ಯ ಸಚಿವ ಸುರೇಶ್ ಗೋಪಿ ಹೇಳಿದ್ದಾರೆ. ಭೂಕುಸಿತ ಸಂಭವಿಸಿರುವ ವಯನಾಡು ಜಿಲ್ಲೆಗೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಡಕ್ಕೈ ಮತ್ತು ಚೂರಲ್‌ಮಲ ಪ್ರದೇಶಗಳಲ್ಲಿ ಉಂಟಾಗಿರುವ ■ 5ನೇ ಪುಟಕ್ಕೆ



ಮೈಸೂರು ಮಿತ್ರ ಸೋಮವಾರ 5 ಆಗಸ್ಟ್ 2024

ಬಾಯಿ ಚಪ್ಪರಿಸುವಂತೆ ಮಾಡಿದ ಕೊಡವರ ಆಹಾರ ಮೇಳ

ಕೊಡವರ ಸಾಂಪ್ರದಾಯಿಕ ತಿನಿಸುಗಳ ಆಟಿ ಉತ್ಸವದಲ್ಲಿ ನೂರಾರು ಮಂದಿ ಭಾಗಿ

ಮೈಸೂರು, ಆ.4(ಜಿಎ)–ಕೊಡಗು ಗೌಡರ ಸಾಂಪ್ರದಾಯಿಕ ಖಾದ್ಯಗಳಾದ ಕೋಳಿಗೈಪು, ನಾಟಿ ಹಂದಿ ಗೈಪು, ಕಡುಬು, ಕರಿ ಕಾಫಿ, ತಟ್ಟೆ ಇಡ್ಲಿ, ಕೋಳಿ ಸಾರು, ಆಟಿ ಸೊಪ್ಪಿನ ಸಿಹಿ, ಪತ್ರೊಡೆ, ಪಾಪಿಟ್ಟು ಸೇರಿದಂತೆ ಹತ್ತಾರು ಖಾದ್ಯಗಳು ಬಾಯಿ ಚಪ್ಪರಿಸುವಂತೆ ಮಾಡಿತ್ತು.

ಮೈಸೂರಿನ ವಿಜಯನಗರದಲ್ಲಿರುವ ಕೊಡಗು ಗೌಡ ಸಮುದಾಯ ಭವನದಲ್ಲಿ ಆಷಾಢ ಮಾಸದ ಅಂಗವಾಗಿ ಕೊಡಗು ಗೌಡ ಸಮಾಜದ ವತಿಯಿಂದ ನಡೆಸಲಾಗುವ ಆಹಾರ ಮೇಳದಲ್ಲಿ ಸಾಂಪ್ರದಾಯಿಕ ಖಾದ್ಯಗಳು ಎಲ್ಲರ ನಾಲಿಗೆಗೆ ರುಚಿ ನೀಡಿದವು. ಹಳೇ ಮೈಸೂರು ಭಾಗದಲ್ಲಿ ಆಷಾಢ ಮಾಸ ಎಂದು ಹೇಳಿದರೆ ಕೊಡಗು ಭಾಗದಲ್ಲಿ ಆಟಿ ಮಾಸ ಎನ್ನುತ್ತಾರೆ. ಕೊಡಗು ಗೌಡ ಸಮಾಜದ ವತಿಯಿಂದ ಪ್ರತೀ ವರ್ಷ ಈ ಆಟಿ ಉತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಆಟಿ ಮಾಸದ 16ನೇ ದಿನ ಈ ಆಹಾರ ಮೇಳವನ್ನು ನಡೆಸಲಾಗುತ್ತದೆ. ಈ ಮಾಸದಲ್ಲಿ ಚಳಿ ಹೆಚ್ಚಿರುವ ಕಾರಣ ಹಿಂದಿನ ತಲೆಮಾರಿನವರು ಈ ಮಾಸದಲ್ಲಿ ಸಿಗುವ ಆಟಿ ಸೊಪ್ಪು, ಮರಕೆಸು, ಚರಮೇ ಸೊಪ್ಪು ಸೇರಿದಂತೆ 18 ವಿವಿಧ ಸೊಪ್ಪುಗಳನ್ನು ಬಳಸಿ ಖಾದ್ಯಗಳನ್ನು ತಯಾರಿಸಲಾಗುತ್ತದೆ. ಈ ತಿನಿಸುಗಳನ್ನು ಸೇವಿಸಿದಲ್ಲಿ ಚಳಿಗಾಲದಲ್ಲಿ ಕಾಣಿಸಿಕೊಳ್ಳುವ 18 ಖಾಯಿಲೆಗಳು ಸುಳಿಯುವುದಿಲ್ಲ ಎಂಬುದು ಅವರ ನಂಬಿಕೆ. ಹೀಗಾಗಿ ಪ್ರತೀ ವರ್ಷ ಆಟಿ ಉತ್ಸವವನ್ನು ಆಚರಿಸಿ 18 ಮಳಿಗೆಗಳ ಮೂಲಕ ಈ ತಿನಿಸುಗಳನ್ನು ಜನರಿಗೆ ಪರಿಚಯಿಸಲಾಗುತ್ತದೆ.


ಮೈಸೂರಿನ ಕೊಡಗು ಗೌಡ ಸಮುದಾಯ ಭವನದಲ್ಲಿ ಆಷಾಢ ಮಾಸದ ಅಂಗವಾಗಿ ಕೊಡಗು ಗೌಡ ಸಮಾಜದ ವತಿಯಿಂದ ಆಹಾರ ಮೇಳ ಆಯೋಜಿಸಲಾಗಿತ್ತು.

ಭಾನುವಾರ ಬೆಳಿಗ್ಗೆ ಆರಂಭವಾದ ಈ ಉತ್ಸವವನ್ನು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಉದ್ಘಾಟಿಸಿದರು. ವೇದಿಕೆ ಕಾರ್ಯಕ್ರಮವನ್ನು ಕೊಡಗು ಗೌಡ ಸಮಾಜದ ಮಾಜಿ ಅಧ್ಯಕ್ಷ ತೋಟಬೈಲು ಮನೋಹರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಮನೋಹರ್, ನಮ್ಮ ಸಂಸ್ಕೃತಿ, ಪರಂಪರೆ, ಆಹಾರ ಪದ್ಧತಿಗಳು ಮುಂದಿನ ಪೀಳಿಗೆಗೂ ತಲುಪಬೇಕಾದಲ್ಲಿ ಇಂತಹ ಮೇಳ, ಉತ್ಸವಗಳು ಪದೇ ಪದೇ ನಡೆಸಬೇಕು. ಕೊಡಗಿನಲ್ಲಿ ಆಯಾ ಕಾಲಕ್ಕೆ ಯಾವ ಆಹಾರ ಪದಾರ್ಥಗಳನ್ನು ಸೇವಿಸಬೇಕು ಎಂಬುದನ್ನು ನಮ್ಮ ಪೂರ್ವಿಕರು ನಮಗೆ ಪರಿಚಯಿಸಿದ್ದಾರೆ. ಆಧುನಿಕ ಯುಗದಲ್ಲಿ ಈ ಪದ್ಧತಿಗಳು ವಾಯುವಾಗುತ್ತಿವೆ. ಇಂತಹ ವೇಳೆ ನಾವುಗಳು ನಮ್ಮ ಆಹಾರ ಪದ್ಧತಿ ಕುರಿತು, ಭಾಷಣ, ಪ್ರಬಂಧ, ಚರ್ಚಾ ಸ್ಪರ್ಧೆಗಳನ್ನು ನಡೆಸುವ ಮೂಲಕ ನಮ್ಮ ಪದ್ಧತಿ ಜೀವಂತವಾಗಿಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕೊಡಗು ಗೌಡ ಸಮಾಜದ ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ದೇವಜನ ಗೀತ ಮೊಂಟಡ್ಕ, ನಿರ್ದೇಶಕ ಪಟ್ಟಡ ಶಿವಕುಮಾರ್, ಅಧ್ಯಕ್ಷ ಕೊಂಬಾರನ ಬಸಪ್ಪ, ನಡುವತ್ತೀರ ಗೀತ, ಕುದುಪಜೆ ಚಂದ್ರಶೇಖರ್ ಮತ್ತಿತರರಿದ್ದರು.

ಮೈಸೂರು ಮೃಗಾಲಯದಲ್ಲಿ ಕರಡಿ ಮನೆ ಲೋಕಾರ್ಪಣೆ



ಮೈಸೂರಿನ ಮೃಗಾಲಯದಲ್ಲಿ ಸಿಎಸ್ಆರ್ ಫಂಡ್‌ನಲ್ಲಿ ಕರಡಿಗಳಿಗಾಗಿ ನೂತನವಾಗಿ ನಿರ್ಮಿಸಿರುವ ಮನೆ, ಒಳಾವರಣವನ್ನು ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ ಪ್ರೈ.ಲಿ. ಹಿರಿಯ ಪ್ರಧಾನ ವ್ಯವಸ್ಥಾಪಕ ಆರ್.ನಾರಾಯಣ ಉದ್ಘಾಟಿಸಿದರು.

ಮೈಸೂರು, ಆ.4(ಎಂಟಿವೈ)– ಮೈಸೂರು ಮೃಗಾಲಯದಲ್ಲಿರುವ ಕರಡಿಗಳಿಗಾಗಿ ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ ಪ್ರೈ.ಲಿ. ವತಿಯಿಂದ ಸಿಎಸ್ಆರ್ ಫಂಡ್‌ನಲ್ಲಿ ನಿರ್ಮಿಸಿರುವ ನೂತನ ಮನೆ ಯನ್ನು ಲೋಕಾರ್ಪಣೆ ಮಾಡಲಾಯಿತು.

ದೇಶದ ಮುಂಚೂಣಿ ಮೃಗಾಲಯಗಳಲ್ಲಿ ಒಂದಾಗಿರುವ ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಪ್ರಾಣಿ–ಪಕ್ಷಿಗಳಿಗೆ ಉತ್ತಮ ವ್ಯವಸ್ಥೆಯುಳ್ಳ ಮನೆ, ಕೇಜ್, ಒಳಾವರಣ ನಿರ್ಮಿಸಲಾಗುತ್ತಿದ್ದು, ಮೃಗಾಲಯದಲ್ಲಿರುವ ಕರಡಿ(ಸ್ಲಾತ್ ಬೇರ್)ಗಳಿಗಾಗಿ ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ ಸಿಎಸ್ಆರ್ ಅನುದಾನದಲ್ಲಿ 91.62 ಲಕ್ಷ ರೂ ವೆಚ್ಚದಲ್ಲಿ ಮನೆಯನ್ನು ನಿರ್ಮಿಸಿಕೊಟ್ಟಿದೆ. ಕರಡಿಗಳು ವಿರಮಿಸಲು, ಆಹಾರ ಸೇವಿಸಲು ಹಾಗೂ ಸಂಚರಿಸಲು ಸೂಕ್ತ ವ್ಯವಸ್ಥೆಯುಳ್ಳ ಒಳಾವರಣದೊಂದಿಗೆ ಮನೆಯನ್ನು ಮೃಗಾಲಯದ ಕೋರಿಕೆ ಮೇರೆಗೆ ನೋಟು ಮುದ್ರಣ ಪ್ರೈ.ಲಿ ಮುಂದಾಗಿತ್ತು.

ಅಲ್ಲದೆ, ಮೃಗಾಲಯಕ್ಕೆ ಬರುವ ಪ್ರವಾಸಿಗರು ಕರಡಿ ವೀಕ್ಷಣೆಗೆ ಸೂಕ್ತ ವಾತಾವರಣ ಇರುವಂತೆ ನೂತನ ಒಳಾವರಣ ನಿರ್ಮಿಸಲಾಗಿದ್ದು, ಶನಿವಾರ ಬೆಳಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ ಪ್ರೈ.ಲಿ ಹಿರಿಯ ಪ್ರಧಾನ ವ್ಯವಸ್ಥಾಪಕ ಆರ್.ನಾರಾಯಣ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪ್ರಧಾನ ವ್ಯವಸ್ಥಾಪಕ ಪ್ರಮೋದ್‌ಕುಮಾರ್, ಉಪ ಪ್ರಧಾನ ವ್ಯವಸ್ಥಾಪಕ ಮಯೂರ್ ಶ್ರೀವಾತ್ಸವ, ವ್ಯವಸ್ಥಾಪಕ ಮೋಹಿತ್ ಅಗರ್‌ವಾಲ್, ಮೃಗಾಲಯದ ಉಪನಿರ್ದೇಶಕ ಎನ್.ಲಕ್ಷ್ಮೀಕಾಂತ್, ಆರ್‌ಎಫ್‌ಓ ವಿ.ಮುನಿರಾಜು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ 15ನೇ ವಾರ್ಷಿಕೋತ್ಸವ ಆಚರಣೆ



ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್‌ನಲ್ಲಿ 15ನೇ ವರ್ಷದ ವಾರ್ಷಿಕೋತ್ಸವ ಆಚರಿಸಲಾಯಿತು. ಗ್ರಾಹಕರಾದ ಹೀನಾ ಕೌಸರ್, ಗಾಯತ್ರಿ ಜಗದೀಶ, ರಶ್ಮಿ ರವೀಂದ್ರ, ಗೌರ್ ನಾಜ್, ಪದ್ಮ ಅರಸ್, ಸವಿತಾ ಅರಸ್, ನಿರ್ಮಲಾ ಅರಸ್, ರೈಸಾ, ಮೈತ್ರಿ, ಮೈಸೂರು ಶೋರೂಂನ ಸ್ಟೋರ್ ಹೆಡ್ ಶರಫುದ್ದೀನ್ ಫಸಲು ರೆಹಮಾನ್ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಮಗಳ ಹೆಸರೇಳಿ ತಂದೆಗೆ ವಂಚನೆ ಯತ್ನ; ಪ್ರಕರಣ ದಾಖಲು

ಮೈಸೂರು, ಆ.4(ಎಸ್‌ಬಿಡಿ)– ಪೊಲೀಸರ ಸೋಗಿನಲ್ಲಿ ಉದ್ಯಮಿಯೊಬ್ಬರಿಂದ ಹಣ ಪೀಕಲು ಯತ್ನಿಸಿದ್ದು, ಈ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮಕೃಷ್ಣನಗರದ ಉದ್ಯಮಿಯೊಬ್ಬರ ಮೊಬೈಲ್‌ಗೆ ಜು.30ರಂದು ಮಧ್ಯಾಹ್ನ 3.30ರ ಸಮಯದಲ್ಲಿ +923270144041 ಸಂಖ್ಯೆಯಿಂದ ಕರೆ ಬಂದಿದೆ. ರಿಸೀವ್ ಮಾಡಿದ ಕೂಡಲೇ ಪುತ್ರಿಯ ಹೆಸರೇಳಿ ನೀವು ಇಂತಹವರ ತಂದೆಯೇ ಎಂದು ಕೇಳಿದ್ದಾರೆ. ಅದಕ್ಕೆ ಹೌದು ಎಂದಾಗ ನಾವು ಸಿಬಿಐ ಪೊಲೀಸರು, ಬೆಂಗಳೂರಿನಿಂದ ಕರೆ ಮಾಡುತ್ತಿದ್ದೇವೆ ಎಂದು ಪರಿಚಯಿಸಿಕೊಂಡಿದ್ದಾರೆ.

ಆಗ ಉದ್ಯಮಿ ಏನು ವಿಷಯ ಸರ್ ಎಂದು ಕೇಳಿದಾಗ 'ನಿಮ್ಮ ಮಗಳು ಹಾಗೂ ಆಕೆಯ ಸ್ನೇಹಿತರ ಗುಂಪು ಸೇರಿಕೊಂಡು ಮಿನಿಸ್ಟರ್ ಮಗನಿಗೆ 25 ಲಕ್ಷ ರೂ. ವಂಚಿಸಿದ್ದಾರೆ. ಆದ್ದರಿಂದ ಅವರನ್ನು ಕಾಲೇಜಿನಿಂದ ನಾಲ್ವರು ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಕರೆದುಕೊಂಡು ಬಂದಿದ್ದಾರೆ. ವಿಚಾರಣೆ ಮಾಡಿದಾಗ ಇದರಲ್ಲಿ ನಿಮ್ಮ ಮಗಳ ತಪ್ಪಿಲ್ಲ ಎನ್ನಿಸುತ್ತಿದೆ. ಆದ್ದರಿಂದ ಅವರನ್ನು ಬಿಟ್ಟು ಕಳುಹಿಸುತ್ತೇವೆ. ಆದರೆ ನಮ್ಮ ನಾಲ್ವರು ಇನ್ಸ್‌ಪೆಕ್ಟರ್‌ಗಳಿಗೆ ತಲಾ 10 ಸಾವಿರ ರೂ.ನಂತೆ ಒಟ್ಟು 40 ಸಾವಿರ ರೂ. ಹಣವನ್ನು ಈ ನಂಬರ್‌ಗೆ ಗೂಗಲ್ ಪೇ ಮಾಡಿ' ಎಂದು ಬೇಡಿಕೆ ಇಟ್ಟಿದ್ದಾರೆ.

ಇದರಿಂದ ಅನುಮಾನಗೊಂಡ ಉದ್ಯಮಿ, ಸರಿ ಎಂದು ಕರೆ ಕಡಿತಗೊಳಿಸಿದ್ದಾರೆ. ಬಳಿಕ ವಂಚಿಸಲು ಯಾರೋ ಕರೆ ಮಾಡಿರುವುದನ್ನು ಅರಿತು, ಕೂಡಲೇ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.


ಅಭಿನಂದನೆ


ಕೊನೆಯ ಆಷಾಢ ಶುಕ್ರವಾರದ ಅಂಗವಾಗಿ ಮೈಸೂರು ತಾಲೂಕಿನ ದಾರಿಪುರ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಚಾಮುಂಡೇಶ್ವರಿ ಪೂಜೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಮುಖಂಡ ವರುಣ ಮಹೇಶ್, ಮೊತ್ತ ಬಸವರಾಜು ಡಾ.ಶಿವಯೋಗ, ಕಟ್ಟೆ ಮಳಲವಾಡಿ ಸುರೇಶ್ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು.

ಕಂದಾಯ ಇಲಾಖೆಯಲ್ಲಿ ಅಂಗವಿಕಲರ ಮೀಸಲಾತಿಗಾಗಿ ವೃಂದ ನಿಗದಿ

ಮೈಸೂರು,ಆ.4(ಎಸ್‌ಪಿಎನ್)– ಗ್ರೂಪ್ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳಿಗೆ ನೀಡುವ ಮುಂಬಡ್ತಿಯಲ್ಲಿ ಎದ್ದು ಕಾಣುವ ಅಂಗವೈಕಲ್ಯವುಳ್ಳ ಸರ್ಕಾರಿ ನೌಕರರಿಗೆ ಶೇ.4ರಷ್ಟು ಮೀಸಲಾತಿಯನ್ನು ಪರಿಗಣಿಸುವ ಸಂಬಂಧ ಕಂದಾಯ ಇಲಾಖೆಯಲ್ಲಿನ ವೃಂದಗಳನ್ನು ಗುರುತಿಸಲಾಗಿದೆ.

ಗ್ರೂಪ್ ಡಿ ವೃಂದದ ನೌಕರರು ಹಾಗೂ ವಾಹನ ಚಾಲಕರಿಗೆ, ಚಾಲಕರ ಹುದ್ದೆಯಿಂದ ಹಿರಿಯ ಚಾಲಕರ ಹುದ್ದೆಗೆ, ದ್ವಿತೀಯ ದರ್ಜೆ ಗುಮಾಸ್ತರು, ಗ್ರಾಮ ಆಡಳಿತ ಅಧಿಕಾರಿ, ಎಸ್‌ಡಿಎಯಿಂದ ಎಫ್‌ಡಿಎ ಹುದ್ದೆಗೆ, ರಾಜಸ್ವ ನಿರೀಕ್ಷಕರ ಹುದ್ದೆಗೆ, ಎಫ್‌ಡಿಎ, ರಾಜಸ್ವ ನಿರೀಕ್ಷಕರು ಹಾಗೂ ಶೀಘ್ರಲಿಪಿಗಾರರ ಹುದ್ದೆಯಿಂದ ಶಿರಸ್ತೇದಾರ್, ಉಪತಹಶೀಲ್ದಾರರ ಹುದ್ದೆಗೆ ಸರ್ಕಾರದ ನಿಯಮಗಳ ಷರತ್ತಿಗೊಳಪಟ್ಟು, ಕಂದಾಯ ಇಲಾಖೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಶೀಲಿಸಿ ಶೇ.4ರಷ್ಟು ಅಂಗವೈಕಲ್ಯವುಳ್ಳ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಕಲ್ಪಿಸಬಹುದು ಎಂದು ಕಂದಾಯ ಇಲಾಖೆ(ಸೇವೆಗಳು–2) ಅಧೀನ ಕಾರ್ಯದರ್ಶಿ ಬಿ.ಎಸ್.ಪ್ರದೀಪ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ.



ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಆ.4–ಮೈಸೂರಿನ ರಾಮಾನುಜ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ.6ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ರಾಮಾನುಜ ರಸ್ತೆ 1ರಿಂದ 19ನೇ ಕ್ರಾಸ್‌ವರೆಗೆ, ಬಸವೇಶ್ವರ ರಸ್ತೆ 1ರಿಂದ 14ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪೂರ್ವಭಾವಿ ಸಭೆ

ಮೈಸೂರು,ಆ.4– ಆಗಸ್ಟ್ 19ರಂದು ನುಲಿಯ ಚಂದಯ್ಯ ಜಯಂತಿ, 20ರಂದು ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಹಾಗೂ 26ರಂದು ಶ್ರೀ ಕೃಷ್ಣ ಜಯಂತಿ ಆಚರಿಸಬೇಕಾಗಿದ್ದು, ಈ ಸಂಬಂಧ ಆ.7ರಂದು ಬೆಳಗ್ಗೆ 11 ಗಂಟೆಗೆ ಅಪರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೆಹಲಿ ಮೆಟ್ರೋದಲ್ಲಿ ಮಾಜಿ ಪ್ರಧಾನಿ ದೇವೇಗೌಡರ ಪ್ರಯಾಣ

ದೆಹಲಿ,ಆ.4– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ದೆಹಲಿ ಮೆಟ್ರೋದಲ್ಲಿ ಪ್ರಯಾಣ ಬೆಳೆಸಿದ್ದಾರೆ.

ನಿನ್ನೆ ಮ್ಯೂಸಿಯಂಗೆ ಭೇಟಿ ನೀಡಿದ್ದ ಅವರು ಮೆಟ್ರೋದಲ್ಲಿ ಪ್ರಯಾಣ ಮಾಡಿದರು. ಹೆಚ್‌ಡಿ.ದೇವೇಗೌಡರಿಗೆ ಪುತ್ರಿ ಡಾ.ಅನಸೂಯ ಹಾಗೂ ಸೊಸೆ ಸಾಥ್ ನೀಡಿದ್ದಾರೆ. ದೆಹಲಿಯ ಲೋಕಕಲ್ಯಾಣ ಮಾರ್ಗ್ ಮೆಟ್ರೋ ನಿಲ್ದಾಣದಿಂದ ದೇವೇಗೌಡರು ದಿಲ್ಲಿ ಹಾತ್ ನಿಲ್ದಾಣದವರೆಗೆ ಪ್ರಯಾಣ ಮಾಡಿದ್ದಾರೆ.

ಮಾಜಿ ಪ್ರಧಾನಿ ದೇವೇಗೌಡರ ಜೊತೆ ಅಧಿಕಾರಿಗಳು ತೆರಳಿದ್ದಾರೆ. ಇದೇ ವೇಳೆ ಅಧಿಕಾರಿಗಳಿಂದ ದೆಹಲಿ ಮೆಟ್ರೋ ಮಾರ್ಗ, ಪ್ರತಿ ದಿನದ ಪ್ರಯಾಣಿಕರು, ಸಂಚಾರ ದಟ್ಟಣೆ ಕುರಿತು ದೇವೇಗೌಡರು ಮಾಹಿತಿ ಪಡೆದುಕೊಂಡಿದ್ದಲ್ಲದೇ ಮೆಟ್ರೋದಲ್ಲಿದ್ದ ಪ್ರಯಾಣಿಕರನ್ನು ಮಾತನಾಡಿಸಿದ್ದಾರೆ. ಹಾತ್ ನಿಲ್ದಾಣದಲ್ಲಿ ಇಳಿದ ದೇವೇಗೌಡರು ಬಳಿಕ ಅಲ್ಲಿಂದ ಲೋಕಕಲ್ಯಾಣ ಮಾರ್ಗ ನಿಲ್ದಾಣಕ್ಕೆ ವಾಪಸಾಗಿದ್ದಾರೆ.


ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ದೆಹಲಿ ಮೆಟ್ರೋದಲ್ಲಿ ಪ್ರಯಾಣ ಮಾಡಿದರು. ಅವರ ಪುತ್ರಿ ಡಾ.ಅನಸೂಯ ಹಾಗೂ ಸೊಸೆ ಜತೆಗಿದ್ದರು. ಈ ವೇಳೆ ದೇವೇಗೌಡರು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ದೆಹಲಿ ಮೆಟ್ರೋ ಪ್ರಯಾಣದ ಬಳಿಕ ದೇವೇಗೌಡರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದು, ನಾನು ಇಂದು ದೆಹಲಿ ಮೆಟ್ರೋದಲ್ಲಿ ಪ್ರಯಾಣ ಮಾಡಿದ್ದೇನೆ. ಈ ಮೆಟ್ರೋ ಸೌಲಭ್ಯ ನಮ್ಮ ಸಹೋದರ, ಸಹೋದರಿಯರಿಗೆ ಹೇಗೆ ನೆರವಾಗುತ್ತಿದೆ ಎಂಬುದನ್ನು ಅರಿತುಕೊಳ್ಳಲು ಪ್ರಯಾಣ ಮಾಡಿದ್ದೇನೆ. ಇದೇ ವೇಳೆ ನನ್ನ ಜೊತೆಗೆ ಆಗಮಿಸಿದ ಅಧಿಕಾರಿಗಳಿಗೆ ತುಂಬು ಹೃದಯದ ಧನ್ಯವಾದಗಳು ಎಂದು ದೇವೇಗೌಡರು ಹೇಳಿದ್ದಾರೆ.

ಆಹಾರ ಉದ್ಯಮಕ್ಕೆ ಸರ್ಕಾರದ ಬೆಂಬಲಕ್ಕೆ ಹೋಟೆಲ್ ಮಾಲೀಕರ ಸಂಘ ಆಗ್ರಹ

ಮೈಸೂರು,ಆ.4(ಎಸ್‌ಬಿಡಿ)– ಆಹಾರ ಉದ್ಯಮಕ್ಕೆ ಸರ್ಕಾರ ಭದ್ರತೆ ಕಲ್ಪಿಸಬೇಕು ಎಂದು ರಾಜ್ಯ ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಗೋಪಾಲಕೃಷ್ಣ ಶೆಟ್ಟಿ(ಜಿಕೆ ಶೆಟ್ಟಿ) ಆಗ್ರಹಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಮೈಸೂರು ಹೋಟೆಲು ಮಾಲೀಕರ ಸಂಘದ ಸದಸ್ಯರೊಂದಿಗೆ ರಾಜ್ಯ ಘಟಕದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅತಿಥಿ ದೇವೋಭವ ಮೌಲ್ಯದೊಂದಿಗೆ ನಡೆಯುತ್ತಿರುವ ಆಹಾರ ಉದ್ಯಮಕ್ಕೆ ಸರ್ಕಾರ ಭದ್ರತೆ ಕಲ್ಪಿಸುವುದು ಅತ್ಯವಶ್ಯವಾಗಿದೆ. ಉದ್ಯಮಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಾಗ ಅವರಿಗೆ ನೆರವು ನೀಡಿ, ಪ್ರೋತ್ಸಾಹಿಸುವ ವ್ಯವಸ್ಥೆ ನಿರ್ಮಾಣವಾಗಬೇಕಿದೆ ಎಂದು ಆಶಿಸಿದರು.

ಸರ್ಕಾರದ ಭದ್ರತೆ ಜೊತೆಗೆ ಉದ್ಯಮಿಗಳು ಪರಸ್ಪರ ಸಹಾಯ ಮಾಡಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ಹಾಗೂ ತಾಲೂಕು ಸಂಘಗಳು ಹೆಚ್ಚು ಸಕ್ರಿಯವಾಗಬೇಕು. ಆಹಾರ ವಲಯದ ಉದ್ಯಮಿಗಳನ್ನು ಒಗ್ಗೂಡಿಸಿ ಸಂಘಟನೆ ಗಟ್ಟಿಗೊಳಿಸಬೇಕು. ಒಗ್ಗಟ್ಟಿನಲ್ಲಿರುವ ಬಲ, ಸಂಘಟನೆ ಮೂಲಕ ವ್ಯಕ್ತವಾಗಬೇಕು. ರಾಜ್ಯ ಸಂಘ ಸಾಕಷ್ಟು ಕೆಲಸಗಳನ್ನು ಮಾಡುತ್ತಿದ್ದು, ಎಲ್ಲರೂ ಸೇರಿ ಉದ್ಯಮವನ್ನು ಮತ್ತಷ್ಟು ಬೆಳೆಸಬೇಕಿದೆ. ಈ ನಿಟ್ಟಿನಲ್ಲಿ ಹಲವು ಇಲಾಖೆಯಲ್ಲಿರುವ ಕಾನೂನು–ನಿಯಮಗಳನ್ನು ತಿದ್ದುಪಡಿಗೆ ಸರ್ಕಾರವನ್ನು ಒತ್ತಾಯಿಸಬೇಕಿದೆ ಎಂದು ತಿಳಿಸಿದರು.


ಮೈಸೂರಿನಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯ ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಗೋಪಾಲಕೃಷ್ಣ ಶೆಟ್ಟಿ ಅವರನ್ನು ಮೈಸೂರು ಸಂಘದಿಂದ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಕೆ ಶೆಟ್ಟಿ ಅವರನ್ನು ಮೈಸೂರು ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಮೈಸೂರು ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ರಾಜ್ಯ ಉಪಾಧ್ಯಕ್ಷರಾದ ಮಧುಕರ್ ಎಂ.ಶೆಟ್ಟಿ, ರವಿಶಾಸ್ತ್ರಿ, ರಾಜ್ಯ ಹೋಟೆಲು ಮಾಲೀಕರ ಸಂಘದ ಮಾಜಿ ಅಧ್ಯಕ್ಷ ಎಂ.ರಾಜೇಂದ್ರ, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ, ಮೈಸೂರು ಹೋಟಲು ಪತ್ತಿನ ಸಹಕಾರ ಸಂಘ ಅಧ್ಯಕ್ಷ ಎನ್.ವಿ.ಹೆಗಡೆ, ಉಪಾಧ್ಯಕ್ಷ ಉಗ್ರಯ್ಯ, ಕಾರ್ಯದರ್ಶಿ ಎ.ಆರ್.ರವೀಂದ್ರ ಭಟ್, ಕೆ.ಪ್ರಕಾಶ್ ಶೆಟ್ಟಿ, ಸುಬ್ರಮಣ್ಯತಂತ್ರಿ, ಬಾಸ್ಕರ್ ಶೆಟ್ಟಿ, ಸತೀಶ್ ಪಾಂಡುರಂಗ, ಪ್ರಭಾಕರ್, ಆನಂದಶೆಟ್ಟಿ, ಜಿ.ಅಶೋಕ್, ಅನಿಲ್ ಕುಮಾರ್, ಮಹಾಲಕ್ಷ್ಮೀ ಸ್ವೀಟ್ಸ್ ಮಾಲೀಕ ಶಿವಕುಮಾರ್, ಮಹೇಶ್ ಕಾಮತ್, ಹೇಮಂತ್‌ಕುಮಾರ್, ಸುಜಿತ್ ಕುಮಾರ್, ರಾಮ್‌ಮೋಹನ್, ಪಿ.ಎನ್.ಕುಂದರ್, ಎ.ಎಸ್.ಸತೀಶ್ ಮತ್ತಿತರರಿದ್ದರು.

ಕೆ.ರುದ್ರೇಶ್ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ

ಮೈಸೂರು, ಆ.4(ಆರ್‌ಕೆ)–ಮೈಸೂರಿನಲ್ಲಿ ತೋಟಗಾರಿಕಾ ಇಲಾಖೆ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಕೆ.ರುದ್ರೇಶ್ ಅವರನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ವರ್ಗಾಯಿಸಲಾಗಿದೆ. ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ ಅವರನ್ನು ಬೇರೆಡೆಗೆ ವರ್ಗಾಯಿಸಲಾಗಿದೆಯಾದರೂ ಸ್ಥಳ ನಿಯೋಜಿಸಿಲ್ಲ.



ಕೆ.ರುದ್ರೇಶ್

ಪಿಹೆಚ್.ಡಿ ಪದವಿ

ಮೈಸೂರು: ಡಾ.ಪ್ರತಿಭಾ ಮುದ್ಲಿಯರ್ ಅವರ ಮಾರ್ಗದರ್ಶನದಲ್ಲಿ ಕರುಣ ಲಕ್ಷ್ಮೀ ಹಿಂದಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.08.2024 ಸೋಮವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024 ರಿಂದ 12.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಆಶ್ಲೇಷ ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ 7.30ರವರೆಗೆ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ಮತ್ತು ಬೆಳಗ್ಗೆ 9 ಗಂಟೆಯಿಂದ ಕರ್ಕಾಟಕ ಚಿಕಿತ್ಸಾ (ಮಾನ್‌ಸೂನ್) ವರ್ಷ ಋತುವಿನ ಕಾಲದ ವಿಶೇಷ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಬೆಳಗ್ಗೆ ಗರುಡಧ್ವಜ ಸ್ಥಾಪನೆ ಹಾಗೂ ಲೋಕಾರ್ಪಣೆ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ, ಶ್ರೀ ಸುತ್ತೂರು ಮಠ, ಮೈಸೂರು :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮ, ಬೆಳಗ್ಗೆ ವಿಶೇಷ ಪೂಜೆ, ಸಂಜೆ 6ರಿಂದ ಸಾಮೂಹಿಕ ಪ್ರಾರ್ಥನೆ, ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿಯ ಪ್ರವಚನ, ಡಾ.ಕೆ.ಅನಂತರಾಮು ಹಾಗೂ ಡಾ.ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ವಿದುಷಿ ಎಂ.ವಿ.ಶುಭಾ ರಾಘವೇಂದ್ರ, ವಸಂತ ವೆಂಕಟೇಶ್ ಮತ್ತು ಧರಿತ್ರಿ ಆನಂದರಾವ್ ಅವರಿಂದ ವಾಚನ, ಸಂಜೆ 6 ಗಂಟೆಗೆ ಕಾರ್ಯಕ್ರಮ ಉದ್ಘಾಟನೆ, ದಿವ್ಯ ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಹರವೆ ಶ್ರೀ ವಿರಕ್ತ ಮಠದ ಶ್ರೀ ಸರ್ಪ ಭೂಷಣ ಸ್ವಾಮಿಗಳು, ಉದ್ಘಾಟನೆ: ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಸ್ಥಳ: ಮೈಸೂರು ಶ್ರೀ ಸುತ್ತೂರು ಶಾಖಾ ಮಠ.

■ **ಆದಿಕರ್ನಾಟಕ (ಛಲವಾದಿ) ಮಹಾಸಂಸ್ಥಾನ ಗುರುಪೀಠ, ಅಶೋಕಪುರಂ, ಮೈಸೂರು :** ಧಾರವಾಡದ ಕರ್ನಾಟಕ ವಿವಿಯ ತತ್ವಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಮತ್ತು ಯೋಗ ಅಧ್ಯಯನ ವಿಭಾಗದ ಸಂಯೋಜಕರಾದ ಡಾ.ಜ್ಞಾನ ಸ್ವರೂಪಾನಂದ ಸ್ವಾಮೀಜಿ ಅವರು ನೂತನವಾಗಿ ಸನ್ಯಾಸ ಸ್ವೀಕರಿಸುವ ಕಾರ್ಯಕ್ರಮ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನವನ, ಅಶೋಕಪುರಂ, 9.30ಕ್ಕೆ, ಬೆಳಗ್ಗೆ 10ಕ್ಕೆ ಗೌತಮ ಬುದ್ಧವಿಹಾರ, ಅಶೋಕ ವೃತ್ತ.

■ **ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಮೈಸೂರು ಜಿಲ್ಲಾ ಸಮಿತಿ :** ಹೆಲನ್ ಕೆಲ್ಲರ್ ಕನ್ನಡ ಅವತರಣಿಕೆ ಪುಸ್ತಕ ಬಿಡುಗಡೆ, ಸ್ಥಳ: ಶ್ರೀಕಾಂತ ಕಾಲೇಜು, ಆಡಿಟೋರಿಯಂ, ಮಧ್ಯಾಹ್ನ 12 ಗಂಟೆಗೆ.

■ **ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾಧಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ಣಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ.

■ **ವ್ಯವಸ್ಥಾಪಕರು:** ಮೃದಂಗ ವಿದ್ವಾನ್ ತುಮಕೂರು ಟಿ.ವಿ.ಭದ್ರಾಚಾರ್ ಹಾಗೂ ಶ್ರೀ ಗುರು ಕಾರೈಕುಡಿ ಡಿ.ಆರ್.ಮಣಿ ಅವರ ಸಂಸ್ಮರಣ ವಿಶೇಷ ಸಂಗೀತ ಕಾರ್ಯಕ್ರಮ–2024, ಸಂಜೆ 5.30ಕ್ಕೆ ದ್ವಂದ್ವ ನಾದಸ್ವರ ವಾದನ, ನಾದಸ್ವರ–ವಿದ್ವಾನ್ ಎಂ.ಎನ್.ಗಣೇಶ್, ವಿದ್ವಾನ್ ಎಂ.ಜಿ.ಶ್ರೀಧರ್, ತವಿಲ್–ವಿದ್ವಾನ್ ವಿನಯ್ ಪಿ, ವಿದ್ವಾನ್ ಲಿಖಿತ್, ಸಂಜೆ 6.30ಕ್ಕೆ ವಿಶೇಷ ಸಂಗೀತ ಕಾರ್ಯಕ್ರಮ, ಕೊಳಲು–ವಿದ್ವಾನ್ ಅಮಿತ್ ನಾಡಿಗ್, ಮೃದಂಗ–ವಿದ್ವಾನ್ ಬಿ.ಸಿ.ಮಂಜುನಾಥ್, ಘಟಂ–ವಿದ್ವಾನ್ ಶರತ್ ಕೌಶಿಕ್, ಮೋರ್ಸಿಂಗ್–ವಿಕ್ರಮ್ ಭಾರದ್ವಾಜ್, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪ ರಾಮಮಂದಿರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ? ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಅಂಬಯ್ಯ ನುಲಿ, ಕೆ.ಪಿ.ರೇವತಿ, ವ್ಯಾಖ್ಯಾನ: ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) 1. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಐ.ಎನ್.ಎ ರಾಮರಾವ್ ಅವರೊಂದಿಗೆ ಹೆಚ್.ಎಸ್.ವೇಣುಗೋಪಾಲ್ ಅವರು ನಡೆಸಿದ್ದ ಸಂವಾದ. 2. ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಎಂ.ಎನ್.ಪಾರ್ವತಮ್ಮ ಅವರೊಂದಿಗೆ ಮಂಜುಳಾ ಪುರಾಣಿಕ್ ಅವರು ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಜಿ.ಶ್ರೀಧರ–ನಾಗಸ್ವರ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ ಮತ್ತು ಕೀರ್ತನಾ ವಿ, 12.30–ದೇವರನಾಮ, ಕಮಲಶ್ರೀ. ಜಿ. ಕೆ, 12.45–ನಮ್ಮ ಆರೋಗ್ಯ–ಹದಿಹರೆಯದವರ ದಿನಾಚರಣೆ ಸಂಬಂಧವಾಗಿ ವಿಶೇಷ ಕಾರ್ಯಕ್ರಮ–'ಹದಿಹರೆಯದ ಹೆಣ್ಣುಮಕ್ಕಳ ಮಾನಸಿಕ ಸಮಸ್ಯೆಗಳು ಮತ್ತು ಆಪ್ತ ಸಲಹೆ' ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮನೋವಿಜ್ಞಾನ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥ ಡಾ.ಬಿ.ಎನ್.ರವೀಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.20–ಭಾವಗೀತೆಗಳು, 2.40–ಒಲಿಂಪಿಕ್ಸ್ ಕ್ರೀಡಾಕೂಟ–2024 ದಿನದಾಟದ ಮುಖ್ಯಾಂಶಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಂಬೆ ಸಹೋದರಿಯರು–ಹಾಡುಗಾರಿಕೆ, 4.00–ಮಹಿಳಾರಂಗ: "ನಾನು ನನ್ನ ಕಂಪನಿ", ವಿಷಯ: ಈವೆಂಟ್ ಮ್ಯಾನೇಜ್‌ಮೆಂಟ್ ನಡೆಸುತ್ತಿರುವ ಉಷಾ. ಆರ್.ಪ್ರಸಾದ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಎಂ.ಎಸ್.ಭಾರತೀ, 4.45–ಹಿಂದಿ ಪಾಠ–ಶಾಂತಾ ಡಿ. ಕಿಣಿ, 6.50–ಕೃಷಿರಂಗ: ಹತ್ತಿಯ ಸಮಗ್ರ ಪೀಡೆ ನಿರ್ವಹಣೆ. ಈ ಕುರಿತು ಚಾಮರಾಜನಗರ ತಾಲೂಕು ಹರದನಹಳ್ಳಿಯ ಅಖಿಲ ಭಾರತ ಹತ್ತಿ ಸುಸಂಘಟಿತ ಸಂಶೋಧನಾ ಯೋಜನೆಯ ಸಹ ಪ್ರಾಧ್ಯಾಪಕ ಡಾ.ಶಿವರಾಯ್ ನವಿ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡದಲ್ಲಿ ಭಾಷಣ, 8.15–ಸಂಸತ್ ಸಮೀಕ್ಷಾ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎಸ್.ರಾಮನಾಥನ್–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ, 10.30–ಸವಿನೆನಪು

■ **ಅವಧೂತ ದತ್ತ ಪೀಠ :** ಅವಧೂತ ದತ್ತ ಪೀಠಾಧಿಪತಿ ಜಗದ್ಗುರು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣ ಮಾಸ ಪ್ರಯುಕ್ತ ಏಕಾದಶಿ ರುದ್ರಾಭಿಷೇಕ, ಆಶ್ಲೇಷ ಬಲಿ ಪೂಜೆ, ಸಂಪೂರ್ಣ ಶ್ರೀ ಮಹಾರಾಮಾಯಣ ಮಹಾಯಾಗ (ಶ್ರೀ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ), ಸ್ಥಳ: ಆಶ್ರಮದ ಆವರಣ, ಊಟಿ ರಸ್ತೆ, ಬೆಳಗ್ಗೆಯಿಂದ.

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ), ಕದಳಿ ಮಹಿಳಾ ವೇದಿಕೆ (ಮೈಸೂರು) :** ವಚನ ಶ್ರಾವಣ–ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಉದ್ಘಾಟನೆ ಮತ್ತು ಕಿರುಹೊತ್ತಿಗೆ ಲೋಕಾರ್ಪಣೆ, ಪ್ರಾಧ್ಯಾಪಕರಾದ ಡಾ.ಡಿ.ಎಸ್.ಗುರು ಅವರಿಂದ 'ಒಲವಿಲ್ಲದ ಪೂಜೆ, ಸ್ನೇಹವಿಲ್ಲದ ಧರ್ಮ' ಕುರಿತು ಉಪನ್ಯಾಸ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣ, ಕುವೆಂಪುನಗರ, ಸಂಜೆ 5.30ರಿಂದ

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಹಿಮಾಲಯ ಪ್ರತಿಷ್ಠಾನ, ಶ್ರೀ ಪರಮ ಹಂಸ ಯೋಗ ಮಹಾ ವಿದ್ಯಾಲಯ:** ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮೀಜಿ ಸಂಸ್ಮರಣೆ, ಉದ್ಘಾಟನೆ: ಯೋಗಿ ಶ್ರೀ ಗುರುರಾಜ್ ರಾವ್, ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಡಾ.ಕೆ.ರಘುರಾಂ ವಾಜಪೇಯಿ, ಅಧ್ಯಕ್ಷತೆ: ಎಂಕೆಬಿಎಂಎಸ್ ಉಪಾಧ್ಯಕ್ಷೆ ಡಾ.ಬಿ.ಆರ್.ನಟರಾಜ್ ಜೋಯಿಸ್, ಸ್ಥಳ: ಶ್ರೀ ಪರಮಹಂಸ ಯೋಗ ಮಹಾ ವಿದ್ಯಾಲಯ, ರಾಮಕೃಷ್ಣನಗರ, ಯೋಗ ಉದ್ಯಾನದ ಬಳಿ, ಸಂಜೆ 5.30ಕ್ಕೆ

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವ ಪರ ಸಂಘಟನೆಗಳು:** ಬಸವ ಧರ್ಮ ಜಾಗೃತಿ ಅಭಿಯಾನ, ಇಷ್ಟಲಿಂಗಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮ, ಉದ್ಘಾಟನೆ: ಅನ್ನದಾತ ರೈತರಿಂದ, ಸ್ಥಳ: ಶ್ರೀ ಬಸವೇಶ್ವರ ದೇವಸ್ಥಾನ ಆವರಣ, ಮಾದಹಳ್ಳಿ, ಮೈಸೂರು ತಾ. ಸಂಜೆ 5ಕ್ಕೆ.

ಮೈಸೂರು ಚಲೋ V/s ಜನಾಂದೋಲನಾ ಸಮಾವೇಶ; ತಾರಕಕ್ಕೇರಿದೆ ಕುಮಾರಸ್ವಾಮಿ –ಡಿಕೆಶಿ ಟಾಕ್ ಫೈಟ್

ಹೆಣ್ಣು ಮಗಳನ್ನು ಕಿಡ್ನಾಪ್ ಮಾಡಿ, ಬೆದರಿಸಿ ಬೆಂಗಳೂರಿನ ಸದಾಶಿವ ನಗರದ ನಿವೇಶನ ಬರೆಸಿಕೊಂಡಿದ್ದಾರೆ

● ನಿಮ್ಮ ವಿಚಾರ ಬಿಚ್ಚಿಟ್ಟರೆ ಪುಟಗಟ್ಟಲೆ ಆಗುತ್ತೆ ● ದಲಿತರ ಭೂಮಿ ಕಬಳಿಸಿದ್ದಾರೆ
● ನಾನು ಪ್ರಾಮಾಣಿಕ ಎಂದು ಅಜ್ಜಯ್ಯನ ಮೇಲೆ ಪ್ರಮಾಣ ಮಾಡಿ

ಬಿಡದಿ, ಆ.4(ಬಿಎಲ್‌ಯು)– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೆಣ್ಣು ಮಗಳೊಬ್ಬಳನ್ನು ಕಿಡ್ನಾಪ್ ಮಾಡಿ, ಬೆದರಿಸಿ ಬೆಂಗಳೂರಿನ ಸದಾಶಿವನಗರದ ನಿವೇಶನ ಬರೆಸಿಕೊಂಡಿದ್ದಾರೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರ ಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಮುಡಾ ಹಾಗೂ ವಾಲ್ಮೀಕಿ ನಿಗಮದ ಹಗರಣದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಬೆಂಗಳೂರಿನಿಂದ ಹಮ್ಮಿಕೊಂಡಿರುವ ಪಾದಯಾತ್ರೆಯ ಎರಡನೇ ದಿನವಾದ ಭಾನುವಾರ ಮೈಸೂರು ಚಲೋಗೆ ಚಾಲನೆ ನೀಡಿ ಮಾತನಾಡಿದ ಅವರು, ನನ್ನ ವಿಚಾರ ಬಿಚ್ಚುತ್ತೀನಿ ಬಿಚ್ತೀನಿ ಅಂದೆಯಲ್ಲಪ್ಪ, ಈಗ ಬಿಚ್ಚು ನೋಡೋಣ ಎಂದು ಡಿ.ಕೆ.ಶಿವಕುಮಾರ್‌ಗೆ ಸವಾಲು ಹಾಕಿದರು.


ನಿಮ್ಮ ವಿಚಾರ ಬಿಚ್ಚಲು ಹೋದರೆ ಪುಟಗಟ್ಟಲೆ ಇದೆ. ಅದನ್ನೆಲ್ಲಾ ಹೇಳುತ್ತಾ ಹೋದರೆ ದೊಡ್ಡ ಕಥೆಯಾಗುತ್ತದೆ. ನಾನೀರುವುದು ಬಿಡದಿಯಲ್ಲಿ, ಆದರೆ ಡಿ.ಕೆ. ಶಿವಕುಮಾರ್ ಅವರೆ ನೀವಿರುವುದು ಗಾಜಿನ ಮನೆಯಲ್ಲಿ ಎಂಬುದನ್ನು ಮರೆಯಬೇಡಿ ಎಂದು ಎಚ್ಚರಿಸಿದರು.

ಅಜ್ಜಯ್ಯನ ಬಗ್ಗೆ ಡಿ.ಕೆ.ಶಿವಕುಮಾರ್‌ಗೆ ಭಕ್ತಿ, ಗೌರವ ಇದೆ. ಹಾಗೆಯೇ ಅಜ್ಜಯ್ಯನ ಬಗ್ಗೆ ನನಗೂ ಕೂಡ ಭಕ್ತಿ ಗೌರವವಿದೆ. ನಾನು ಪ್ರಾಮಾಣಿಕವಾಗಿ ಬೆಳೆದು ಬಂದಿದ್ದೇನೆ ಎಂದು ಅಜ್ಜಯ್ಯನ ಮೇಲೆ ಪ್ರಮಾಣ ಮಾಡುತ್ತೇನೆ.

ಎಷ್ಟು ಮನೆಗಳನ್ನು ಒಡೆದು ನೀವು ಬೆಳೆದಿದ್ದೀರಾ ಎಂಬುವುದು ನನಗೆ ಗೊತ್ತಿದೆ. ಇದು ಸುಳ್ಳು ಎನ್ನುವುದಾದರೆ ಅಜ್ಜಯ್ಯನ ಮುಂದೆ ನಿಂತು ಪ್ರಮಾಣ ಮಾಡುತ್ತೀರಾ? ಎಂದು ಸವಾಲು ಹಾಕಿದ ಕುಮಾರಸ್ವಾಮಿ, ಅನ್ಯಾಯ ಮಾರ್ಗದಲ್ಲಿ ನಡೆದಿರುವ ಡಿ.ಕೆ.ಶಿವಕುಮಾರ್ ಗೆ ಈಗ ಅಜ್ಜಯ್ಯನ ಶಾಪ ಆರಂಭವಾಗಿದೆ ಎಂದು ಹೇಳಿದರು.

ಕಲ್ಲು ಗಣಿಗಾರಿಕೆ ಮಾಡಲು ರಾಮನಗರದ ನೂರಾರು ಎಕರೆ ಭೂಮಿ ಕಬಳಿಸಿದ್ದಾರೆ. ಅದರಲ್ಲೂ ದಲಿತರಿಗೆ ಸೇರಿದ 68 ಎಕರೆ ಜಮೀನು ಲಪಟಾಯಿಸಿದ್ದಾರೆ. ಇಷ್ಟೆಲ್ಲಾ ಅನ್ಯಾಯ ಮಾರ್ಗದಲ್ಲಿ ನಡೆದಿರುವ ಡಿ.ಕೆ.ಶಿವಕುಮಾರ್‌ರಿಂದ ನಾನು ಪಾಠ ಕಲಿಯಬೇಕಿಲ್ಲ ಎಂದು ತಿರುಗೇಟು ನೀಡಿದರು.

ನನ್ನ ಹಾಗೂ ಬಿ.ವೈ.ವಿಜಯೇಂದ್ರ ಬಗ್ಗೆ ಡಿ.ಕೆ.ಶಿವಕುಮಾರ್ ಏಕ ವಂಚನದಲ್ಲಿ ನಿಂದಿಸಿದ್ದಾರೆ. ನಾವು ಕೂಡ ಹಳ್ಳಿ ಮಕ್ಕಳೆ, ನಿಮಗಿಂತಲೂ ಹೆಚ್ಚಾಗಿ ಏಕ ವಚನದಲ್ಲಿ ಮಾತನಾಡಲು ನಮಗೂ ಬರುತ್ತದೆ. ಆದರೆ ಆ ಕೆಳಮಟ್ಟಕ್ಕೆ ನಾವು ಇಳಿಯುವುದಿಲ್ಲ ಎಂದರು.



ಮುಡಾ ಹಾಗೂ ವಾಲ್ಮೀಕಿ ನಿಗಮದ ಹಗರಣದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಹಮ್ಮಿಕೊಂಡಿರುವ ಎರಡನೇ ದಿನದ ಪಾದಯಾತ್ರೆ ಬಿಡದಿಯಿಂದ ಆರಂಭವಾದ ವೇಳೆ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ನಾನು ಸಿನಿಮಾ ವಿತರಕನಾಗಿದ್ದಾಗ ರಾಜಕೀಯಕ್ಕೆ ಬರುವ 15 ವರ್ಷ ಮೊದಲೆ ಬಿಡದಿಯ ಕೇತಗಾಯನ ಹಳ್ಳಿಯಲ್ಲಿ 45 ಎಕರೆ ಜಮೀನು ಖರೀದಿಸಿದ್ದೆ. ಇದನ್ನು ನಾನು ಮುಚ್ಚಿಟ್ಟಿಲ್ಲ. ಯಾರಿಗೂ ಮೋಸ ಮಾಡಿ ಜಮೀನು ಬರೆಸಿಕೊಂಡಿಲ್ಲ. ಇದನ್ನು ಸಾಬೀತು ಮಾಡಿದರೆ ರಾಜಕೀಯದಿಂದ ನಿವೃತ್ತಿ ಹೊಂದುತ್ತೇನೆ ಎಂದು ಕುಮಾರಸ್ವಾಮಿ ಸವಾಲು ಹಾಕಿದರು.

ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಪಾದಯಾತ್ರೆ ನಡೆಸುತ್ತಿದ್ದೇವೆಯೇ ಹೊರತು, ಸರ್ಕಾರದ ಮೇಲಿನ ಅಸೂಹೆಯಿಂದ ಅಲ್ಲ. ಗ್ಯಾರಂಟಿ ಯೋಜನೆಗಳಿಂದ ರಾಜ್ಯವನ್ನು ದರಿದ್ರದತ್ತ ಕೊಂಡೊಯ್ದಿದ್ದಾರೆ. ಹಣ ಮಾಡಲು ಸಚಿವರು ಪೈಪೋಟಿಯಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದರು.

ಗೃಹ ಸಚಿವ ಡಾ.ಪರಮೇಶ್ವರ್ ಅವರಿಗೆ ಒಬ್ಬ ದಲಿತ ಪೊಲೀಸ್ ಅಧಿಕಾರಿಯನ್ನು ರಕ್ಷಣೆ ಮಾಡಲು ಸಾಧ್ಯವಾಗಿಲ್ಲ. ಮೃತ ಪೊಲೀಸ್ ಅಧಿಕಾರಿ ಅದೇ ಸ್ಥಾನದಲ್ಲಿ ಮುಂದುವರೆಯಲು 30 ಲಕ್ಷ ಕೊಡಲು ಬೇಡಿಕೆ ಇಟ್ಟಿದ್ದರಂತೆ. ಒಬ್ಬ ಪೊಲೀಸ್ ಅಧಿಕಾರಿ ರಕ್ಷಣೆ ಮಾಡಲು ಸಾಧ್ಯವಾಗದ ಸರ್ಕಾರಕ್ಕೆ ಜನರನ್ನು ರಕ್ಷಣೆ ಮಾಡಲು ಸಾಧ್ಯವಾಗುವುದೇ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪತ್ನಿ ಹೆಸರಿನಲ್ಲಿ ನಿವೇಶನ ಪಡೆಯಲು ನಮ್ಮ ವಿರೋಧವಿಲ್ಲ. ಆದರೆ ಅಧಿಕಾರ ದುರುಪಯೋಗ ಮಾಡಿಕೊಂಡು ಅಕ್ರಮವಾಗಿ ಮುಡಾ ನಿವೇಶನ ಪಡೆದಿದ್ದಾರೆ. ಇಲ್ಲಿ ನಿಂಗ, ದೇವರಾಜ, ದಲಿತ ಎಂಬ ಪ್ರಶ್ನೆ ಇಲ್ಲ. ಆದರೆ ನಕಲಿ ದಾಖಲಾತಿ ಸೃಷ್ಟಿಸಿ ನಿವೇಶನ ಪಡೆದಿದ್ದಾರೆ. ಇದರಿಂದ ಸಿದ್ದರಾಮಯ್ಯ ಕಾನೂನು ಬಾಹಿರವಾಗಿ ನಿವೇಶನ ಪಡೆದಿರುವುದು ಸ್ಪಷ್ಟ ಎಂದು ಆಪಾದಿಸಿದರು.

ಬಿಜೆಪಿ ಹಾಗೂ ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅನಿವಾರ್ಯವಾಗಿ ಅಧಿಕಾರ ಹಂಚಿಕೆ ಆಗಲಿಲ್ಲ. ಯಡಿಯೂರಪ್ಪ ಅವರಿಗೆ ನಾನು ಯಾವತ್ತೂ ದ್ರೋಹ ಮಾಡಿಲ್ಲ. ಈಗ ನಾವಿಬ್ಬರು ಮತ್ತೆ ಒಂದಾಗಿದ್ದೇವೆ. ನಮ್ಮ ಈ ಮೈತ್ರಿ ಕಾಂಗ್ರೆಸ್ ನಿದ್ದೆ ಗೆಡಿಸಿದೆ. ಈ ಕಾರಣದಿಂದ ಡಿ.ಕೆ.ಶಿವಕುಮಾರ್ ಹೊಟ್ಟೆ ಉರಿ ಅನುಭವಿಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಟೀಕಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಡಾ.ಸಿ.ಎನ್.ಮಂಜುನಾಥ್, ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್, ಮಾಜಿ ಸಚಿವರಾದ ಬಿ.ಶ್ರೀರಾಮುಲು, ಸಿಸಿ. ಪಾಟೀಲ್, ಎ.ಮಂಜು, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಹಲವರು ಪಾದಯಾತ್ರೆಯಲ್ಲಿ ಸಾಗಿದರು.

ಕುಮಾರಸ್ವಾಮಿ ನವರಂಗಿ ಆಟ ರಾಜ್ಯದ ಜನರಿಗೆ ಗೊತ್ತಿದೆ


● ಅಪ್ಪ–ಮಗನ ಬಗ್ಗೆ ಹುಷಾರಾಗಿರು ಎಂದು ಯಡಿಯೂರಪ್ಪ ಹೇಳಿದ್ದರು
● ಬಿಜೆಪಿಯವರನ್ನು ಬ್ಲಾಕ್‌ಮೇಲ್ ಮಾಡಲು ಹೋಗಿದ್ರಿ ● ಎಂಪಿ ಎಲೆಕ್ಷನ್‌ನಲ್ಲಿ ಸುರೇಶ್ ಸೋತಿರಬಹುದು, ಚೆನ್ನಪಟ್ಟಣದಲ್ಲಿ ನಿಮ್ಮನ್ನು ಬಿಡಲ್ಲ: ಡಿ.ಕೆ.ಶಿವಕುಮಾರ ವಾಗ್ದಾಳಿ

ರಾಮನಗರ, ಆ.4– ಭೋವಿ ನಿಗಮ, ಟ್ರಕ್ ಟರ್ಮಿನಲ್ ಹಗರಣದಲ್ಲಿ ಯಾಕೆ ನಿಮ್ಮ ಸಿಎಂ, ಮಂತ್ರಿಗಳು ರಾಜೀನಾಮೆ ಕೊಡಲಿಲ್ಲ? ನಿಮ್ಮ ಪಕ್ಷದವರೇ ಏನು ಹೇಳಿದ್ದರು ಎಂದು ಗೊತ್ತಿಲ್ವ? ಅಮಿತ್ ಶಾ, ಮೋದಿ ಬಗ್ಗೆ ಕುಮಾರಸ್ವಾಮಿ ಏನು ಮಾತಾಡಿದ್ದರು ಎಂದು ನಾವು ತೋರಿಸಬೇಕಾ? ಎಂದು ಬಿಜೆಪಿ ವಿರುದ್ಧ ಡಿಸಿಎಂ ಡಿಕೆ ಶಿವಕುಮಾರ ವಾಗ್ದಾಳಿ ನಡೆಸಿದರು.

ಈ ಹಿಂದೆ ಅಪ್ಪ–ಮಗನ ನಂಬಬೇಡ ಹುಷಾರಾಗಿರು ಎಂದು ಯಡಿಯೂರಪ್ಪ ಹೇಳಿದ್ದರು. ಈಗ ನೀವೇ ಇಬ್ಬರೂ ತಬ್ಬಿಕೊಂಡಿದ್ದೀರಿ. ಕುಮಾರಸ್ವಾಮಿ ಹೇಳ್ತಾರೆ, ನಮ್ಮ ಕುಟುಂಬ ಬೇರೆ, ರೇವಣ್ಣ ಕುಟುಂಬ ಬೇರೆ, ಭಾಗ ಆಗಿಬಿಟ್ಟಿದ್ದೀವಿ ಅಂತಾ. ನಾನು ಪೆನ್‌ಡ್ರೈವ್ ಹಂಚಿದ್ದೇನೆಂದು ಹೇಳಿದ್ದರಿ. ನಾನು ಇಂತಹ ನೀಚ ಕೆಲಸ ಮಾಡುವುದಿಲ್ಲ. ಏನಿದ್ದರೂ ನಾನು ಫೇಸ್ ಟು ಫೇಸ್ ಫೈಟರ್. ನನ್ನ ವಿರುದ್ಧ ಒಮ್ಮೆ ಸೋತಿದ್ರಿ, ಬೇಕಾದರೆ ಇನ್ನೊಮ್ಮೆ ಫೈಟ್ ಮಾಡೋಣ ಬಾ ಎಂದು ಕುಮಾರಸ್ವಾಮಿಗೆ ಸವಾಲು ಹಾಕಿದರು.

ಮುಂದೆ ಚನ್ನಪಟ್ಟಣ ಎಲೆಕ್ಷನ್ ಬರುತ್ತೆ ಯಾರೇ ಅಭ್ಯರ್ಥಿ ಆದರೂ ನಾನು, ಸಿದ್ದರಾಮಯ್ಯ ಅವರೇ ಅಭ್ಯರ್ಥಿ ಅಂತಲೇ ತಿಳ್ಕೊಳ್ಳಿ. ಇಡೀ ದೇಶದ ಜನ ನಿಮ್ಮನ್ನು ನೋಡ್ತಾ ಇದ್ದಾರೆ. ನಾವೆಲ್ಲಾ ಮೇಕೆದಾಟು ಪಾದಯಾತ್ರೆ ಮಾಡಿದ್ವಿ. ನೀವು ಪಾಪ ವಿಮೋಚನೆ ಮಾಡಿಕೊಳ್ಳಲು ಪಾದಯಾತ್ರೆ ಮಾಡ್ತಾ ಇದ್ದೀರಿ. ನಮ್ಮ ಸರ್ಕಾರ ಬಂದರೆ ಐದೇ ನಿಮಿಷಕ್ಕೆ ಮೇಕೆದಾಟು ಯೋಜನೆಗೆ ಸೈನ್ ಹಾಕ್ತೀನಿ ಅಂದ್ರಿ ಅಧಿಕಾರಕ್ಕೆ ಬಂದಿದೆ ನೀವು ಮಂತ್ರಿಗಳೂ ಆಗಿದ್ದೀರಿ ಹೇಳಿ ಈಗ ಮೇಕೆದಾಟುಗೆ ಅನುಮತಿ ಕೊಡಿಸಿದ್ರಾ ಕುಮಾರಸ್ವಾಮಿ ಅವರೇ ಎಂದು ಪ್ರಶ್ನಿಸಿದರು.

ರಾಜ್ಯದ ಜನರು ಮುಂದೆ ಇವರ ನವರಂಗಿ ಬಣ್ಣ ನೋಡಬೇಕು. ಮಂಡ್ಯ ಸಮಾವೇಶದಲ್ಲಿ ದೊಡ್ಡ ಸ್ಕ್ರೀನ್ ಹಾಕಿ ಇವರು ಹೇಳಿರೋ ಸ್ಟೇಟ್ ಮೆಂಟ್ ಜನ ನೋಡಬೇಕು. ಯಡಿಯೂರಪ್ಪ ಅವರೇ ನೀವು ಅಂದು ಯಾಕೆ ಕಣ್ಣೀರು ಹಾಕಿದ್ರಿ ಅಂತಾ ಹೇಳಬೇಕು. ಯಾರು ರಾಜೀನಾಮೆ ಕೊಡಿಸಿದ್ದು ಅನ್ನೋದು ತಿಳಿಸಬೇಕು. ನಾವು ನಿಮ್ಮ ಮುಂದೆ ಪ್ರತಿದಿನ ಮೂರು ಪ್ರಶ್ನೆಗಳನ್ನು ಕೇಳ್ತಿದ್ದೀವಿ ಉತ್ತರ ಕೊಡಿ ನೋಡೋಣ. ಕೊವಿಡ್ ಸಂದರ್ಭದಲ್ಲಿ ಎಷ್ಟು ಲೂಟಿ ಹೊಡೆದಿದ್ದೀರಿ?



ನಾನು ಹೇಳಿರೋದರಲ್ಲಿ ಏನು ಸುಳ್ಳು ಉತ್ತರ ಕೊಡಬೇಕಲ್ವಾ? ಎಷ್ಟು ಜನಕ್ಕೆ ಸೈಟ್ ಕೊಟ್ಟಿದ್ದೀರಿ, ಮನೆ ಕೊಟ್ಟಿದ್ದೀರಿ, ಕಾರ್ಯಕರ್ತರಿಗೆ ಸ್ಥಾನ ಕೊಟ್ಟಿದ್ದೀರಿ. ಬಗರ್ ಹುಕ್ಕುಂ ಸಾಗುವಳಿಯಲ್ಲಿ ಸೈಟ್ ಹಂಚಿದ್ದೀರಾ, ಎಷ್ಟು ದುಡ್ಡು ತಂದು ಅಭಿವೃದ್ಧಿ ಮಾಡಿದ್ದೀರಿ ಹೇಳಬೇಕಲ್ವಾ? ಸುಮ್ನೆ ಅಧಿಕಾರ ಉಪಯೋಗಿಸಿಕೊಂಡು ಜನರಿಗೆ ಯಮಾರಿಸಬಾರದು ಅಲ್ವಾ. ಅವರ ಋಣ ತೀರಿಸಬೇಕು. ಎಲ್ಲರ ಪಟ್ಟಿ ಬಿಡುಗಡೆ ಮಾಡಬೇಕು ಅಲ್ವಾ, ಟೈಮ್ ಕೊಟ್ಟಿದ್ದೀನಿ ಎಲ್ಲಾ ದಾಖಲೆ ಕೊಡಲಿ ಇದನ್ನೆಲ್ಲಾ ಚರ್ಚೆ ಮಾಡೋಣ ಎಂದು ಸವಾಲು ಹಾಕಿದರು.

ಅಜ್ಜಯ್ಯನ ಮೇಲೆ ಆಣೆ ಮಾಡಿ ಹೇಳಲಿ ಪ್ರಾಮಾಣಿಕವಾಗಿ ಆಸ್ತಿ ಮಾಡಿದ್ದಾರಾ ಎಂಬ ಎಚ್‌ಡಿಕೆ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್, ಅದಕ್ಕೆ ಒಳ್ಳೆಯ ವೇದಿಕೆ ಸಿದ್ಧಪಡಿಸಬೇಕು. ಸುಮ್ಮನೆ ಅಲ್ಲಿ ಇಲ್ಲಿ ಮಾತನಾಡೋದಲ್ಲ. ಎಲ್ಲ ದಾಖಲೆಗಳಲ್ಲಿ ಉಳಿಯಬೇಕು. ಇದೆಲ್ಲ ಪಬ್ಲಿಕ್ ಡಿಬೇಟ್‌ನಲ್ಲಿ ಚರ್ಚೆ ಆಗಬೇಕು. ಯಾವುದಾದರೂ ಚಾನೆಲ್‌ನಲ್ಲಿ ಮಾಡಬೇಕು. ಇಲ್ಲವಾದಲ್ಲಿ ಅಸೆಂಬ್ಲಿಯಲ್ಲಿ ಮಾತನಾಡೋಣ. ಅವರ ಸಹೋದರ ಅಸೆಂಬ್ಲಿಯಲ್ಲಿ ಇದ್ದಾರೆ ಅವರ ಕೈಯಲ್ಲೇ ಉತ್ತರ ಕೊಡಿಸಲಿ. ನಾನು ಎಲ್ಲದಕ್ಕೂ ರೆಡಿ ಇದ್ದೇನೆ. ಅದಕ್ಕಾಗಿಯೇ ಇಷ್ಟೆಲ್ಲ ಪ್ರಶ್ನೆಗಳನ್ನು ಕೇಳಿದ್ದೇನೆ. ಅವರ ಪಾಪದ ಕೊಡ ತುಂಬಿ ತುಳುಕಿ ಜನ ಯಾಕೆ ಓಡಿಸಿದ್ದಾರೆ ಅಂತಾ ಉತ್ತರ ಕೊಡಪ್ಪ ಅಂತಾ ಕೇಳಿದ್ದೀನಿ ಎಂದರು.

ಕೋವಿಡ್ ಸಮಯದಲ್ಲಿ ಕ್ಷೇತ್ರಕ್ಕೆ ಕುಮಾರಸ್ವಾಮಿ ಬಂದಿದ್ರಾ, ಬಿಜೆಪಿ ಅವರು ಬಂದಿದ್ರಾ? ಇಲ್ಲ. ಮನೆ ಮನೆಗೆ ಬಂದಿದ್ದು ನಾನು, ಡಿಕೆ ಸುರೇಶ್ ಇಬ್ಬರೇ. ನಿಮ್ಮದು ಟೂರಿಂಗ್ ಟಾಕೀಸ್ ರಾಜಕಾರಣ. ಮಧುಗಿರಿ, ಮಂಡ್ಯ, ಚಿಕ್ಕಬಳ್ಳಾಪುರ, ರಾಮನಗರ, ಚನ್ನಪಟ್ಟಣ ಎಲ್ಲಾ ಕಡೆ ಹೋಗಿದ್ದೀರಿ. ಹಿಂದೆ ಬಿಜೆಪಿಯವರನ್ನೇ ಬ್ಲಾಕ್ ಮೇಲ್ ಮಾಡೋಕೆ ಹೋಗಿದ್ರಿ ಪಾಪ ಬಿಜೆಪಿಯವ್ರು ಯೋಜನೆ ಮಾಡಿದ್ರು, ಮೈಸೂರು ಭಾಗದಲ್ಲಿ ಜನ ಬರೊಲ್ಲ ಅಂದು ನಿಮ್ಮ ಜೊತೆ ಸೇರಿ ಅವರು ಪಾದಯಾತ್ರೆ ಮಾಡ್ತಾ ಇದ್ದಾರೆ ಅಷ್ಟೇ. ನಿಮ್ಮ ಅಣ್ಣನ ಮಕ್ಕಳ ಹಗರಣ ನಡೀತಲ್ಲ ಹಾಸನದಲ್ಲಿ ಯಾಕೆ ಬಿಜೆಪಿಯವರು ಚರ್ಚೆ ಮಾಡಲಿಲ್ಲ. ಗಂಡಸ್ತನದ ಬಗ್ಗೆ ಎಲ್ಲಾ ಮಾತಾಡಿದ್ರಲ್ಲ ಪಾಪ ಆ ಹೆಣ್ಣು ಮಕ್ಕಳ ಜೀವನ ಹಾಳು ಮಾಡಿದ್ದು ಯಾರು ಅನ್ನೋದು ಹೇಳಬೇಕಲ್ವಾ? ನಿಮ್ಮ ಅಂಗಡಿ ಎಲ್ಲ ನನಗೆ ಗೊತ್ತಿದೆ. ನೀವು ಫ್ಯಾಕ್ಟರಿಗಳನ್ನು ಓಪನ್ ಮಾಡಿ ಜನರಿಗೆ ಒಂದು ಸೈಟ್ ಕೊಡಲಿಲ್ಲ, ಕೆಲಸ ಕೊಡಲಿಲ್ಲ ನೀವು ಆಯ್ತು ನಿಮ್ಮ ಕುಟುಂಬ ಆಯ್ತು ಅನ್ನೋ ರೀತಿ ಇದ್ದೀರಿ ಅಲ್ವ? ಎಂದು ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು.


ಚನ್ನಪಟ್ಟಣದಲ್ಲಿ ಜಮೀನು ಹುಡುಕಿದ್ದೇವೆ. ಬಡವರಿಗೆ ಸೈಟ್ ಕೊಡಲು ಜಾಗ ಗುರುತು ಮಾಡಿದ್ದೇವೆ. ಚನ್ನಪಟ್ಟಣ ಅಭಿವೃದ್ಧಿಗೆ 100 ಕೋಟಿ ಕೊಡಲು ಸಿಎಂ ಒಪ್ಪಿದ್ದಾರೆ. ಬಡಜನರಿಗೆ ಜಮೀನು ಮಂಜೂರು ಮಾಡಿ ಕೊಡ್ತೇವೆ. ಎಂಪಿ ಎಲೆಕ್ಷನ್‌ನಲ್ಲಿ ಸುರೇಶ್ ಸೋತಿರಬಹುದು. ಚನ್ನಪಟ್ಟಣದಲ್ಲಿ 85 ಸಾವಿರ ಮತ ನಮಗೆ ಕೊಟ್ಟಿದ್ದೀರಿ. ನಿಮ್ಮನ್ನು ಬಿಡೋ ಪ್ರಶ್ನೆಯೇ ಇಲ್ಲ. ನಿಮ್ಮ ಕೈ ಹಿಡಿಯುತ್ತೇವೆ. ಯಾರು ಏನೇ ಮಾತಾಡಿದ್ರೂ ತಲೆ ಕೆಡಿಸಿಕೊಳ್ಳಬೇಡಿ ಎಂದು ಚನ್ನಪಟ್ಟಣ ಜನರಿಗೆ ಭರವಸೆ ನೀಡಿದರು.

ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾಗಿ ಕೆ.ಸಿ.ಶೌಕತ್ ಪಾಷಾ



ಮೈಸೂರಿನ ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾಗಿ ಮಾಜಿ ಕಾರ್ಪೋರೇಟರ್ ಕೆ.ಸಿ.ಶೌಕತ್ ಪಾಷಾ ಮತ್ತು ಉಪಾಧ್ಯಕ್ಷರಾಗಿ ಗುಲಾಂ ರಬ್ಬಾನಿ ಅವಿರೋಧವಾಗಿ ಆಯ್ಕೆಯಾದರು. ಶನಿವಾರ ನಡೆದ ಚುನಾವಣೆಯಲ್ಲಿ ಇವರೊಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾ ಅಧಿಕಾರಿ ಸಿ.ಪ್ರಸಾದ್ ಅವರು ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಹರೀಶ್‌ಗೌಡರಿಗೆ ಅಭಿನಂದನೆ



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಎಂಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಚಂದ್ರಶೇಖರ್ ಅಭಿನಂದಿಸಿದರು. ಈ ವೇಳೆ ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ರಾಯಪ್ಪ, ನಗರ ಪಾಲಿಕೆ ಮಾಜಿ ಸದಸ್ಯ ಸುನಂದ ಕುಮಾರ್, ಕೈಲಾಸಪುರಂ ಮಂಜು ಮತ್ತಿತರರಿದ್ದರು.

ಮನೆ ಮನೆಗೆ ಶರಣ ಸಂದೇಶ

ಮೈಸೂರು, ಆ.4(ಎಸ್‌ಪಿಎನ್)– ಕದಳಿ ಮಹಿಳಾ ವೇದಿಕೆ ಹಾಗೂ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಸಹಯೋಗದೊಂದಿಗೆ ಸೋಮವಾರ ಸಂಜೆ 5.30ಕ್ಕೆ ಮನೆ ಮನೆಗೆ ಶರಣ ಸಂದೇಶ ಸಾರುವ ವಚನ ಶ್ರಾವಣ ಕಾರ್ಯಕ್ರಮ ಕುವೆಂಪುನಗರ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಉದ್ಘಾಟನೆಗೊಳ್ಳಲಿದೆ.

ಈ ಕಾರ್ಯಕ್ರಮವನ್ನು ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸಮ್ಮುಖದಲ್ಲಿ ಮೈಸೂರು ವಿವಿ ಗಣಕ ವಿಜ್ಞಾನ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಉದ್ಘಾಟಿಸಲಿದ್ದಾರೆ. ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಸುಜಾತ ಶಿವಪ್ರಕಾಶ್, ಕಾರ್ಯದರ್ಶಿ ಟಿ.ಎಸ್. ಕುಮಾರಸ್ವಾಮಿ ಉಪಸ್ಥಿತರಿರುತ್ತಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮುಂದುವರಿದ ಗೆಲುವಿನ ಓಟ

ಗ್ರೇಟ್ ಬ್ರಿಟನ್ ಮಣಿಸಿ ಸೆಮೀಸ್‌ಗೆ ಲಗ್ಗೆ ಹಾಕಿದ ಭಾರತ

ಪ್ಯಾರಿಸ್, ಆ.4– ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಭಾರತದ ಪುರುಷರ ಹಾಕಿ ತಂಡ ಈ ಬಾರಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕದ ಬಣ್ಣ ಬದಲಾಯಿಸುವ ಹಠದೊಂದಿಗೆ ಮುನ್ನುಗ್ಗುತ್ತಿದೆ. ಟೂರ್ನಿಯ 'ಬಿ' ಗುಂಪಿನ ಎರಡನೇ ಸ್ಥಾನಿಯಾಗಿ ಕ್ವಾರ್ಟರ್ ಫೈನಲ್‌ಗೆ ಕಾಲಿಟ್ಟಿದ್ದ ಭಾರತ ಭಾನುವಾರ ನಡೆದ ಅಂತಿಮ 8ರ ಘಟ್ಟದ ಪಂದ್ಯದಲ್ಲಿ ಅಪಾಯಕಾರಿ ಗ್ರೇಟ್ ಬ್ರಿಟನ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 4–2 ಅಂತರದಲ್ಲಿ ಮಣಿಸುವ ಮೂಲಕ ಸೆಮಿಫೈನಲ್‌ಗೆ ಲಗ್ಗೆ ಹಾಕಿತು.

ಪೂರ್ಣ ಸಮಯದವರೆಗೆ ಸ್ಕೋರ್ 1–1 ರಲ್ಲಿ ಸಮನಾಗಿತ್ತು. ಭಾರತದ ಪರ ಹರ್ಮನ್‌ಪ್ರೀತ್ ಸಿಂಗ್ (22ನೇ ನಿಮಿಷ) ಗೋಲು ಗಳಿಸಿದರು. ಅದೇ ಸಮಯದಲ್ಲಿ ಗ್ರೇಟ್ ಬ್ರಿಟನ್ ಪರ ಲೀ ಮಾರ್ಟಿನ್ (27ನೇ ನಿಮಿಷ) ಗೋಲು ಗಳಿಸಿದರು. ಇದಾದ ಬಳಿಕ ಪಂದ್ಯ ಶೂಟೌಟ್‌ಗೆ ಸಾಗಿತು.

ಶೂಟೌಟ್‌ನಲ್ಲಿ ಭಾರತ: ರೋಚಕ ಶೂಟೌಟ್‌ನಲ್ಲಿ 4–2 ಗೋಲುಗಳಿಂದ ಗ್ರೇಟ್ ಬ್ರಿಟನ್ ತಂಡವನ್ನು ಭಾರತ ಸೋಲಿಸಿತು. ಗ್ರೇಟ್ ಬ್ರಿಟನ್ ಆರಂಭಿಕ 2 ಗೋಲ್ ಬಾರಿಸಿ ಯಶಸ್ಸು ಕಂಡಿತಾದರೂ ಭಾರತದ ಅನುಭವಿ ಗೋಲ್ ಕೀಪರ್ ಪಿ.ಆರ್.ಶ್ರೀಜೇಶ್ ಮನಮೋಹಕ ಪ್ರದರ್ಶನ ನೀಡಿ ಎದುರಾಳಿಯ 3ನೇ ಹಾಗೂ 4ನೇ ಗೋಲ್ ಗಳಿಕೆಯ ಪ್ರಯತ್ನಗಳನ್ನು ವಿಫಲಗೊಳಿಸಿದರು.

ರೋಚಕತೆ ಹಿಡಿದಿಟ್ಟಿದ್ದ ಪೆನಾಲ್ಟಿ ಶೂಟ್‌ಔಟ್‌ನಲ್ಲಿ ಭಾರತದ ಪರ ಮೊದಲ ಪ್ರಯತ್ನಕ್ಕೆ ಮುಂದಾದ ನಾಯಕ ಹರ್ಮನ್ ಪ್ರೀತ್ ಸಿಂಗ್ ಚೆಂಡನ್ನು ಗೋಲ್ ಪೆಟ್ಟಿಗೆ ಸೇರಿಸಿದರು. ನಂತರ ಒತ್ತಡ ಮೆಟ್ಟಿನಿಂತ ಸುಖಜಿತ್ ಸಿಂಗ್, ಲಲಿತ್ ಯಾದವ್ ಮತ್ತು ರಾಜ್‌ಕುಮಾರ್ ಲಾಲ್ ಯಶಸ್ಸು ದಕ್ಕಿಸಿಕೊಡುವ ಮೂಲಕ ಭಾರತಕ್ಕೆ 4–2 ಅಂತರದ ಜಯ ತಂದುಕೊಟ್ಟರು.

ಸಮಬಲದ ಹೋರಾಟ: ಸೆಮಿಫೈನಲ್ ಅರ್ಹತೆಗಾಗಿ ನಡೆದ ಅಂತಿಮ 8ರ ಘಟ್ಟದ ಪಂದ್ಯದಲ್ಲಿ ಭಾರತ ಮತ್ತು ಗ್ರೇಟ್ ಬ್ರಿಟನ್ ನಡುವೆ ಜಿದ್ದಾಜಿದ್ದಿನ ಪೈಪೋಟಿ ನಡೆಯಿತು. ಮೊದಲ ಅವಧಿಯಲ್ಲಿ ಎರಡೂ ತಂಡಗಳು ಗೋಲ್ ಗಳಿಕೆ ಸಲುವಾಗಿ ಸಾಕಷ್ಟು ಪ್ರಯತ್ನ ನಡೆಸಿದರೂ ಯಶಸ್ಸು ಕೈ ಹಿಡಿಯಲಿಲ್ಲ ಆದರೆ, ಎರಡನೇ ಅವಧಿಯಲ್ಲಿ ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ತಂಡಕ್ಕೆ ಮೊದಲ ಯಶಸ್ಸು ತಂದರು.

ಟೂರ್ನಿಯಲ್ಲಿ ಅಮೋಘ ಪ್ರದರ್ಶನ ನೀಡಿರುವ ಡ್ರ್ಯಾಗ್ ಅಂಡ್ ಫ್ಲಿಕ್ ಸ್ಪೆಷಲಿಸ್ಟ್ ಹರ್ಮನ್‌ಪ್ರೀತ್ ಸಿಂಗ್, ಪಂದ್ಯದ 22ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಚೆಂಡನ್ನು ಗೋಲ್ ಪೆಟ್ಟಿಗೆಗೆ ಸೇರಿಸಿದರು. ಆದರೆ, ಇದಾದ ಕೆಲವೇ ನಿಮಿಷಗಳಲ್ಲಿ ಭಾರತ ತಂಡದ ಡಿಫೆನ್ಸ್‌ನಲ್ಲಿ ಕಂಡುಬಂದ ದೌರ್ಬಲ್ಯದ ಲಾಭ ಪಡೆದ ಬ್ರಿಟನ್ ಸಮಬಲದ ಗೋಲ್ ಬಾರಿಸಿತು.

ಶ್ರೀಗಂಧದ ಸಸಿಗಳನ್ನು ನೆಡುವ ಕಾರ್ಯಕ್ಕೆ ಚಾಲನೆ

ಮೈಸೂರು, ಆ.4(ಎಸ್‌ಪಿಎನ್)– ಮೈಸೂರು ಯಾದವಗಿರಿಯ (ವಾರ್ಡ್ 18) ಚಂದನವನ ಉದ್ಯಾನವನದಲ್ಲಿ ಶ್ರೀಗಂಧದ ಸಸಿಗಳನ್ನು ನೆಡುವ ಕಾರ್ಯಕ್ಕೆ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಅವರು ಗಿಡಕ್ಕೆ ನೀರು ಹಾಕುವ ಚಾಲನೆ ನೀಡಿದರು.

ನಂತರ ಮಾತನಾಡಿದ ಎಲ್.ನಾಗೇಂದ್ರ, ಪಾಲಿಕೆ ಮಾಜಿ ಸದಸ್ಯ ಬಿ.ವಿ.ರವೀಂದ್ರ ನೇತೃತ್ವದಲ್ಲಿ 'ನಮ್ಮ ಯಾದವಗಿರಿ' ಹೆಸರಿನಲ್ಲಿ ಯಾದವಗಿರಿ ರಸ್ತೆ, ಉದ್ಯಾನವನಗಳಲ್ಲಿ ಹಸಿರೀಕರಣಗೊಳಿಸಲು ಸಂಘಟಿತರಾಗಿರುವ ಸ್ಥಳೀಯ ನಿವಾಸಿಗಳು, ಹಲವು ವರ್ಷಗಳ ಹಿಂದೆಯೇ ಗಂಧದ ಮರಗಳನ್ನು ಈ ಉದ್ಯಾನವನದಲ್ಲಿ ನೆಟ್ಟಿದ್ದಾರೆ. ಆಗ ನೆಟ್ಟ ಗಿಡಗಳು ಈಗಾಗಲೇ ದೊಡ್ಡದಾಗಿವೆ ಎಂದರು.

ಶ್ರೀಗಂಧದ ಮರಗಳಿರುವ ಜಾಗಕ್ಕೆ ಮೈಸೂರು ನಗರ ಪಾಲಿಕೆ ಕಬ್ಬಿಣ ಬೇಲಿ ಅಳವಡಿಸಿ, ಪ್ರವೇಶ ದ್ವಾರದಲ್ಲಿ ಗೇಟ್ ಕೂಡ ನಿರ್ಮಿಸಿದೆ. ಅಲ್ಲದೆ ಈ ಅಮೂಲ್ಯ ಶ್ರೀಗಂಧದ ಮರಗಳ ರಕ್ಷಣೆಗಾಗಿ ಸ್ಥಳೀಯರು ಸಿಸಿಟಿವಿ ಅಳವಡಿಸಿದ್ದು, ಕಳ್ಳರಿಂದಲೂ ಭದ್ರತೆ ನೀಡಲಾಗಿದೆ. ಶ್ರೀಗಂಧ, ಬಗೆಬಗೆಯ ಹಣ್ಣಿನ ಗಿಡಗಳನ್ನು ನೆಟ್ಟು ಪ್ರಾಣಿ–ಪಕ್ಷಿಗಳನ್ನು ಸೆಳೆಯಲು ಸ್ಥಳೀಯರು ಮುಂದಾಲೋಚನೆ ಮಾಡಿರುವುದು ಸಂತೋಷ ಸಂಗತಿ ಎಂದರು.



ಚಂದನವನ ಉದ್ಯಾನವನದಲ್ಲಿ ಶ್ರೀಗಂಧದ ಸಸಿಗಳನ್ನು ನೆಡುವ ಕಾರ್ಯಕ್ಕೆ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಗಿಡಕ್ಕೆ ನೀರು ಹಾಕುವ ಮೂಲಕ ಚಾಲನೆ ನೀಡಿದರು.

ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್‌ಗೌಡ ಟಿ.ಸಿ.ರಾಜೇಂದ್ರ, ಕಿರಣ್ ಬೋಲಾರ್, ಲಲಿತಮ್ಮ, ವೀಣಾ, ಗೌರಿ, ಪ್ರಕಾಶ್, ದಿನೇಶ್, ಶೀಲಾ ಮಂಜುನಾಥ್, ಕುಮಾರ್ ರಾವ್, ಯಾದಗಿರಿಯ ಇನ್ನಿತರ ಎಲ್ಲಾ ನಿವಾಸಿಗಳು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ಪ್ರಿಯೆ, ನಿನಗೋಸ್ಕರ ತಾಜ್‌ಮಹಲ್ ಕಟ್ಟಲೆ ಅಥವಾ ಗೋಲಗುಮ್ಮಟ ಕಟ್ಟಲೆ...

ಹೆಂಡತಿ : ನಿನ್ನ ಮುಖಕ್ಕೆ ಬೆಂಕಿ ಹಾಕ, ಮೊದಲು ಧರ್ಮಸ್ಥಳ ಸಂಘದ ಸಾಲ ಕಟ್ಟು...

ಮೈಸೂರು ಮಿತ್ರ

ಸೋಮವಾರ, 5 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ವಿದ್ಯೆ ನಿಮಗೆ ಅಧಿಕಾರ ಕೊಡಬಹುದು. ಆದರೆ ನಿಮ್ಮ ನಡತೆ ನಿಮಗೆ ಗೌರವ ತಂದು ಕೊಡುತ್ತದೆ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಹಾಲು ಕಂಡಲ್ಲಿ ಬೆಕ್ಕು, ಕೂಳು ಕಂಡಲ್ಲಿ ನಾಯಿ'

ನಿಮ್ಮ ಪತ್ರಗಳು

■ ಕುತೂಹಲ ಮೂಡಿಸಿದ ರಾಜ್ಯಪಾಲರ ನಡೆ

ಮಾನ್ಯರೆ,



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಶೇ.50:50 ಅನುಪಾತದ ಅಡಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಪಾರ್ವತಿಯವರಿಗೆ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಖಾಸಗಿ ದೂರಿನ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅನುಮತಿ ನೀಡಬಹುದು ಎಂಬ ವಿಚಾರ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ತಲ್ಲಣ ಉಂಟು ಮಾಡಿದೆ. ಇಂತಹುದೇನಾದರೂ ನಡೆದರೆ, ರಾಜ್ಯಪಾಲರ ವಿರುದ್ಧ ನ್ಯಾಯಾಲಯದ ಮೊರೆ ಹೋಗುವುದಾಗಿ ಕೆಲವು ಸಚಿವರು ಈಗಾಗಲೇ ಕಿಡಿಕಾರಿದ್ದಾರೆ. ಇದೇ ವಿಷಯಕ್ಕೆ ಸಂಬಂಧಪಟ್ಟಂತೆ, ದಾಖಲೆ ಸಹಿತ ವಿಸ್ತಾರವಾದ ವರದಿಯನ್ನು ತಮಗೆ ಸಲ್ಲಿಸಲು ಮುಖ್ಯಮಂತ್ರಿಗಳಿಗೆ ರಾಜ್ಯಪಾಲರು ಸೂಚಿಸಿರುವುದು ಇಲ್ಲಿ ಗಮನಾರ್ಹ.

ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರಾಗಿರುವ ರಾಜ್ಯಪಾಲರು ಸರ್ಕಾರದ ಮುಖ್ಯಸ್ಥರಾದ ಮುಖ್ಯಮಂತ್ರಿಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬಹುದೇ ಎಂಬ ವಿಚಾರದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಈ ಹಿಂದೆ ರಾಜ್ಯದ ರಾಜ್ಯಪಾಲರಾಗಿದ್ದ ಹಂಸರಾಜ ಭಾರದ್ವಾಜ್, ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ, ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ಮೊಕದ್ದಮೆ ದಾಖಲಿಸಲು ಅನುಮತಿ ನೀಡಿದ್ದರು. ಇದು ಸಾಕಷ್ಟು ಟೀಕೆ ಟಿಪ್ಪಣಿಗಳಿಗೆ ಗುರಿಯಾಗಿತ್ತು. ಇಂತಹ ವಿಚಾರದಲ್ಲಿ ಸಚಿವ ಸಂಪುಟ ಕೈಗೊಳ್ಳುವ ನಿರ್ಧಾರ ರಾಜ್ಯಪಾಲರಿಗೆ ಬಂಧನಕಾರಿ ಎಂಬ ವಾದವೂ ಇದೆ. ಆದರೆ, ಮುಖ್ಯಮಂತ್ರಿಗಳೇ ಪ್ರಕರಣದಲ್ಲಿ ಆರೋಪಿ ಸ್ಥಾನದಲ್ಲಿರುವುದರಿಂದ, ಅವರ ನೇತೃತ್ವದ ಸಂಪುಟ ತೆಗೆದುಕೊಳ್ಳುವ ನಿರ್ಧಾರವನ್ನು ರಾಜ್ಯಪಾಲರು ಮಾನ್ಯ ಮಾಡಬೇಕಾಗಿಲ್ಲ ಎಂದು ಮತ್ತೊಂದು ವಾದವಿದೆ. ಹೆಚ್ಚೆಂದರೆ, ರಾಜ್ಯಪಾಲರು ತಮ್ಮ ವಿವೇಚನಾಧಿಕಾರಗಳನ್ನು ಚಲಾಯಿಸಿ, ಇಂತಹ ಸೂಕ್ಷ್ಮ ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳಬಹುದು. ರಾಜ್ಯಪಾಲರನ್ನು ಕೇಂದ್ರ ಸರ್ಕಾರ ದುರ್ಬಳಕೆ ಮಾಡಿಕೊಂಡು, ತನಗೆ ಬೇಡವಾದ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸುವ ಪ್ರಯತ್ನ ಹಲವಾರು ರಾಜ್ಯಗಳಲ್ಲಿ ನಡೆಯುತ್ತಾ ಬಂದಿದೆ. ರಾಜ್ಯಪಾಲರನ್ನು ಕೇಂದ್ರ ಸರ್ಕಾರದ ಏಜೆಂಟ್ ಎಂದು ಕೂಡ ಅನೇಕ ರಾಜಕೀಯ ಪಕ್ಷಗಳು ಆರೋಪಿಸಿವೆ. ಪ್ರಸ್ತುತ, ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಜ್ಯಪಾಲರ ಕಾರ್ಯವೈಖರಿಯ ಬಗ್ಗೆ ಆಯಾ ರಾಜ್ಯ ಸರ್ಕಾರಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಈ ವಿಚಾರವನ್ನು ಸರ್ವೋಚ್ಚ ನ್ಯಾಯಾಲಯದವರೆಗೂ ಕೊಂಡೊಯ್ದಿವೆ. ಈ ಹಿನ್ನೆಲೆಯಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಕೈಗೊಳ್ಳುವ ಮುಂದಿನ ನಿರ್ಧಾರ ತೀವ್ರ ಕುತೂಹಲ ಕೆರಳಿಸಿದೆ.

–ಕೆ.ವಿ.ವಾಸು, ವಕೀಲರು–ನೋಟರಿ, ವಿವೇಕಾನಂದನಗರ, ಮೈಸೂರು.


■ ಸೂಕ್ತ ನಿರ್ವಹಣೆ ಇಲ್ಲದ ಅರೇನಹಳ್ಳಿ ನೀರು ಶುದ್ಧೀಕರಣ ಘಟಕ

ಮಾನ್ಯರೆ,

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕು ರಾವಂದೂರು ಹೋಬಳಿಯ ಅರೇನಹಳ್ಳಿ ಗ್ರಾಮದಲ್ಲಿ ನೀರು ಶುದ್ಧೀಕರಣ ಘಟಕ ಹೆಸರಿಗಷ್ಟೇ ಇದೆ. ಸೂಕ್ತ ನಿರ್ವಹಣೆ ಇಲ್ಲದೆ ಕೆಟ್ಟು ನಿಂತಿದೆ. ಆಗಾಗ್ಗೆ ದುರಸ್ತಿಗೆ ಬರುತ್ತಲೇ ಇರುತ್ತದೆ. ಈ ಸಂಬಂಧ ಇಲ್ಲಿನ ನೀರುಗಂಟಿ (ವಾಟರ್‌ಮ್ಯಾನ್)ಯನ್ನು ಕೇಳಿದರೆ ಮೇಲಿನವರು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಹೇಳಿ ಜಾರಿಕೊಂಡು ತಮ್ಮ ಪಾಡಿಗೆ ತಾವು ಇರುತ್ತಾರೆ. ಅಲ್ಲದೇ ಅದು ಈಗಿರುವ ಸ್ಥಳದಲ್ಲಿ ಸರಿಯಾದ ಭದ್ರತೆ ಇಲ್ಲದೆ ಆಗಾಗ ನಾಣ್ಯ ಹಾಕುವ ಪೆಟ್ಟಿಗೆಯನ್ನು ಒಡೆಯಲಾಗುತ್ತಿದೆ. ಜೊತೆಗೆ ಎರಡು ರೂಪಾಯಿಯ ದೊಡ್ಡ ನಾಣ್ಯವನ್ನು ಸಹ ಅಕ್ಕಪಕ್ಕದ ಅಂಗಡಿಗಳವರಿಗೆ ಕೊಡದೇ ನಾಣ್ಯಕ್ಕೂ ತತ್ವಾರ ಪ್ರಾರಂಭವಾಗಿದೆ. ಈ ಬಗ್ಗೆ ಅಲ್ಲಿರುವ ಎಷ್ಟೋ ಜನ ದೂರುತ್ತಿದ್ದಾರೆ. ಆದರೂ ಈ ಬಗ್ಗೆ ನೀರುಗಂಟಿಗೆ, ದೊಡ್ಡ ಬೇಲಾಳು ಮಂಡಲ ಪಂಚಾಯಿತಿಯವರಿಗೆ ಕೊಂಚ ಮಟ್ಟಿಗೆ ಜವಾಬ್ದಾರಿ ಇಲ್ಲವೆಂದು ತೋರುತ್ತದೆ. ಇನ್ನು ಮುಂದಾದರೂ ಈ ಬಗ್ಗೆ ಅಗತ್ಯಕ್ರಮ ಕೈಗೊಳ್ಳುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಈ ಮೂಲಕ ಅರೇನಹಳ್ಳಿ ಗ್ರಾಮಸ್ಥರು ಆಗ್ರಹಿಸಿದ್ದಾರೆ.

–ಎ.ಎಸ್.ಗೋವಿಂದೇಗೌಡ, ಕನ್ನಡ ಉಪನ್ಯಾಸಕ, ಅರೇನಹಳ್ಳಿ

■ ಮೃತ್ಯುಕೂಪವಾಗಿರುವ ಮರ !!



ಮಾನ್ಯರೆ,


ಮೈಸೂರಿನ ಕುವೆಂಪು ನಗರದ 'ಇ' ಮತ್ತು 'ಎಫ್' ವಿಭಾಗದ ಜ್ಞಾನಗಂಗಾ ಶಾಲೆಯ ಬಸ್ ನಿಲ್ದಾಣದ ಪಕ್ಕದಲ್ಲಿ ಈ ಮರ ಪ್ರತಿನಿತ್ಯ ಓಡಾಡುವ ನೂರಾರು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮೃತ್ಯುಕೂಪವಾಗಿರುತ್ತದೆ. ಮರದ ಬುಡ ಗೆದ್ದಲು ಹಿಡಿದು ಅಲುಗಾಡುತ್ತಿದೆ. ಅರಣ್ಯ ಇಲಾಖೆ ಹಾಗೂ ಮೈಸೂರು ಮಹಾನಗರಪಾಲಿಕೆ ಜಾಗೃತರಾಗಿ ಈ ಮರವನ್ನು ತೆರವುಗೊಳಿಸಿ ಮುಂದೆ ಸಂಭವಿಸುವ ಅನಾಹುತವನ್ನು ತಪ್ಪಿಸಲಿ.

–ಬಾಲಸುಬ್ರಹ್ಮಣ್ಯ, ಹಿರಿಯ ನಾಗರಿಕ, ಕುವೆಂಪುನಗರ, ಮೈಸೂರು.

■ ಪ್ರಕೃತಿಯ ಮುಂದೆ ಎಲ್ಲವೂ ಗೌಣ!

ಮಾನ್ಯರೆ,

ನಾನು ನನ್ನದು ನಾನೇ ಎಲ್ಲಾ
ಎಂಬುದರ ವ್ಯಾಮೋಹ ಬಿಡು.
ಜಾತಿ ಕುಲ ದ್ವೇಷ ದುರಾಸೆ
ಇವುಗಳ ಮೇಲಿನ ಹಠ ಬಿಟ್ಟು ಬಿಡು.
ನನ್ನದು ಚಿರಯೌವ್ವನ, ನನ್ನದೇ ಸೌಂದರ್ಯ
ನ್ನ ಅಹಂಕಾರಗಳೆಂಬುದನ್ನು ಮೂಟೆಕಟ್ಟಿ
ಬದಿಗಿಡು. ಏಕೆಂದರೆ....
ಪ್ರಕೃತಿ ವಿಕೋಪಗಳ ನಡುವೆ,
ನಮ್ಮ ಪ್ರಾಣ ಉಳಿದರೆ
ಅದೇ ನಮ್ಮ ಪುನರ್ಜನ್ಮ!



–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ನಾವೆಲ್ಲಿ ತಪ್ಪುತ್ತಿದ್ದೇವೆ?

> “ ಮಕ್ಕಳ ಮನಸ್ಸು ಮೇಣದಂತೆ. ತಂದೆ–ತಾಯಿಗಳು ಅದಕ್ಕೆ ಯಾವ ಆಕಾರ ಕೊಡುತ್ತಾರೋ ಅದರಂತೆ ಅವು ಆಗುತ್ತವೆ. ಮನೆಯ ವಾತಾವರಣ, ಸುತ್ತಮುತ್ತಲ ಪರಿಸರದಲ್ಲಿ ಅವರಿಗೆ ಸ್ಫೂರ್ತಿ ತುಂಬುವಂತಹ ವ್ಯಕ್ತಿತ್ವವುಳ್ಳ ಜನಗಳು, ಆದರ್ಶ ಮಾದರಿಯ ಗುರುಗಳು ಇವರೆಲ್ಲರೂ ಮಕ್ಕಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆಂಬುದರಲ್ಲಿ ಎರಡು ಮಾತಿಲ್ಲ. ಇವೆಲ್ಲಕ್ಕಿಂತಲೂ ಮಕ್ಕಳು ತಂದೆ–ತಾಯಿಯರನ್ನು ಅನುಕರಿಸುತ್ತಾರೆಂಬುದಂತೂ ಶತಸಿದ್ಧ.



ಅಮೆರಿಕದಲ್ಲಿ ನಡೆದ ಅಪಘಾತದ ಅನುಭವವನ್ನು ಕುರಿತ ಕಳೆದ ವಾರದ ನನ್ನ ಲೇಖನದ ಕೊನೆಯ ವಾಕ್ಯವನ್ನು ಕುರಿತು ಹಲವಾರು ಓದುಗರು ತಮ್ಮ ಅಭಿಪ್ರಾಯ–ಅನಿಸಿಕೆಗಳನ್ನು ನನ್ನೊಡನೆ ಹಂಚಿಕೊಂಡಿದ್ದಾರೆ. ಅದನ್ನು ಕುರಿತು ಆಲೋಚಿಸಿದಾಗ ನನ್ನ ವಿಚಾರಗಳನ್ನು, ಅನಿಸಿಕೆಗಳನ್ನು ಓದುಗರೊಡನೆ ಹಂಚಿಕೊಳ್ಳುವುದು ಒಳಿತೆಂದು ಅನಿಸಿದುದರಿಂದ ಈ ಲೇಖನ ಬರೆಯಲು ಕುಳಿತೆ.

ನಮ್ಮ ಆರ್ಷೇಯ ಸಂಸ್ಕೃತಿಯ ಬಗ್ಗೆ ಅಪಾರ ಹೆಮ್ಮೆಯಿಂದ ಮಾತನಾಡುವ ನಾವು, ಶ್ರೀರಾಮ, ಸತ್ಯಹರಿಶ್ಚಂದ್ರ ವಿವೇಕಾನಂದರ ಬಗ್ಗೆ ಹೆಮ್ಮೆಪಡುವ ನಾವು ಮಕ್ಕಳಲ್ಲಿ ಪ್ರಾಮಾಣಿಕತೆಯ, ಸಹನೆಯ, ಸಹಿಷ್ಣುತೆಯ, ಸತ್ಯದ ಬೀಜಗಳನ್ನು ಬಿತ್ತುತ್ತಿದ್ದೇವೆಯೇ ಎಂಬುದೇ ಆ ಕೊನೆಯ ವಾಕ್ಯ. ನಿಜ, ಇಂದಿನ ಮಕ್ಕಳಲ್ಲಿ ಮಾನವೀಯ ಮೌಲ್ಯಗಳು ಕಡಿಮೆ ಆಗುತ್ತಿವೆ ಎಂದು ಕೊರಗುವ ನಾವು, ಅದಕ್ಕೆ ಕಾರಣವನ್ನೂ ಪರಿಶೀಲಿಸಬೇಕಲ್ಲವೆ? ಮಕ್ಕಳ ಮನಸ್ಸು ಮೇಣದಂತೆ. ತಂದೆ ತಾಯಿಗಳು ಅದಕ್ಕೆ ಯಾವ ಆಕಾರ ಕೊಡುತ್ತಾರೋ ಅದರಂತೆ ಅವು ಆಗುತ್ತವೆ. ಮನೆಯ ವಾತಾವರಣ, ಸುತ್ತಮುತ್ತಲ ಪರಿಸರದಲ್ಲಿ ಅವರಿಗೆ ಸ್ಫೂರ್ತಿ ತುಂಬುವಂತಹ ವ್ಯಕ್ತಿತ್ವವುಳ್ಳ ಜನಗಳು, ಆದರ್ಶ ಮಾದರಿಯ ಗುರುಗಳು ಇವರೆಲ್ಲರೂ ಮಕ್ಕಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆಂಬುದರಲ್ಲಿ ಎರಡು ಮಾತಿಲ್ಲ. ಇವೆಲ್ಲಕ್ಕಿಂತಲೂ ಮಕ್ಕಳು ತಂದೆ–ತಾಯಿಯರನ್ನು ಅನುಕರಿಸುತ್ತಾರೆಂಬುದಂತೂ ಶತಸಿದ್ಧ. ಷೇಕ್ಸ್‌ಪಿಯರ್ ಹೇಳುವಂತೆ ಎಂತಹ ಸ್ನೇಹಿತರೊಡನೆ ನಮ್ಮ ಸ್ನೇಹ ಬೆಳೆಯುತ್ತದೆಯೋ ಅದರ ಪ್ರಭಾವವೂ ನಮ್ಮ ಮೇಲೆ ಆಗುತ್ತದೆ (ಶೋ ಮಿ ಯುವರ್ ಫ್ರೆಂಡ್ಸ್ ಅಂಡ್ ಐ ವಿಲ್ ಟೆಲ್ ಯು ಹೂ ಯು ಆರ್). ಹೀಗಾಗಿಯೇ ಸ್ನೇಹಿತರನ್ನು ಆಯ್ಕೆ ಮಾಡಿಕೊಳ್ಳುವಾಗ ಅತ್ಯಂತ ಜಾಗರೂಕರಾಗಿರಬೇಕಾಗುತ್ತದೆ ಎನ್ನುವುದು.

ಡಿವಿಜಿ, ಮಾಸ್ತಿ, ಪುತಿನ, ಕುವೆಂಪು, ಅನಕೃ, ತರಾಸು, ಜಿ.ಪಿ.ರಾಜರತ್ನಂ, ತೀ.ತಾ.ಶರ್ಮ, ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ, ಬೇಂದ್ರೆ, ಕಾರಂತ ಮುಂತಾದ ಮಹನೀಯರು, ಅವರ ಬರವಣಿಗೆ, ಬದುಕು ಎಲ್ಲವೂ ಮೈಮನ ನವಿರೇಳಿಸುವಂತಹ ಒಂದು ಅನಿರ್ವಚನೀಯ, ರೋಮಾಂಚಕ ಅನುಭವವನ್ನು ಕೊಡುತ್ತಿದ್ದಂತಹ ಒಂದು ಕಾಲಘಟ್ಟದಲ್ಲಿ ಬಾಲ್ಯವನ್ನು ಕಳೆದ ಅದೃಷ್ಟವಂತರು ನಾವು. ಅವರುಗಳ ವಿಚಾರಧಾರೆಯನ್ನೇ ನಮ್ಮ ಮಸ್ತಿಷ್ಕದಲ್ಲಿ ತುಂಬಿಕೊಳ್ಳುತ್ತಿದೆವು. ವಿವೇಕಾನಂದರ ಸಿಂಹದ ನುಡಿಗಳು ನಮ್ಮ ಮೈನ ರೋಮ ರೋಮಗಳನ್ನೂ ನೆಟ್ಟಗೆ ನಿಲ್ಲಿಸುವಂತೆ ಮಾಡುತ್ತಿದ್ದುವು. ಆಚಾರ, ವಿಚಾರ ಎಲ್ಲದರಲ್ಲೂ ಪ್ರಾಮಾಣಿಕತೆ ಇರುವಂತೆ ನೋಡಿಕೊಳ್ಳುತ್ತಿದ್ದ ತಂದೆ–ತಾಯಂದಿರು, ಸಹಜವಾಗಿಯೇ ಮಕ್ಕಳ ಬೆಳವಣಿಗೆಯಲ್ಲಿ ಕುಂದಾಗಲಿ, ಕಸುರಾಗಲಿ ಇರಲು ಹೇಗೆ ಸಾಧ್ಯವಾಗುತ್ತಿತ್ತು? ಶಾಲೆಯ ಪಠ್ಯ ಪುಸ್ತಕಗಳಲ್ಲಿ ಭಾರತದ ವೀರ ಪುರುಷರ, ತ್ಯಾಗಜೀವಿಗಳ, ಪುರಾಣ–ಇತಿಹಾಸದ ಕತೆಗಳು ಇರುತ್ತಿದ್ದುವು. ಅದು ಶಿಬಿ ಚಕ್ರವರ್ತಿ, ಶಿವಾಜಿಯನ್ನು ತಯಾರು ಮಾಡಿದ ಜೀಜಾಬಾಯಿ, ಅಶೋಕ, ಚಂದ್ರಗುಪ್ತ ಮೌರ್ಯ, ಚಾಲುಕ್ಯ ಇಮ್ಮಡಿ ಪುಲಿಕೇಶಿ, ಭರತ–ಬಾಹುಬಲಿಯರ ಬಗ್ಗೆ ಇರುತ್ತಿದ್ದ ಪಾಠಗಳನ್ನು ಅದೆಷ್ಟು ಬಾರಿ ಓದುತ್ತಿದ್ದೆವೋ ತಿಳಿಯದು. ಪ್ರತೀಬಾರಿ ಓದಿದಾಗಲೂ ಅದೇ ಭಾವ, ಅದೇ ನೀತಿ. ನಮ್ಮಲ್ಲೂ ದೇಶಭಕ್ತಿ ಹುಟ್ಟಿಸುತ್ತಿದ್ದಂತಹ ಕತೆಗಳು. ನಮ್ಮ ಅರಿವಿಲ್ಲದಂತೆಯೇ ನಮ್ಮಲ್ಲಿ ಸದ್ಭಾವನೆಗಳನ್ನು ಹುಟ್ಟು ಹಾಕುತ್ತಿದ್ದ ಪಾಠಗಳು. ಭ್ರಷ್ಟಾಚಾರ ಇನ್ನೂ ಅಷ್ಟಾಗಿ ಕಾಲೂರದಿದ್ದ ರಾಜಕೀಯ. ಮಂತ್ರಿ ಪದವಿ ಗಿಟ್ಟಿಸುವುದೇ ಸ್ವಂತ ಲಾಭಕ್ಕಾಗಿ ಎಂಬುದು ಇನ್ನೂ ಬೇರೂರದಿದ್ದ ಸಮಯ.

ಒಂದು ಮಗುವಿಗೆ ತಾನು ಯಾರಂತೆ ಆಗಬೇಕು ಎಂಬುದರ ಬಗ್ಗೆ ದಾರಿ ತೋರುವ, ಬೆಳಕು ಚೆಲ್ಲುವ ವ್ಯಕ್ತಿಗಳ ಇರುವಿಕೆ ಅತ್ಯಂತ ಅವಶ್ಯಕ ಎಂದು ನನ್ನ ಭಾವನೆ. ಅವನ್ನೇ ರೋಲ್ ಮಾಡೆಲ್ ಎನ್ನುತ್ತಾರೆ. ಅಂತಹವರ ಬದುಕು, ಬರಹ, ಆಚಾರ ವಿಚಾರಗಳೆಲ್ಲವೂ ಮಕ್ಕಳ ಮನಸ್ಸಿನ ಮೇಲೆ ದಟ್ಟ ಪ್ರಭಾವ ಬೀರಿ, ಮಗುವೂ ಆ ದಿಸೆಯಲ್ಲೇ ಹೆಜ್ಜೆ ಹಾಕುವಂತೆ ಪ್ರೇರೇಪಣೆ ನೀಡುತ್ತವೆ. ತನ್ಮೂಲಕ ನಾವು ಸಮಾಜಕ್ಕೆ ಎಂತಹ ಪ್ರಜೆಗಳನ್ನು ನೀಡುತ್ತಿದ್ದೇವೆ ಎಂಬುದು ನಿರ್ಧರಿತವಾಗುತ್ತದೆ. ಈಗ , ಅಂತಹ ವ್ಯಕ್ತಿಗಳು ಎಷ್ಟು ಮಂದಿ ಇದ್ದಾರೆ? ಒಂದು ಉದಾಹರಣೆ–ಇತ್ತೀಚೆಗೆ ಶ್ರೀಲಂಕಾದ ಒಬ್ಬ ವ್ಯಕ್ತಿಯನ್ನು ಭೇಟಿ ಮಾಡಿದಾಗ ಆತ ತನ್ನ ಯೌವನದಲ್ಲಿ ಎಲ್‌ಟಿಟಿಇಯ ನಾಯಕ ಪ್ರಭಾಕರನ್ ತನ್ನಂತಹ ಅನೇಕರಿಗೆ ರೋಲ್ ಮಾಡೆಲ್ ಆಗಿದ್ದನೆಂಬುದನ್ನು ನೆನಪಿಸಿಕೊಂಡ. ಅವರ ಬಳಿ ಮಾತ್ರ ಮೋಟಾರ್ ಸೈಕಲ್ ಇರುತ್ತಿತ್ತು, ಗನ್ ಇರುತ್ತಿತ್ತು. ಇದು ನಮಗೆ ಅದ್ಭುತ ಎಂದೆನಿಸುತ್ತಿತ್ತು? ಹೀಗೆ ಹೇಳಿದ ಆತನ ಮಾತಿನ ಸತ್ಯಾಂಶ ನನ್ನಲ್ಲಿ ನಡುಕ ಹುಟ್ಟಿಸಿತ್ತು. ನಮ್ಮ ಇತಿಹಾಸದಲ್ಲಿ ಅಂತಹವರು ಬೇಕಾದಷ್ಟು ಮಂದಿ ಇದ್ದಾರಲ್ಲ, ಅವರನ್ನೇ ತಮ್ಮ ಆದರ್ಶವನ್ನಾಗಿ ಮಾಡಿಕೊಳ್ಳಬಹುದಲ್ಲ? ಎನ್ನಬಹುದು. ಆದರೆ, ಪ್ರಸಕ್ತದಲ್ಲಿ, ತಮ್ಮ ಕಣ್ಣೆದುರಿಗೆ ಇರುವವರ ಪ್ರಭಾವ ಹೆಚ್ಚಲ್ಲವೇ? ಜಯಪ್ರಕಾಶ್ ನಾರಾಯಣ್, ಲಾಲ್ ಬಹಾದೂರ್ ಶಾಸ್ತ್ರಿ, ವಿನೋಬ ಭಾವೆ ಅಂತಹ ಮಹನೀಯರ ಬಗ್ಗೆ ಈಗಿನ ರಾಜಕಾರಣಿಗಳು ಸ್ವಲ್ಪವಾದರೂ ತಿಳಿದಿದ್ದಾರೆಯೇ ?

ಹೋಗಲಿ ಬಿಡಿ, ತಂದೆ–ತಾಯಿಯರು ತಮ್ಮ ಮಕ್ಕಳಿಗೆ ಇಂತಹವರ ಬಗ್ಗೆ ಪರಿಚಯ ಮಾಡಿಕೊಡುತ್ತಿದ್ದಾರೆಯೇ? ತಮ್ಮ ನಾಡು, ನುಡಿ, ಜಲ, ನೆಲ, ಸಂಪತ್ತು, ಸಂಸ್ಕೃತಿ ಇವುಗಳ ಬಗ್ಗೆ ಹಿರಿಯರು ತಿಳಿಹೇಳದಿದ್ದರೆ, ಮಕ್ಕಳಿಗೆ ಅವುಗಳ ಪ್ರಾರಂಭದ ಪರಿಚಯವಾದರೂ ಹೇಗಾಗಲು ಸಾಧ್ಯ ? ನಮ್ಮ ಭಾಷೆ–ಸಂಸ್ಕೃತಿಯ ಬಗ್ಗೆ ಹೆಮ್ಮೆ ಮೂಡಲು ಹೇಗೆ ಸಾಧ್ಯ? ತಂದೆ–ತಾಯಿಗಳಿಗೆ ಇಂಗ್ಲಿಷ್ ವ್ಯಾಮೋಹ ತುಂಬಿದ್ದರೆ, ಮಕ್ಕಳು ಕನ್ನಡದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಲು ಸಾಧ್ಯವೇ? ಯೋಚಿಸಿ. ಅತ್ಯಂತ ಅಸಹಜವಾದ ರಿಯಾಲಿಟಿ ಶೋಗಳಲ್ಲಿ ಭಾಗವಹಿಸಲು ತಮ್ಮ ಸಮಯವನ್ನೆಲ್ಲ ವಿನಿಯೋಗಿಸುವ ಪೋಷಕರು ಮೊದಲು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡರೆ, ಅರ್ಧ ಕೆಲಸ ಆದಂತೆಯೇ. ಮಕ್ಕಳನ್ನ ಹೆರುವುದರ ಜೊತೆಗೆ ಅವರುಗಳನ್ನು ಒಳ್ಳೆಯ ಮನುಷ್ಯರನ್ನಾಗಿ, ಸಮರ್ಥ ಪ್ರಜೆಗಳನ್ನಾಗಿ ಬೆಳೆಸುವ ಹೊಣೆ ಹೆತ್ತವರದಷ್ಟೇ ಅಲ್ಲ, ನಮ್ಮೆಲ್ಲರದೂ ಸಹ. ದಿನಪತ್ರಿಕೆ ತೆಗೆದರೆ ಬರೀ ನಕಾರಾತ್ಮಕ ಸುದ್ದಿಗಳೇ ಕಾಣುತ್ತವೆ. ಕೊಲೆ, ಸುಲಿಗೆ, ಭ್ರಷ್ಟಾಚಾರ, ವಂಚನೆ, ಮೋಸ, ರೇಪ್, ಕಳ್ಳತನ ಇಂತಹ ಸುದ್ದಿಗಳನ್ನೇ ಓದುವ ಮನಸು ಶುಭ್ರವಾಗಿ, ಶಾಂತವಾಗಿ, ದಯಾಮಯವಾಗಿ ಇರಲೆಂದು ಬಯಸುವುದು ಹೇಗೆ? ಕ್ರೌರ್ಯ, ಸೆಕ್ಸ್ ಮತ್ತು ಅಸಹಜತೆಯೇ ತುಂಬಿರುವ ಸಿನಿಮಾಗಳು ಮಾಡುತ್ತಿರುವ ಅನಾಹುತಗಳೇನು ಕಡಿಮೆಯೇ? ಮಕ್ಕಳಿಗೆ ದಾರಿ ತಪ್ಪಿಸಲು ಇದಕ್ಕಿಂತ ಬೇರೆ ಉದಾಹರಣೆ ಬೇಕೆ? ಹೀಗೆ ಎಲ್ಲೆಡೆ ವಿಶ್ವವ್ಯಾಪಿಯಂತೆ ಬೆಳೆದಿರುವ ನಕಾರಾತ್ಮಕ, ಹಿಂಸಾತ್ಮಕ ವಿಷಯಗಳ ಮಧ್ಯೆ ತಂದೆ–ತಾಯಂದಿರು ಮೊದಲ ಆಶಾಕಿರಣ ಆಗುತ್ತಾರೆ. ಕಲಿಸುವ ಗುರುಗಳು ತಮ್ಮ ಹೊಣೆಯನ್ನರಿತರೆ, ಮತ್ತಷ್ಟು ಒಳಿತಾಗುತ್ತದೆ.

ಇದೆಲ್ಲಕ್ಕೂ ಕೊನೆಯೇ ಇಲ್ಲವೇ? ಹೀಗೆ ಯೋಚಿಸುವಾಗಲೆಲ್ಲ ನನಗೆ ವೈಯಕ್ತಿಕವಾಗಿ ಸಾಂತ್ವನ ಸಿಕ್ಕಿರುವುದು ಜಗಜ್ಯೋತಿ ಬಸವಣ್ಣನವರ ಒಂದು ವಚನದಲ್ಲಿ. ಲೋಕದ ಡೊಂಕ ನೀವೇಕೆ ತಿದ್ದುವಿರಯ್ಯ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ ಕೂಡಲ ಸಂಗಮದೇವ. ಬನ್ನಿ, ಮೊದಲ ಹೆಜ್ಜೆ ನಮ್ಮದೇ ಆಗಲಿ.

ಯುವಕರಲ್ಲೂ ಹೃದ್ರೋಗ ಸಮಸ್ಯೆ ಹೆಚ್ಚಾಗುತ್ತಿದೆ

ಶ್ರೀ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಕೆ.ಎಸ್.ರವೀಂದ್ರನಾಥ ಕಳವಳ



ಮೈಸೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ಕಾರ್ಡಿಯೋ ಯೋಗ ರಾಷ್ಟ್ರೀಯ ಕಾರ್ಯಾಗಾರವನ್ನು ಡಾ.ರವೀಂದ್ರನಾಥ ಉದ್ಘಾಟಿಸಿದರು.

ಮೈಸೂರು,ಆ.4(ಆರ್‌ಕೆ)–ಇತ್ತೀಚಿನ ದಿನಗಳಲ್ಲಿ ಯುವಕರಲ್ಲೂ ಹೃದಯ ಸಂಬಂಧಿತ ಕಾಯಿಲೆಗಳು ಹೆಚ್ಚಾಗಿ ಕಾಣಿಸುತ್ತಿದೆ ಎಂದು ಶ್ರೀ ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ ಆತಂಕ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಆಯುರ್ವೇದ ಸಂಶೋಧನಾ ಸಂಸ್ಥೆ ಹಾಗೂ ಶ್ರೀ ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆ ವತಿಯಿಂದ ಮೈಸೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಡಿಯೋ ಯೋಗ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನ ಬದಲಾದ ಜೀವನ ಶೈಲಿಯಿಂದಾಗಿ ಹೃದಯ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಈ ಹಿಂದೆ ನಗರ ಪ್ರದೇಶದಲ್ಲಿ ವಾಸಿಸುವವರಿಗೆ ಮಾತ್ರ ಕಾಣಿಸಿಕೊಳ್ಳುತ್ತಿದ್ದ ಈ ಕಾಯಿಲೆ ಈಗ ಗ್ರಾಮೀಣ ಭಾಗದ ಜನರು ಹಾಗೂ ಹದಿಹರೆಯದವರಲ್ಲಿಯೂ ಹೆಚ್ಚಾಗುತ್ತಿರುವುದು ವಿಪರ್ಯಾಸ ಎಂದು ನುಡಿದರು.

ಯೋಗ ಪ್ರತಿಯೊಬ್ಬ ಮನುಷ್ಯನ ಅವಿಭಾಜ್ಯ ಅಂಗವಾಗಿದ್ದು, 2014 ರಿಂದ ಪ್ರತೀವರ್ಷ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದೆ. ಆದ್ದರಿಂದ ಇತ್ತೀಚೆಗೆ ಯೋಗ ಮಾಡುವವರ ಸಂಖ್ಯೆಯೂ ಹೆಚ್ಚಾಗಿದ್ದು, ಅದರಿಂದ ಮನುಷ್ಯನ ಒತ್ತಡ ನಿಯಂತ್ರಣಕ್ಕೆ ಬರುತ್ತದೆ. ಮನುಷ್ಯನ ದೈಹಿಕ ಮತ್ತು ಮಾನಸಿಕ ಸದೃಢತೆಗೆ ಯೋಗ ಉತ್ತಮ ಸಾಧನ ಎಂದರು.

ಈ ಹಿಂದೆ ಮಹರ್ಷಿ ಪತಂಜಲಿ, ಸ್ವಾಮಿ ವಿವೇಕಾನಂದ ಸೇರಿದಂತೆ ಹಲವರು ಯೋಗಕ್ಕೆ ಅಪಾರ ಕೊಡುಗೆ ನೀಡಿರುವ ಹಿನ್ನೆಲೆಯಲ್ಲಿ ಭಾರತದಲ್ಲಿ ಯೋಗಾಭ್ಯಾಸಕ್ಕೆ ಪ್ರಾಮುಖ್ಯತೆ ಬಂದಿದೆ ಎಂದು ನುಡಿದರು.

ಆಯುಷ್ ಇಲಾಖೆ ಆಯುಕ್ತ ಶ್ರೀನಿವಾಸಲು, ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಎ. ಶೇಖರ್, ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್. ಸದಾನಂದ, ವೈದ್ಯರಾದ ಡಾ.ಸೀತಾಲಕ್ಷ್ಮಿ, ಡಾ.ಏಂಜಲ್‌ರಾಜ್, ಡಾ.ಲಕ್ಷ್ಮೀನಾರಾಯಣ ಶೆಣೈ, ಡಾ.ಗುರುಬಸವರಾಜು, ಡಾ.ವೇದಾವತಿ, ಡಾ.ವೀಣಾ ನಂಜಪ್ಪ, ಡಾ.ಸಂತೋಷ, ಡಾ.ರಾಜೀವ, ಡಾ.ಪ್ರಭಾವತಿ, ಡಾ.ವಾದಿರಾಜ, ಡಾ.ಮಂಜುನಾಥ, ಡಾ.ದೇವರಾಜ್, ಡಾ.ಹರೀಶ್ ಕುಮಾರ್, ಸಾರ್ವಜನಿಕ ಸಂಪರ್ಕಾಧಿಕಾರಿ ವಾಣಿ ಮೋಹನ, ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ರವೀಂದ್ರ ಘೋರೆ ಇತರರು ಪಾಲ್ಗೊಂಡಿದ್ದರು.

ರಾಹುಲ್ ಗಾಂಧಿ ಹೊಲಿದಂತಹ ಚಪ್ಪಲಿಗೆ 10 ಲಕ್ಷ ಕೊಟ್ಟರೂ ಮಾರಲೊಲ್ಲೇ ಎಂದ ಚಮ್ಮಾರ!





ಸುಲ್ತಾನಪುರ(ಉತ್ತರ ಪ್ರದೇಶ), ಆ.4– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತನ್ನ ಅಂಗಡಿಗೆ ಬಂದ ವೇಳೆ ಹೊಲಿದಿದ್ದಂತಹ ಚಪ್ಪಲಿಗಳನ್ನು ಕೆಲವರು 10 ಲಕ್ಷ ಕೊಟ್ಟು ಖರೀದಿಸಲು ಮುಂದೆ ಬಂದಿದ್ದರೂ, ಇಲ್ಲಿನ ಚಮ್ಮಾರ ರಾಮ್ ಚೇತ್ ಅವುಗಳ ಮಾರಾಟ ಮಾಡಲು ನಿರಾಕರಿಸಿದ್ದಾರೆ.

ರಾಹುಲ್ ಗಾಂಧಿ ಹೊಲಿದಿರುವ ಈ ಚಪ್ಪಲಿಗಳು ನನ್ನ ಅದೃಷ್ಟದ ಪಾದರಕ್ಷೆಗಳೆಂದೇ ಭಾವಿಸಿದ್ದೇನೆ. ಅವುಗಳನ್ನು ಗಾಜಿನ ಪೆಟ್ಟಿಗೆಯಲ್ಲಿ ಜೋಪಾನ ಮಾಡುತ್ತೇನೆ ಎಂದು ರಾಮ್ ಚೇತ್ ಹೇಳಿದ್ದಾರೆ. ಮಾತ್ರವಲ್ಲ, ರಾಮ್ ಚೇತ್ ಈಗ ತಮ್ಮೂರಿನಲ್ಲಿ 'ಸೆಲೆಬ್ರಿಟಿ' ಆಗಿದ್ದಾರೆ. ರಾಹುಲ್ ಗಾಂಧಿ ಭೇಟಿ ನೀಡಿದ್ದೇ ಆಯಿತು. ಅವರ ಅಂಗಡಿ ಈಗ ಸ್ಥಳೀಯರ ಗಮನ ಸೆಳೆಯುವ ಸ್ಥಳವಾಗಿ ಮಾರ್ಪಟ್ಟಿದೆ. ನಾನಾ ರೀತಿಯ ವಾಹನಗಳಲ್ಲಿ ಜನ ಬಂದು ರಾಮ್ ಚೇತ್‌ನನ್ನು ಕುಟೀರದಿಂದ ಹೊರಗೆ ಕರೆದು ಮಾತನಾಡಿಸುತ್ತಾರೆ.

ಸುಲ್ತಾನಪುರದ ಹೊರವಲಯದ ವಿಧಾಯಕನಗರದಲ್ಲಿ ರಾಮ್ ಚೇತ್ ಚರ್ಮ ಕುಟೀರ ಇಟ್ಟುಕೊಂಡಿದ್ದಾರೆ. ಜುಲೈ 26ರಂದು ರಾಹುಲ್ ಗಾಂಧಿ ಆ ಮಾರ್ಗವಾಗಿ ತೆರಳುತ್ತಿದ್ದ ವೇಳೆ, ಅವರು ರಾಮ್ ಚೇತ್ ಅಂಗಡಿಗೆ ಭೇಟಿ ನೀಡಿ, ಅವರ ವೃತ್ತಿ ವಿಚಾರ, ಕುಟುಂಬ ಹಾಗೂ ಕಷ್ಟಗಳ ಕುರಿತು ಮಾತನಾಡಿದ್ದರು.

ಈ ವೇಳೆ, ಅಲ್ಲೇ ಕೂತು ಮಾತನಾಡುತ್ತಲೇ ಚಪ್ಪಲಿಯನ್ನು ಹೊಲಿದಿದ್ದ ರಾಹುಲ್ ಗಾಂಧಿ, ಅದೇ ವೇಳೆ ಶೂ ಕೂಡ ಸಿದ್ಧಪಡಿಸಿದ್ದರು. ರಾಹುಲ್ ಗಾಂಧಿ ಅವರು ಭೇಟಿ ನೀಡಿದ ನಂತರ ನನ್ನ ಅದೃಷ್ಟವೇ ಖುಲಾಯಿಸಿದೆ. ಈ ಮೊದಲು ನಾನು ಯಾರು ಎಂಬುದೇ ಜನರಿಗೆ ತಿಳಿದಿರಲಿಲ್ಲ. ಈಗ ಜನ ನನ್ನನ್ನು ಗುರುತಿಸುತ್ತಿದ್ದಾರೆ. ಅಂಗಡಿಗೆ ಬಂದು, ನನ್ನ ಜೊತೆ ಸೆಲ್ಫಿ ತೆಗೆದುಕೊಳ್ಳುತ್ತಿದ್ದಾರೆ ಎಂದು ರಾಮ್ ಚೇತ್ ಖುಷಿಯಿಂದ ಹೇಳುತ್ತಾರೆ.

ಇನ್ನೊಂದೆಡೆ, ರಾಮ್ ಚೇತ್ ಎದುರಿಸುತ್ತಿರಬಹುದಾದ ತೊಂದರೆಗಳ ಕುರಿತು ಮಾಹಿತಿ ಪಡೆಯುವುದಕ್ಕಾಗಿ ವಿವಿಧ ಇಲಾಖೆಗಳ ಅಧಿಕಾರಿಗಳು ಅವರನ್ನು ಭೇಟಿ ಮಾಡುತ್ತಿದ್ದಾರೆ.

ರಾಹುಲ್ ಗಾಂಧಿ ಹೊಲಿದಿರುವ ಚಪ್ಪಲಿಗಳನ್ನು ಖರೀದಿಸಲು ಬಹಳಷ್ಟು ಜನರು ಆಸಕ್ತರಾಗಿದ್ದಾರೆ. ಹಲವರಿಂದ ಕರೆಗಳೂ ಬಂದಿವೆಯಂತೆ. ಪ್ರತಾಪಗಢದಿಂದ ಮಂಗಳವಾರ ಕರೆ ಮಾಡಿದ್ದ ವ್ಯಕ್ತಿಯೊಬ್ಬರು 10 ಲಕ್ಷ ರೂಪಾಯಿ ನೀಡಿ ಖರೀದಿಸುವುದಾಗಿ ಹೇಳಿದರಂತೆ. ರಾಹುಲ್ ಗಾಂಧಿಯವರು ಸಿದ್ಧಪಡಿಸಿದ ಚಪ್ಪಲಿ ಖರೀದಿಗೆ ಬೇರೆಯವರಿಗಿಂತ ಹೆಚ್ಚು ನೀಡುವುದಾಗಿ ಹೇಳಿದ ಗರಿಷ್ಠ ಮೊತ್ತ ಎಂದರು.

ಮೊದಲು ಅವರು 5 ಲಕ್ಷ ಕೊಡುವುದಾಗಿ ಹೇಳಿದರು. ಮಾರಾಟ ಮಾಡುವುದಕ್ಕೆ ನಾನು ನಿರಾಕರಿಸಿದೆ. ಆಗ, ಅವರು 10 ಲಕ್ಷ ನೀಡುವುದಾಗಿ ತಿಳಿಸಿದರು. ಇವು ನನ್ನ ಪಾಲಿಗೆ ಅದೃಷ್ಟದ ಪಾದರಕ್ಷೆಗಳಾಗಿದ್ದು, ಇವುಗಳನ್ನು ನಾನು ಮಾರಾಟ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ ಎಂದೂ ಹೇಳಿದ್ದಾರೆ.

ನನ್ನೊಂದಿಗೆ ಅಂಗಡಿಯಲ್ಲಿ ಕುಳಿತು, ಚಪ್ಪಲಿ ಹೊಲಿಯುವ ಮೂಲಕ ರಾಹುಲ್ ಗಾಂಧಿ ನನ್ನ ಪಾಲುದಾರರಾಗಿದ್ದಾರೆ ಎಂದು ಅವರು ಅಭಿಮಾನದ ನಗೆ ಬೀರುತ್ತಿದ್ದಾರೆ.

ರಾಮ್ ಚೇತ್, ಈಗ ವಾಸಿಸುತ್ತಿರುವ ಗುಡಿಸಲಿಗೆ ವಿದ್ಯುತ್ ಸಂಪರ್ಕ ಇಲ್ಲ. ಹಾಗಾಗಿ ಕಾಂಗ್ರೆಸ್ ನಾಯಕ ನೀಡಿದಂತಹ ಪಾದರಕ್ಷೆ ಹೊಲಿಯುವ ಮೆಷಿನ್ ಅನ್ನು ವಿದ್ಯುತ್ ಸಂಪರ್ಕ ಇರುವ ತನ್ನ ಮಗನ ಮನೆಯಲ್ಲಿ ಇರಿಸಿ, ಅಲ್ಲಿಯೇ ಕೆಲಸ ಮಾಡುತ್ತಿರುವುದಾಗಿ ತಿಳಿಸಿದ್ದಾರೆ.

ರಾಮ್ ಚೇತ್ ಪುತ್ರ ರಘುರಾಂ ಕಾಂಗ್ರೆಸ್ ನಾಯಕನ ಭೇಟಿಯಿಂದ ಹರ್ಷಚಿತ್ತನಾಗಿದ್ದು, ಅವರು ತಮ್ಮನ್ನು ಅತ್ಯಂತ ಘನತೆ–ಗೌರವದಿಂದ ಕಂಡರು. ನಾನೇಕೆ ಈ ವೃತ್ತಿಯಲ್ಲಿ ಇಲ್ಲ ಎಂದು ಅವರು ನನ್ನನ್ನು ಕೇಳಿದರು. ನಾನು ಚಮ್ಮಾರಿಕೆ ವೃತ್ತಿ ಮಾಡಿದರೆ ಜನ ಗೌರವ ನೀಡಲ್ಲ ಎಂಬ ಕಾರಣಕ್ಕೆ ಈ ವೃತ್ತಿ ತೊರೆದು, ಕಾರ್ಮಿಕನಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದಾಗಿ ತಿಳಿಸಿದ್ದಾನೆ.

2018ರ ವಿಧಾನಸಭಾ ಚುನಾವಣೆ ಪ್ರಚಾರಕ್ಕಾಗಿ ಕರ್ನಾಟಕ ಪ್ರವಾಸದಲ್ಲಿದ್ದ ರಾಹುಲ್ ಗಾಂಧಿ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದರು. ಈ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ದೂರಿ, ಸುಲ್ತಾನಪುರದ ಬಿಜೆಪಿ ಮುಖಂಡ ವಿಜಯ್ ಮಿಶ್ರಾ ಎಂಬುವವರು 2018ರ ಆಗಸ್ಟ್ 4ರಂದು ರಾಹುಲ್ ಗಾಂಧಿ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಸುಲ್ತಾನಪುರದ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಹಾಜರಾಗುವುದಕ್ಕೆ ತೆರಳಿದ್ದ ರಾಹುಲ್ ಗಾಂಧಿ, ಮಾರ್ಗ ಮಧ್ಯೆ ರಾಮ್ ಚೇತ್ ಅಂಗಡಿಗೂ ಭೇಟಿ ನೀಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಲಿಂಪಿಕ್ಸ್, ಏಷ್ಯನ್ ಗೇಮ್ಸ್‌ನಲ್ಲಿ ಪದಕ ಪಡೆದವರಿಗೆ ನೇಮಕಾತಿ ಪತ್ರ ವಿತರಿಸಿದ ಸಿಎಂ



ಒಲಿಂಪಿಕ್ಸ್, ಏಷ್ಯನ್ ಗೇಮ್ಸ್‌ನಲ್ಲಿ ಪದಕ ವಿಜೇತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇಮಕಾತಿ ಪತ್ರ ವಿತರಿಸಿದರು

ಬೆಂಗಳೂರು, ಆ.4– ಒಲಿಂಪಿಕ್ಸ್ ಹಾಗೂ ಏಷ್ಯನ್ ಗೇಮ್ಸ್‌ನಲ್ಲಿ ಪದಕ ವಿಜೇತರಿಗೆ ಸರ್ಕಾರಿ ಗ್ರೂಪ್ ಎ, ಬಿ ಹುದ್ದೆಗಳ ನೇಮಕಾತಿ ಸಂಬಂಧ 12 ಮಂದಿ ವಿಜೇತರಿಗೆ ಸಿಎಂ ಸಿದ್ದರಾಮಯ್ಯ ಆಫರ್ ಲೆಟರ್ ವಿತರಣೆ ಮಾಡಿದ್ದಾರೆ.

ಹೆಚ್.ಎನ್ ಗಿರೀಶ್, ಟಿ.ಎಸ್ ದಿವ್ಯಾ, ಎನ್.ಉಷಾರಾಣಿ, ಸುಷ್ಮಿತಾ ಪವಾರ್, ನಿಕ್ಕಿನ್ ತಿಮ್ಮಯ್ಯ, ಎಸ್.ವಿ ಸುನೀಲ್, ಮಲಪ್ರಭಾ ಯಲ್ಲಪ್ಪ, ಗುರುರಾಜ, ಎಂ.ಎಸ್ ಶರತ್, ವಿ.ರಾಧಾ, ರಾಘವೇಂದ್ರ, ಕಿಶನ್ ಗಂಗೊಳ್ಳಿ ಅವರಿಗೆ ನೇಮಕಾತಿ ಪತ್ರವನ್ನು ಸಿಎಂ ವಿತರಿಸಿದ್ದಾರೆ.

ನೇಮಕಾತಿ ಪತ್ರ ವಿತರಣೆ ಬಳಿಕ ಮಾತನಾಡಿದ ಸಿಎಂ, ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷ್ಯನ್ ಗೇಮ್ಸ್, ಪ್ಯಾರಾ ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ಪಡೆದ 12 ಜನರಿಗೆ ಅವಕಾಶ ಪತ್ರ ನೀಡಿ ನೇರ ನೇಮಕಾತಿ ಮಾಡುತ್ತಿದ್ದೇವೆ. 2016–17ರಲ್ಲಿ ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ಪದಕ ಪಡೆದವರಿಗೆ ಆದ್ಯತೆ ಮೇರೆಗೆ ಕೆಲಸ ನೀಡುವ ಘೋಷಣೆ ಮಾಡಿದ್ದೆ. ನಂತರ ಬಂದ ಸರ್ಕಾರ ಇದನ್ನು ಮಾಡಲಿಲ್ಲ. ಈಗ ನಾನು ಅಧಿಕಾರಕ್ಕೆ ಬಂದಿದ್ದೇನೆ. ಈಗ ನೇಮಕ ಮಾಡಿಕೊಳ್ಳುತ್ತೇವೆ. ಪದವಿ ಪಡೆದು ಪದಕ ಪಡೆದವರಿಗೆ ಕ್ಲಾಸ್ 1, ಕ್ಲಾಸ್ 2 ಹುದ್ದೆ ಕೊಡುತ್ತಿದ್ದೇವೆ. ಒಬ್ಬರಿಗೆ ಕ್ಲಾಸ್ 1 ಉಳಿದ 11 ಮಂದಿಗೆ ಕ್ಲಾಸ್ 2 ಉದ್ಯೋಗವನ್ನು ಕೊಡುತ್ತಿದ್ದೇವೆ. ಸಮಿತಿಯ ಶಿಫಾರಸ್ಸಿನ ಮೇರೆಗೆ ನೇಮಕಾತಿ ಪತ್ರ ಕೊಡುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ.

ವಯಸ್ಸಿನ ಮಿತಿಯ ವಿನಾಯಿತಿ ನೀಡಿ, 45 ವರ್ಷದವರಿಗೂ ಅವಕಾಶ ನೀಡಿದ್ದೇವೆ. ನಮ್ಮ ಸರ್ಕಾರ ಕ್ರೀಡೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ನೀವೆಲ್ಲ ನಮ್ಮ ರಾಷ್ಟ್ರಕ್ಕೆ ಗೌರವ ಕೊಟ್ಟಿದ್ದೀರಿ ಎಂದು ಪದಕ ಪಡೆದ ಕ್ರೀಡಾಪಟುಗಳನ್ನು ಅವರು ಅಭಿನಂದಿಸಿದ್ದಾರೆ.

ಭಾರತದ ವಿರುದ್ಧ ಶ್ರೀಲಂಕಾಗೆ ಭರ್ಜರಿ ಜಯ

ಕೊಲಂಬೊ, ಆ.4– ಜೆಫ್ರಿ ವಾಂಡರ್ಸೆ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಶ್ರೀಲಂಕಾ, ಭಾರತದ ವಿರುದ್ಧ 32 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಅಂತರದಲ್ಲಿ ಮುನ್ನಡೆ ಸಾಧಿಸಿದೆ.

ಇಲ್ಲಿನ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 240 ರನ್ ಗಳಿಸಿತು. ತಂಡದ ಪರ ಆವಿಷ್ಕಾ ಫರ್ನಾಂಡೋ 40, ಕಸಾಲ್ ಮೆಂಡೀಸ್ 30, ಸಮರವಿಕ್ರಮ 14, ಅಸಲಂಕಾ 25, ಜನಿತ್ ಲಿಯಾನಗೆ 12, ದುನಿತ್ ವೆಲ್ಲಲಾಗೆ 39, ಕಮೀದು ಮೆಂಡೀಸ್ 40, ಧನಂಜಯ 15 ರನ್ ಗಳಿಸಿದರು. ಭಾರತದ ಪರ ವಾಷಿಂಗ್ಟನ್ ಸುಂದರ್ 3, ಕುಲದೀಪ್ ಯಾದವ್ 2, ಅಕ್ಷರ್ ಪಟೇಲ್, ಸಿರಾಜ್ ಮೊಹಮ್ಮದ್ ಸಿರಾಜ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. 241 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 42.2 ಓವರ್‌ಗಳಲ್ಲಿ 208ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ಭಾರತದ ಪರ ರೋಹಿತ್ ಶರ್ಮಾ 64, ಶುಭ್‌ಮನ್ ಗಿಲ್ 35, ವಿರಾಟ್ ಕೊಹ್ಲಿ 14, ಅಕ್ಷರ್ ಪಟೇಲ್ 44, ವಾಷಿಂಗ್ಟನ್ ಸುಂದರ್ 15ರನ್ ಗಳಿಸಿದರು. ಶ್ರೀಲಂಕಾ ಪರ ಕೆಫ್ರಿ ವಾಂಡರ್ಸೆ 6, ಚರಿತ್ ಅಸಲಂಕಾ 3 ವಿಕೆಟ್ ಪಡೆದರು. ಶ್ರೀಲಂಕಾಪರ ವಾಂಡರ್ಸೆ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಒಂದನೇ ಪುಟದಿಂದ

ಓವರ್ ಸ್ಪೀಡ್' ದಂಡದ ನೋಟಿಸ್!

ತಕ್ಷಣವೇ ಅದಕ್ಕೆ ಸ್ಪಂದಿಸಿದ ಎಡಿಜಿಪಿ ಅಲೋಕ್‌ಕುಮಾರ್, ಕ್ಯಾಮರಾದಲ್ಲಿ ಸೆರೆಯಾಗಿದ್ದ ಕಾರಿನ ಚಿತ್ರವನ್ನು ರೀಟ್ವೀಟ್ ಮಾಡಿ "ಇದು ನಿಮ್ಮ ವಾಹನವೇ" ಎಂದು ಪ್ರಶ್ನಿಸಿದ್ದಾರೆ. ಆಗ ದೀಪಕ್‌ಕುಮಾರ್ ಅದು ಬಿಎಂಡಬ್ಲ್ಯೂ ಕಾರ್ ಆಗಿದ್ದು, ನನ್ನದು ಬೈಕ್ ಎಂದು ಉತ್ತರಿಸಿದ್ದಾರೆ. ನಂತರ ಮತ್ತೆ ರೀಟ್ವೀಟ್ ಮಾಡಿದ ಅಲೋಕ್‌ಕುಮಾರ್, "ಕಾರಿನ ಸಂಖ್ಯೆಯ ಮಧ್ಯದಲ್ಲಿರುವ 'M' ಅಕ್ಷರವನ್ನು ತಂತ್ರಜ್ಞಾನ 'H' ಎಂದು ಓದಿಕೊಂಡಿದೆ. ಅದನ್ನು ಸರಿಪಡಿಸಲಾಗುವುದು ಎಂದು ಆಶ್ವಾಸನೆ ನೀಡಿದ್ದಾರೆ. ನಂತರ ದೀಪಕ್‌ಕುಮಾರ್ ತಾವು ದಂಡದಿಂದ ಪಾರಾದೆ ಎಂದು ನಿಟ್ಟುಸಿರು ಬಿಟ್ಟಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ವೇಗದ ಮಿತಿ 100 ಕಿ.ಮೀ.ಗೆ ನಿಗದಿಪಡಿಸಲಾಗಿದೆ. ಈ ಎಕ್ಸ್‌ಪ್ರೆಸ್‌ವೇನಲ್ಲಿ ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನೇಷನ್ (ಎಎನ್‌ಪಿಆರ್) ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಈ ಕ್ಯಾಮರಾಗಳು ಸಂಚಾರ ನಿಯಮ ಉಲ್ಲಂಘಿಸಿದ ವಾಹನಗಳ ದೃಶ್ಯ ಸೆರೆ ಹಿಡಿಯುತ್ತವೆ. ಇದನ್ನಾಧರಿಸಿ ಪೊಲೀಸರು ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಮಾಲೀಕರಿಗೆ ನೋಟಿಸ್ ಜಾರಿ ಮಾಡುತ್ತಾರೆ. ಆದರೆ, ಕೆಲವೊಮ್ಮೆ ದೀಪಕ್‌ಕುಮಾರ್ ಅವರಿಗೆ ಆದಂತಹ ಅವಾಂತರಗಳು ಸಂಭವಿಸುತ್ತವೆ. ವಿಶೇಷವೆಂದರೆ ಎಡಿಜಿಪಿ ಅಲೋಕ್‌ಕುಮಾರ್ ಅವರು, ತಮ್ಮ ಗಮನಕ್ಕೆ ತಂದ ತಕ್ಷಣ ತಪ್ಪನ್ನು ಸರಿಪಡಿಸುವ ಕೆಲಸವನ್ನು ಮಾಡುತ್ತಿರುವುದು ಸಮಾಧಾನಕರ ಸಂಗತಿ.

ಭೂಕುಸಿತ: ಮನೆಗಳಿಗೆ ನುಗ್ಗಿ ಕಳ್ಳತನ

ಎಂದು ಜನರು ದೂರಿದ್ದಾರೆ. ದುರಂತ ನಡೆದ ಸ್ಥಳದಲ್ಲಿ ಜನವಸತಿ ಇರದ ಕಾರಣ ಕಳ್ಳರು ಅದರ ಲಾಭ ಪಡೆದುಕೊಳ್ಳುತ್ತಿದ್ದು, ಮನೆಯಲ್ಲಿನ ಮೌಲ್ಯಯುತ ವಸ್ತುಗಳು ಕಳ್ಳತನವಾಗುತ್ತಿವೆ. ಹೀಗಾಗಿ ಕ್ರಮ ಕೈಗೊಳ್ಳಬೇಕು ಎಂದು ಸಂತ್ರಸ್ತರು ಅಳಲು ತೋಡಿಕೊಂಡಿದ್ದಾರೆ. ಈ ಹಿನ್ನೆಲೆ ಘಟನೆ ನಡೆದ ಸ್ಥಳಗಳಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದಾರೆ. ಭೂಕುಸಿತದ ಸಂದರ್ಭದಲ್ಲಿ ಪ್ರಾಣ ರಕ್ಷಣೆಗಾಗಿ ಮನೆಗಳನ್ನು ತೊರೆದು ರೆಸಾರ್ಟ್‌ನಲ್ಲಿ ತಂಗಿದ್ದೇವೆ. ಆದರೆ ಪರಿಸ್ಥಿತಿ ಅವಲೋಕನಕ್ಕಾಗಿ ಮನೆಯ ಬಳಿ ತೆರಳಿದ್ದಾಗ ಬಾಗಿಲುಗಳು ಮುರಿದುಕೊಂಡಿತ್ತು, ಬಟ್ಟೆಗಳು ಹಾಗೂ ಕೆಲವು ವಸ್ತುಗಳು ನಾಪತ್ತೆಯಾಗಿವೆ ಎಂದು ಸಂತ್ರಸ್ತರೊಬ್ಬರು ಹೇಳಿದ್ದಾರೆ.

ರಾತ್ರಿ ವೇಳೆ ಕಳ್ಳತನ ಮಾಡುವ ಉದ್ದೇಶದಿಂದ ಈ ಪ್ರದೇಶಕ್ಕೆ ನುಗ್ಗುವವರನ್ನು ಗುರುತಿಸಿ ಶಿಕ್ಷಿಸಬೇಕು ಎಂದು ಕೆಲ ಸಂತ್ರಸ್ತರು ಅಧಿಕಾರಿಗಳಿಗೆ ಒತ್ತಾಯಿಸಿದ್ದಾರೆ. ದುರಂತದಲ್ಲಿ ಎಲ್ಲವನ್ನೂ ಕಳೆದುಕೊಂಡಿದ್ದೇವೆ. ಈಗ ಮನೆಗಳಲ್ಲಿ ಅಳಿದುಳಿದ ವಸ್ತುಗಳೂ ಕೂಡ ಕಳ್ಳರ ಪಾಲಾಗುತ್ತಿವೆ ಎಂದಿದ್ದಾರೆ. ಚೂರಲ್‌ಮಲ, ಮುಂಡಕ್ಕೈ ಗ್ರಾಮಗಳಲ್ಲಿ ಅವಶೇಷಗಳಡಿ ಸಿಲುಕಿರುವ ಮೃತದೇಹಗಳ ಪತ್ತೆ ಕಾರ್ಯ ಮುಂದುವರಿದಿದ್ದು, ರಾತ್ರಿ ಹೊತ್ತು ಪೊಲೀಸರ ಅನುಮತಿಯಿಲ್ಲದೆ ಗ್ರಾಮಕ್ಕೆ ಯಾರಿಗೂ ಪ್ರವೇಶವಿಲ್ಲ. ಹೀಗಿದ್ದೂ ಕಳ್ಳತನ ಪ್ರಕರಣಗಳ ಬಗ್ಗೆ ದೂರು ಬಂದ ಹಿನ್ನೆಲೆ ರಾತ್ರಿ ವೇಳೆ ಗಸ್ತಿಗೆ ಆದೇಶಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅಧಿಕಾರಿಗಳು, ಚೂರಲ್ಮಲಾ, ಮುಂಡಕ್ಕೈ ಸೇರಿದಂತೆ ವಿಪತ್ತು ಪೀಡಿತ ಪ್ರದೇಶಗಳಲ್ಲಿ ಪೊಲೀಸ್ ಗಸ್ತು ಆರಂಭಿಸಲಾಗಿದೆ. ಭೂಕುಸಿತ ಪೀಡಿತ ಪ್ರದೇಶಗಳಿಗೆ ಅಥವಾ ಸಂತ್ರಸ್ತರ ಮನೆಗಳಿಗೆ ರಾತ್ರಿಯಲ್ಲಿ ಅನುಮತಿಯಿಲ್ಲದೆ ಪ್ರವೇಶಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ರಕ್ಷಣಾ ಕಾರ್ಯಾಚರಣೆಯ ಹೆಸರಿನಲ್ಲಿ ಅಥವಾ ರಾತ್ರಿಯಲ್ಲಿ ಪೊಲೀಸರ ಅನುಮತಿಯಿಲ್ಲದೆ ಪೀಡಿತ ಪ್ರದೇಶಗಳಿಗೆ ಅಥವಾ ಮನೆಗಳಿಗೆ ಪ್ರವೇಶಿಸಲು ಯಾರಿಗೂ ಅವಕಾಶವಿಲ್ಲ ಎಂದು ಖಡಕ್ ಆದೇಶ ನೀಡಿದ್ದಾರೆ.

ಘೋಷಿಸುವ ಬಗ್ಗೆ ಪರಿಶೀಲನೆ

ಭೂಕುಸಿತದ ಮೌಲ್ಯಮಾಪನದ ಬಳಿಕ ಕೇಂದ್ರ ಸರ್ಕಾರವು ಕಾನೂನು ಅಂಶಗಳನ್ನು ಪರಿಶೀಲಿಸಲಿದೆ. ಭೂಕುಸಿತ ಪರಿಣಾಮ ಕುರಿತು ಅಧ್ಯಯನ ನಡೆಸಬೇಕಾಗಿದೆ ಎಂದು ತಿಳಿಸಿದ್ದಾರೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿರುವ ರಕ್ಷಣಾ ಸಿಬ್ಬಂದಿಗಳೊಂದಿಗೆ ಸಚಿವ ಸುರೇಶ್ ಗೋಪಿ ಸಂವಾದ ನಡೆಸಿದರು. ಪ್ರವಾಹ ಪೀಡಿತ ಪ್ರದೇಶಗಳ ಸ್ಥಿತಿಯ ಕುರಿತ ವಿವರವನ್ನು ಕೇಂದ್ರ ಸರ್ಕಾರದ ಮುಂದಿಡುತ್ತೇನೆ. ಕೇಂದ್ರದಿಂದ ನೀಡಲಾಗುವ ನೆರವಿಗೆ ಸಂಬಂಧಿಸಿದಂತೆ ರಾಜ್ಯವು ಭೂಕುಸಿತದ ಪರಿಣಾಮವನ್ನು ಅಂದಾಜು ಮಾಡಿ ಮನವಿ ಸಲ್ಲಿಸಬೇಕು. ಆ ಬಳಿಕವಷ್ಟೇ ನೆರವು ನೀಡುವ ಬಗ್ಗೆ ಏನಾದರೂ ಹೇಳಬಹುದು ಎಂದು ಅವರು ತಿಳಿಸಿದ್ದಾರೆ.

ಆನ್‌ಲೈನ್ ಟ್ರೇಡಿಂಗ್ ವ್ಯವಹಾರದಲ್ಲಿ ನಿವೃತ್ತರಿಗೆ ಕೋಟಿಗೂ ಹೆಚ್ಚು ವಂಚನೆ

ಮೈಸೂರು, ಆ.4(ಎಸ್‌ಬಿಡಿ)– ಫೇಸ್‌ಬುಕ್‌ನಲ್ಲಿ ಕಂಡ ಲಿಂಕ್ ಮೇಲೆ ಕ್ಲಿಕ್ ಮಾಡುವ ಮೂಲಕ ಟ್ರೇಡಿಂಗ್ ವ್ಯವಹಾರಕ್ಕಿಳಿದ ನಿವೃತ್ತರೊಬ್ಬರು ಒಂದು ಕೋಟಿಗೂ ಹೆಚ್ಚು ಹಣ ಕಳೆದುಕೊಂಡಿರುವ ಪ್ರಕರಣ ಮೈಸೂರಿನಲ್ಲಿ ವರದಿಯಾಗಿದೆ.

ಇಲ್ಲಿನ ಕುವೆಂಪುನಗರದ ನಿವಾಸಿ, 59 ವರ್ಷದ ನಿವೃತ್ತರೊಬ್ಬರು ಟ್ರೇಡಿಂಗ್‌ನಲ್ಲಿ 1,07,17,828 ರೂ. ಹೂಡಿಕೆ ಮಾಡಿ ವಂಚನೆಗೊಳಗಾಗಿದ್ದು, ಈ ಸಂಬಂಧ ಶನಿವಾರ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಇವರು ಕಳೆದ ಜೂನ್ 17ರಂದು ಫೇಸ್‌ಬುಕ್‌ನಲ್ಲಿ ಕಾಣಿಸಿದ ಟ್ರೇಡಿಂಗ್‌ಗೆ ಸಂಬಂಧಿಸಿದ ಜಾಹಿರಾತು ಲಿಂಕ್ ಮೇಲೆ ಕ್ಲಿಕ್ ಮಾಡಿದ್ದಾರೆ. ನಂತರ ಅವರ ಮೊಬೈಲ್ ಸಂಖ್ಯೆ GOLD MAN SACHS ವಾಟ್ಸಾಪ್ ಗ್ರೂಪ್‌ಗೆ ಜೋಡಣೆಯಾಗಿದೆ. ಬಳಿಕ ಇವರ ವಿವರವನ್ನು ಪಡೆದು ಕೂಡಲೇ ವಿಐಪಿ ಗ್ರೂಪ್‌ಗೆ ಸೇರಿಸಲಾಗಿದೆ. ಆ ಗ್ರೂಪ್‌ನ ಇತರೆ ಸದಸ್ಯರು ಹೂಡಿಕೆ ಮಾಡಿ, ಲಾಭ ಗಳಿಸಿರುವ ವಿವರದ ಸ್ಕ್ರೀನ್‌ಶಾಟ್‌ಗಳನ್ನು ಹಂಚಿಕೊಂಡಿದ್ದಾರೆ. ಇದರಿಂದ ವ್ಯವಹಾರದ ಬಗ್ಗೆ ನಂಬಿಕೆ ಬಂದು, ತಾವೂ ಹೂಡಿಕೆ ಮಾಡಿ, ಲಾಭಗಳಿಸಲು ಮುಂದಾಗಿದ್ದಾರೆ.

ಗ್ರೂಪ್‌ನಲ್ಲಿ ಅಡ್ಮಿನ್ ಸೂಚಿಸಿದ ಲಿಂಕ್ ಕ್ಲಿಕ್ ಮಾಡಿದಾಗ ಟ್ರೇಡಿಂಗ್‌ಗೆ ಸಂಬಂಧಿಸಿದ ವೆಬ್‌ಪೇಜ್ ಓಪನ್ ಆಗಿದೆ. ಹಂತ ಹಂತವಾಗಿ ಎಲ್ಲಾ ವಿವರವನ್ನು ದಾಖಲಿಸಿದಾಗ ಖಾತೆ ತೆರೆದಿದೆ. ನಂತರ ಷೇರು ಖರೀದಿಸಲು ಅವರು ಸೂಚಿಸಿದ ಬ್ಯಾಂಕ್ ಖಾತೆಗೆ ಹಣ ಹೂಡಿಕೆ ಮಾಡಿದ್ದಾರೆ. ಕೆಲ ದಿನಗಳ ನಂತರ 1.50 ಕೋಟಿ ರೂ. ಪ್ರಾಫಿಟ್ ಬಂದಿರುವುದಾಗಿ ಟ್ರೇಡಿಂಗ್ ಖಾತೆಯಲ್ಲಿ ತೋರಿಸಿದೆ. ಅದನ್ನು ವಿತ್‌ಡ್ರಾ ಮಾಡಲು ಮುಂದಾದಾಗ ಶೇ.10ರಷ್ಟು ಕಮಿಷನ್ ಹಣವನ್ನು ಪಾವತಿಸಬೇಕು ಎಂದು ತಿಳಿಸಿದ್ದಾರೆ. ಹಾಗೆಯೇ ಇವರು ಕಮಿಷನ್ ಹಣ ಪಾವತಿಸಿದರೂ ವಿತ್‌ಡ್ರಾ ಮಾಡಲು ಸಾಧ್ಯವಾಗಿಲ್ಲ. ಎಷ್ಟು ಬಾರಿ ಪ್ರಯತ್ನಿಸಿದರೂ ಒಂದಿಲ್ಲೊಂದು ಕಾರಣ ಹೇಳಿ ವಿತ್‌ಡ್ರಾಗೆ ಅಡ್ಡಿ ಮಾಡಿದ್ದರಿಂದ ತಾವು ಮೋಸ ಹೋಗಿರುವುದು ಗೊತ್ತಾಗಿ ಪೊಲೀಸರಿಗೆ ದೂರು ನೀಡಿದ್ದಾರೆ.

ಶ್ರೀ ವೀರಭದ್ರೇಶ್ವರ ಸ್ವಾಮಿ ಜನ್ಮೋತ್ಸವ, ರಥೋತ್ಸವ

ಮೈಸೂರು, ಆ.4(ಎಸ್‌ಪಿಎನ್)– ಮೈಸೂರಿನ ಕೆ.ಆರ್.ಮೊಹಲ್ಲಾದಲ್ಲಿರುವ ಡಿ.ಬನುಮಯ್ಯ ರಸ್ತೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ ಸಹಯೋಗದಲ್ಲಿ ಶ್ರಾವಣ ಮಾಸದ ಪೂಜೆ ಹಿನ್ನೆಲೆಯಲ್ಲಿ ಆ.6ರಂದು ಶ್ರೀ ವೀರಭದ್ರಸ್ವಾಮಿ ಜನ್ಮೋತ್ಸವ ಹಾಗೂ ರಥೋತ್ಸವ ಕಾರ್ಯಕ್ರಮ ಜರುಗಲಿದೆ.

ಈ ಕಾರ್ಯಕ್ರಮದಲ್ಲಿ ಬಸವಾಪಟ್ಟಣದ ಶ್ರೀ ತೋಂಟದಾರ್ಯ ಮಠದ ಶ್ರೀ ಸ್ವತಂತ್ರ ಬಸವಲಿಂಗ ಶಿವಯೋಗಿಗಳು ಸೇರಿದಂತೆ ಇತರೆ ಗಣ್ಯರು ಭಾಗವಹಿಸುವರು. ಹೆಚ್ಚಿನ ವಿವರಗಳಿಗೆ ದೇವಸ್ಥಾನದ ಪ್ರಧಾನ ಅರ್ಚಕ ಎಂ.ಎನ್.ಮಹೇಶ್ ಅವರನ್ನು ಮೊ: 94493–91379 ಸಂಪರ್ಕಿಸಬಹುದು.

ಮೈಸೂರು ಮಿತ್ರ ಸೋಮವಾರ 5 ಆಗಸ್ಟ್ 2024

ನಾಳೆಯಿಂದ ಕೆಆರ್‌ಎಸ್ ಹಿನ್ನೀರಿನಲ್ಲಿ ಜೂನಿಯರ್ ನ್ಯಾಷನಲ್ಸ್ ಸೇಲಿಂಗ್ ಕ್ರೀಡೆ

ಆಗಮಿಸಲಿವೆ ಭಾರತೀಯ ಸೇನೆ, ನೌಕಾಪಡೆಯ ಬೋಟಿಂಗ್ ತುಕಡಿಗಳು

ಮೈಸೂರು,ಆ.4(ಪಿಎಂ)– ಯಾಚ್ಟಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ (ವೈಎಐ) ವತಿಯಿಂದ ಜೂನಿಯರ್ ನ್ಯಾಷನಲ್ಸ್ 2024 (ರ್‍ಯಾಂಕಿಂಗ್ ಈವೆಂಟ್) ಸೇಲಿಂಗ್ (ನೌಕಾಯಾನ) ಕ್ರೀಡೆಯು ಕೆಆರ್‌ಎಸ್ ಹಿನ್ನೀರಿನಲ್ಲಿ ಆ.6ರಿಂದ 10ರವರೆಗೆ ನಡೆಯಲಿದೆ.

ದೇಶದ ವಿವಿಧ ಭಾಗಗಳಿಂದ 140ಕ್ಕೂ ಹೆಚ್ಚು ನಾವಿಕರು ಜೂನಿಯರ್ ರಾಷ್ಟ್ರೀಯ ರ್‍ಯಾಂಕಿಂಗ್‌ಗಾಗಿ ಸ್ಪರ್ಧಿಸಲಿದ್ದಾರೆ. ಭಾರತೀಯ ಸೇನೆ ಮತ್ತು ನೌಕಾಪಡೆಯ ತುಕಡಿಗಳಿಂದ ಇಂದು ಬೆಳಗ್ಗೆ ಅಭ್ಯಾಸ ಹಾಗೂ ದೋಣಿ ಪರೀಕ್ಷೆ ಪ್ರಾರಂಭಿಸಲಾಗಿದ್ದು, ಹೆಚ್ಚಿನ ಸ್ಪರ್ಧಿಗಳು ಆ.6ರಂದು ಆಗಮಿಸಲಿದ್ದಾರೆ.

ರಾಯಲ್ ಮೈಸೂರು ಸೇಲಿಂಗ್ ಕ್ಲಬ್ (ಆರ್‌ಎಂಎಸ್‌ಸಿ), ರಾಯಲ್ ಮದ್ರಾಸ್ ಯಾಚ್ ಕ್ಲಬ್ ಮತ್ತು ಕರ್ನಾಟಕ ಸ್ಟೇಟ್ ಸೇಲಿಂಗ್ ಅಸೋಸಿಯೇಷನ್ ಹಾಗೂ ವೈಎಐ ಸಂಯುಕ್ತಾಶ್ರಯದಲ್ಲಿ ಈ ಸೇಲಿಂಗ್ ಕ್ರೀಡೆ ಆಯೋಜಿಸಿದ್ದು ಕೆಆರ್‌ಎಸ್ ಹಿನ್ನೀರಿನಲ್ಲಿ ಆಯೋಜಿಸಿರುವ 3ನೇ ಸೇಲಿಂಗ್ ಕ್ರೀಡೆ ಇದಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಕೆಆರ್‌ಎಸ್ ಹಿನ್ನೀರು ಒಳನಾಡಿನ ನೌಕಾಯಾನಕ್ಕೆ ಸೂಕ್ತವಾಗಿದೆ. ಅಲ್ಲದೆ, ಅನುಕೂಲಕರ ಗಾಳಿಯ ವೇಗ ಹಾಗೂ ತಾಪಮಾನ ಹೊಂದಿದೆ. ನೋಂದಣಿ ಮತ್ತು ದೋಣಿ ಮಾಪನ ಪ್ರಕ್ರಿಯೆಯು ಆ.7ರಂದು ನಡೆಯಲಿದ್ದು, ಬಳಿಕ ಮತ್ತೊಂದು ಅಭ್ಯಾಸ ನಡೆಯಲಿದೆ. ರೇಸಿಂಗ್ ಆ.8ರಿಂದ 10ರವರೆಗೆ ನಡೆಯಲಿದೆ. ಈ ರೇಸಿಂಗ್‌ನಲ್ಲಿ 15 ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಈ ರೇಸಿಂಗ್ ಮೂಲಕ ರಾಷ್ಟ್ರೀಯ, ಏಷ್ಯನ್ ಗೇಮ್ಸ್ ಮತ್ತು ಒಲಿಂಪಿಕ್‌ನಲ್ಲಿ ದೇಶವನ್ನು ಪ್ರತಿನಿಧಿಸುವ ಪಟುಗಳಿಗೆ ಉತ್ತೇಜನ ನೀಡುವ ಗುರಿ ಹೊಂದಿದ್ದು, 8ರಿಂದ 18 ವರ್ಷದ ಮಕ್ಕಳಿಗೆ ಅವರ ಕೌಶಲದ ಆಧಾರದ ಮೇಲೆ ರ್‍ಯಾಂಕಿಂಗ್ ನೀಡಲಾಗುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.



ಕೆಆರ್‌ಎಸ್ ಹಿನ್ನೀರಿನಲ್ಲಿ ಸೇಲಿಂಗ್ ಕ್ರೀಡೆ ಪ್ರಾರಂಭಗೊಳ್ಳುವ ಹಿನ್ನೆಲೆಯಲ್ಲಿ ಬೋಟಿಂಗ್ ತುಕಡಿಗಳಿಂದ ಭಾನುವಾರ ಪರಿಶೀಲನೆ ನಡೆಸಲಾಯಿತು.

ಒತ್ತುವರಿ ತೆರವಿಗೆ ಆಗ್ರಹಿಸಿ ಗ್ರಾಮಸ್ಥರಿಂದ ರಸ್ತೆ ತಡೆ



ಒತ್ತುವರಿ ತೆರವಿಗೆ ಆಗ್ರಹಿಸಿ ಹಲ್ಲೇಗೆರೆ, ಚಂದಗಾಲು ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸುತ್ತಿರುವುದು.

ಮಂಡ್ಯ,ಆ.4– ಹಲ್ಲೇಗೆರೆ ಸಂತೇಮಾಳ ಸ್ಥಳ ಮತ್ತು ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಒತ್ತುವರಿ ತೆರವುಗೊಳಿಸಬೇಕು ಎಂದು ಆಗ್ರಹಿಸಿ ಹಲ್ಲೇಗೆರೆ ಮತ್ತು ಚಂದಗಾಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರು ಮತ್ತು ಸದಸ್ಯರು ರಸ್ತೆ ತಡೆ ಮಾಡಿ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮ ಪಂಚಾಯಿತಿ ಸದಸ್ಯ ಕೃಷ್ಣ, ಶಿರಾ ಮತ್ತು ಮಂಡ್ಯ ರಾಜ್ಯ ಹೆದ್ದಾರಿಗೆ ಸಂಬಂಧಿಸಿದಂತೆ ಕಳೆದ ಎರಡು ವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ, ಆದರೆ ರಸ್ತೆ ದುರಸ್ತಿ ಕಾರ್ಯ ಮಾತ್ರ ಪರಿಪೂರ್ಣವಾಗಿಲ್ಲ, ನಮ್ಮ ಗ್ರಾಮದ ಸಂತೇಮಾಳವನ್ನು ಕಡೆಗಣಿಸಿ ಅದರ ಸ್ಥಳವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಉತ್ತಮ ರಸ್ತೆ ನಿರ್ಮಿಸುವ ಮೂಲಕ ರಾಜ್ಯ ಹೆದ್ದಾರಿಯಲ್ಲಿ ಮುಕ್ತವಾಗಿ ಸಂಚಾರ ಮಾಡಲು ಅವಕಾಶ ಮಾಡಿಕೊಡಬೇಕು. ಈಗ ನಕಲಿ ಆರ್‌ಟಿಸಿ ಸೃಷ್ಟಿಸಿಕೊಂಡಿರುವ ಕೆಲವು ಸಂತೇಮಾಳದ ಸ್ಥಳದವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಿ ತಕ್ಷಣವೇ ಉಪಯೋಗಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ರೈತ ಸಂಘದ ಮುಖಂಡ ಹಲ್ಲೇಗೆರೆ ಹರೀಶ್ ಮಾತನಾಡಿ, ರಸ್ತೆ ಅಭಿವೃದ್ಧಿಯಾಗಿದೆ ಎಂದು ನಮ್ಮ ಭಾಗದ ರಸ್ತೆಯ ಹಣವನ್ನು ಗುತ್ತಿಗೆದಾರ ತೆಗೆದುಕೊಂಡಿದ್ದಾನೆ, ಒಂದು ಭಾಗದ ರಸ್ತೆ ಕಡೆಯವರು ಒತ್ತುವರಿಯಾಗಿದೆ ಎಂದರೆ ಮತ್ತೊಂದು ಬದಿಯ ಜನರು ಒತ್ತುವರಿಯಾಗಿಲ್ಲ ಎನ್ನುತ್ತಾರೆ, ಇದನ್ನು ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ನಿರ್ಲಕ್ಷ್ಯ ಮಾಡಿದೆ. ನಿಜವಾಗಲೂ ರಸ್ತೆ ಒತ್ತುವರಿಯಾಗಿದ್ದರೆ ಅವರಿಗೆ ಪರಿಹಾರ ನೀಡಬೇಕು. ಜೊತೆಗೆ ಒತ್ತುವರಿ ಮಾಡಿಕೊಂಡಿರುವ ಕಡೆ ತೆರವುಗೊಳಿಸಿ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಮುಖಂಡ ಚಲ್ಲನಾಯಕನಹಳ್ಳಿ ಸುರೇಶ್ ಮಾತನಾಡಿ, ಕರ್ನಾಟಕ ರಾಜ್ಯ ರಸ್ತೆಯು 2002ರಲ್ಲಿ ಡಿಪಿಆರ್ ಆಗಿದೆ ಅದರ ಕಾಪಿ ಇದೆ, ಎಲ್ಲಿ ಒತ್ತುವರಿಯಾಗಿದೆ ಎಂಬುದನ್ನು ತಿಳಿದು ಬಿಡಿಸಬೇಕು. ಈ ಹಿಂದೆ ಭೂಸ್ವಾಧೀನ ಆಗಿರುವುದನ್ನು ಬಿಟ್ಟು ಬೇರೆ ಜಾಗವನ್ನು ತೆಗೆದುಕೊಂಡಿದ್ದಾರೆ, ಅದನ್ನು ಬಿಟ್ಟು ಮೂಲ ಭೂ ಸ್ವಾಧೀನವಾಗಿರುವ ಕಡೆ ರಸ್ತೆ ನಿರ್ಮಾಣ ಮಾಡಿ ರೈತರಿಗೆ ಪರಿಹಾರ ನೀಡಲಿ ಎಂದು ಒತ್ತಾಯಿಸಿದರು.

ಕಳೆದ ವಾರದ ಹಿಂದೆ ಬಂದ ಎಸಿ ಮತ್ತು ತಹಶೀಲ್ದಾರ್, ಜಿಲ್ಲಾ ಪಂಚಾಯ್ತಿ ಸಿಇಒ ಅವರು ಸ್ಥಳ ಪರಿಶೀಲನೆ ಮಾಡಿದ್ದಾರೆ, ಮೂಲ ರಸ್ತೆ ಎಲ್ಲಿ ಹೋಗಬೇಕು ಎನ್ನುವುದನ್ನು ತಿಳಿಸಿದ್ದಾರೆ, 2010 ರಲ್ಲಿಯೂ ಈ ಹಿಂದೆ ಆದಂತಹ ಡಿಪಿಆರ್ ಅನ್ನು ಮುಂದುವರಿಸುತ್ತಾರೆ, ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿಗೆ ಹೇಳಿದರೆ ನಮ್ಮ ಜನರ ಮೇಲೆಯೇ ಆರೋಪ ಮಾಡುತ್ತಾರೆ, ಅವರಿಗೆ ಒಂದು ಮತಕ್ಕೂ ನಾವು ಬೇಕಿತ್ತು ಈಗ ಬೇಡ, ಅದೇ ಶಾಸಕ ರವಿ ಕುಮಾರ್ ಗಣಿಗ ಅವರು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಧರಣಿಯಲ್ಲಿ ಗ್ರಾ.ಪಂ.ಅಧ್ಯಕ್ಷೆ ಸುಮ, ಉಪಾಧ್ಯಕ್ಷೆ ಭಾಗ್ಯಮ್ಮ, ಮುಖಂಡರಾದ ನಿಂಗರಾಜು, ಸಿ.ಕೆ.ಪಾಪಯ್ಯ, ಕರೀಗೌಡ, ಚಲ್ಲನಾಯಕನಹಳ್ಳಿ ಶಂಕರ್, ರಾಜಣ್ಣ, ದಯಾನಂದ, ರಾಮಲಿಂಗಯ್ಯ, ಮಣಿ, ಶಶಿ, ವಿಜಯೇಂದ್ರ ಭಾಗವಹಿಸಿದ್ದರು.

ಆ.7 ರಿಂದ ಉದರ ದರ್ಶಕ ಶಸ್ತ್ರಚಿಕಿತ್ಸಾ ಶಿಬಿರ

ಮಂಡ್ಯ,ಆ.4– ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಆ.7 ರಿಂದ ಆ.28 ರವರೆಗೆ ಉದರ ದರ್ಶಕ ಶಸ್ತ್ರಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಆ.7–ಕೀಲಾರ, 9–ಚಿನಕುರಳಿ, 13–ಅರಕೆರೆ, 14–ಕೆ.ಆರ್.ಪೇಟೆ, 17–ಕಿರುಗಾವಲು, 20–ಪಾಂಡವಪುರ, 21–ಬಿಂಡಿಗನವಿಲೆ ಮತ್ತು ನಾಗಮಂಗಲ, 22–ಮದ್ದೂರು, 23–ಮಂಡ್ಯ, 27–ಕೆ.ಎಂ ದೊಡ್ಡಿ, 28 ಶಿವಳ್ಳಿ ಆರೋಗ್ಯ ಕೇಂದ್ರಗಳಲ್ಲಿ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ.

ಕನಗನಹಳ್ಳಿ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕನಗನಹಳ್ಳಿ ಹಾಲು ಉತ್ಪಾದಕರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ಚಿನಕುರಳಿ,ಆ.4– ಕನಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಚಂದ್ರಶೇಖರ್, ಉಪಾಧ್ಯಕ್ಷರಾಗಿ ನಾಗರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚಂದ್ರಶೇಖರ್, ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಬಿಟ್ಟರೆ ಬೇರೆ ಯಾರೂ ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಚಂದ್ರಶೇಖರ್ ಹಾಗೂ ಉಪಾಧ್ಯಕ್ಷರಾಗಿ ನಾಗರಾಜು ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಚುನಾವಣಾಧಿಕಾರಿ ಶೋಭಾ ಘೋಷಿಸಿದರು.

ನೂತನ ಅಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ನಾಗರಾಜು ಅವರನ್ನು ಎಲ್ಲಾ ನಿರ್ದೇಶಕರು, ಮುಖಂಡರು ಅಭಿನಂದಿಸಿದರು.

ಚಿನಕುರಳಿ ಡೇರಿ ಅಧ್ಯಕ್ಷ ಸಿ.ಶಿವಕುಮಾರ್ ಮಾತನಾಡಿ, ಕನಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ತನ್ನದೆಯಾದ ಇತಿಹಾಸವಿದ್ದು 1979ರಲ್ಲಿ ಸ್ಥಾಪನೆಯಾಗಿದೆ ಇಂತಹ ಇತಿಹಾಸ ಹೊಂದಿರುವ ಡೇರಿಯ ಅಧ್ಯಕ್ಷರಾಗಿ ಚಂದ್ರ ಶೇಖರ್, ನಾಗರಾಜು, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹೈನುಗಾರಿಕೆ ಗ್ರಾಮೀಣ ಪ್ರದೇಶದ ರೈತರ ಬದುಕು ನಿರ್ವಹಣೆಗೆ ಸಹಕಾರಿಯಾಗಿದೆ. ಮುಂದಿನ ದಿನಗಳಲ್ಲಿ ಎಲ್ಲರು ಸೇರಿ ಡೇರಿ ಅಭಿವೃದ್ಧಿಗೆ ಪೂರಕವಾಗಿ ಶ್ರಮಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಚಿನಕುರಳಿ ಡೇರಿ ಅಧ್ಯಕ್ಷ ಸಿ.ಶಿವಕುಮಾರ್, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಅಂಕೇಗೌಡನಕೊಪ್ಪಲು ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ (ಪಾಪಣ್ಣ), ಮಹಮದ್ ಇಮ್ತೀಯಾಜ್ ಪಾಷ್, ನಿರ್ದೇಶಕರಾದ ರಾಜೇಶ್, ಯೋಗೇಶ್, ನಿಂಗರಾಜು, ಮಂಜುನಾಥ್, ಟಿ.ಸತೀಶ್, ಪ್ರಕಾಶ್, ಯೋಗೇಂದ್ರ ಮಂಜುಳ, ನಾಗಮ್ಮ, ಎಸ್.ಸ್ವಾಮಿ, ಕಾರ್ಯದರ್ಶಿ ಲೋಕೇಶ್, ಗ್ರಾಪಂ ಸದಸ್ಯರಾದ ನಾಗೇಗೌಡ, ಹೇಮಣ್ಣ, ಕೃಷ್ಣೇಗೌಡ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಹಾಜರಿದ್ದರು.

ಸುಪ್ರೀಂಕೋರ್ಟ್ ತೀರ್ಪಿಗೆ ಸಂಭ್ರಮಾಚರಣೆ



ದಲಿತರಲ್ಲಿ ಅವಕಾಶ ವಂಚಿತ ಸಮುದಾಯಗಳಿಗೆ ಒಳ ಮೀಸಲಾತಿ ನೀಡುವಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿಗೆ ಹರ್ಷ ವ್ಯಕ್ತಪಡಿಸಿರುವ ತಾಲ್ಲೂಕು ಡಾ.ಜಗಜೀವನರಾಂ ಸಂಘಗಳ ಒಕ್ಕೂಟದ ಪದಾಧಿಕಾರಿಗಳು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು.

ಕೊಟ್ಟಿಗೆಗೆ ನುಗ್ಗಿ ಕುರಿಗಳ ಕಳವು



ಕೆಆರ್.ಪೇಟೆ,ಆ.4– ತಾಲೂಕಿನ ಬೂಕನಕೆರೆ ಹೋಬಳಿಯ ಹಳೆ ಮಾವಿನಕೆರೆ ಗ್ರಾಮದ ರೈತ ಚಂದ್ರೇಗೌಡರ ಕೊಟ್ಟಿಗೆಗೆ ಕನ್ನ ಹಾಕಿರುವ ಕಳ್ಳರು ಒಂದೂವರೆ ಲಕ್ಷ್ಕೂ ಹೆಚ್ಚು ಬೆಲೆ ಬಾಳುವ ಏಳು ಕುರಿಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿರುವ ಘಟನೆ ಜರುಗಿದೆ

ರೈತ ಚಂದ್ರೇಗೌಡ ಮಾತನಾಡಿ, ಹಲವು ವರ್ಷಗಳಿಂದ ಸಾಲ ಮಾಡಿ ಕುರಿ ಸಾಕಾಣಿಕೆ ಮಾಡಿಕೊಂಡು ಜೀವನ ಸಾಗಿಸುತಿದ್ದೆವು. ಗುರುವಾರ ತಡರಾತ್ರಿ ಕೊಟ್ಟಿಗೆಯಲ್ಲಿದ್ದ 47 ಕುರಿ ಗಳಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ಏಳು ಕುರಿಗಳನ್ನು ಕಳ್ಳರು ಕಳ್ಳತನ ಮಾಡಿದ್ದಾರೆ. ಈ ಕಾಯಕವನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿದ್ದ ನಮ್ಮ ಕುಟುಂಬ ಇದರಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಹಾಗಾಗಿ ನಮ್ಮ ಜೀವನದ ಆಧಾರಗಳಾದ ರಾಸುಗಳನ್ನೂ ಪತ್ತೆ ಹಚ್ಚುವ ಮೂಲಕ ಕಾರಣಕರ್ತರಾದ ವ್ಯಕ್ತಿಗಳನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಂಡು ನಮಗೆ ಸೂಕ್ತ ನ್ಯಾಯ ಒದಗಿಸಿ ಕೊಡಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಯುವ ಮುಖಂಡ ಚೇತನ, ಬಾಲರಾಜ್, ಧರ್ಮರಾಜ್, ನಂದೀಶ್, ಶಾಂತ ಎಂ.ಹೆಚ್, ಪಂಕಜ ಮತ್ತಿತರರು ಉಪಸ್ಥಿತರಿದ್ದರು. ರೈತ ಚಂದ್ರೇಗೌಡ ನೀಡಿದ ದೂರಿನ ಮೇರೆಗೆ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಅಂಗನವಾಡಿ ಶಿಕ್ಷಕಿ ನಿಧನ




ಕೆ.ಆರ್.ಪೇಟೆ,ಆ.4– ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದ ಅಂಗನವಾಡಿ ಶಿಕ್ಷಕಿ ಎಂ.ಗೀತಾ(45) ಭಾನುವಾರ ನಿಧನರಾಗಿದ್ದಾರೆ.

ದಿವಂಗತರು ತಂದೆ ಮರೀಗೌಡ, ತಾಯಿ ಜಯಮ್ಮ, ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಶಿಕ್ಷಕಿಯಾಗಿ, ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಯೂನಿಯನ್ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಗೀತಾ ಅವರ ನಿಧನಕ್ಕೆ ತಾಲೂಕು ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಗಳು ಮತ್ತು ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ವಿವಿಧ ಸೇವಾ ಕಾರ್ಯಗಳೊಂದಿಗೆ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬ



ಹುಟ್ಟುಹಬ್ಬದ ಹಿನ್ನಲೆ ದೇವರಾಜ ಮೊಹಲ್ಲಾದಲ್ಲಿರುವ ದೇವರಾಜ ಸರ್ಕಾರಿ ಬಾಲಕಿಯರ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಉಪಹಾರ ವಿತರಿಸಿದರು.



ಮಂಚೇಗೌಡಕೊಪ್ಪಲಿನ ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ವಿತರಿಸಿದ ಬಳಿಕ ಶಾಸಕ ಕೆ.ಹರೀಶ್ ಗೌಡರನ್ನು ಅಭಿನಂದಿಸಲಾಯಿತು

ಮೈಸೂರು, ಆ.4(ಎಂಕೆ)– ವಿವಿಧ ಸೇವಾ ಕಾರ್ಯಗಳ ಮೂಲಕ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ, ಅವರ ಅಭಿಮಾನಿಗಳು 1001 ಈಡುಗಾಯಿ ಒಡೆಯುವ ಮೂಲಕ ಪೂಜೆ ಸಲ್ಲಿಸಿದರು. ಕೆ.ಟಿ.ಸ್ಟ್ರೀಟ್‌ನಲ್ಲಿರುವ ಕಾಲಭೈರವೇಶ್ವರ, ಪಂಚಮುಖಿ ದೇವಸ್ಥಾನ ಹಾಗೂ ಮಹದೇಶ್ವರ ಬಡಾವಣೆಯ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ವಾರ್ಡ್ ನಂ.3ರ ವ್ಯಾಪ್ತಿಯ ವಿಜಯನಗರದಲ್ಲಿರುವ ಬಯಲು ರಂಗಮಂದಿರ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು. ಶಿಬಿರದಲ್ಲಿ ಸುಮಾರು 200ಕ್ಕೂ ಹೆಚ್ಚು ಮಂದಿ ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ವಾರ್ಡ್ ನಂ.4ರ ಬಸವಗುಡಿ ಪಾರ್ಕ್‌ನಲ್ಲಿಯೂ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ನೂರಾರು ಮಂದಿ ಭಾಗವಹಿಸಿದ್ದರು.


ಮಂಚೇಗೌಡಕೊಪ್ಪಲಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಉಚಿತವಾಗಿ ನೋಟ್ ಬುಕ್ ವಿತರಿಸಲಾಯಿತು. ಈ ವೇಳೆ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಮಂಚೇಗೌಡಕೊಪ್ಪಲಿನ ಸರ್ಕಾರಿ ಶಾಲೆಯಲ್ಲಿ 450 ಮಕ್ಕಳಿದ್ದಾರೆ ಎಂಬುದನ್ನು ತಿಳಿದು ಸಂತೋಷವಾಗಿದೆ. ಶಾಲೆಯ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಹಾಗೆಯೇ ವಿಜಯನಗರ ವೀಲ್ಹ್‌ಚೇರ್ ಕ್ರಿಕೆಟ್ ಮೈದಾನದಲ್ಲಿ ವಿಶೇಷಚೇತನ ಕ್ರೀಡಾಪಟುಗಳು ಗಿಡ ನೆಡುವ ಮೂಲಕ ಹರೀಶ್‌ಗೌಡರ ಹುಟ್ಟುಹಬ್ಬ ಆಚರಿಸಿದರು. ನಜರ್‌ಬಾದ್‌ನಲ್ಲಿರುವ ಅಂಬೇಡ್ಕರ್ ಮೆಟ್ರಿಕ್ ವಸತಿ ಶಾಲೆಯಲ್ಲಿ 250 ಮಕ್ಕಳಿಗೆ ಮಧ್ಯಾಹ್ನ ಬೋಜನ ಕೂಟ ಏರ್ಪಡಿಸಲಾಗಿತ್ತು. ನಂತರ ದೇವರಾಜ ಮೊಹಲ್ಲಾದಲ್ಲಿರುವ ದೇವರಾಜ ಸರ್ಕಾರಿ ಬಾಲಕಿಯರ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಗೆ ಉಪಹಾರ ವಿತರಿಸಲಾಯಿತು.

ಸಂಜೆ ವೇಳೆ ಕೈಲಾಸಪುರಂನಲ್ಲಿ ಬಡ ಮಕ್ಕಳಿಗೆ ಅಧ್ಯಯನ ಸಾಮಗ್ರಿ ಹಾಗೂ ಮಹಿಳೆಯರಿಗೆ ಸೀರೆ ವಿತರಿಸಲಾಯಿತು. ವಾರ್ಡ್ ನಂ.23ರ ದೇವರಾಜ ಮೊಹಲ್ಲಾದಲ್ಲಿರುವ ಗಂಗಮ್ಮಗುಡಿ ದೇವಸ್ಥಾನದಲ್ಲಿ ವಾರ್ಡ್‌ನ ಮಕ್ಕಳಿಗೆ ಸ್ವೆಟರ್ ವಿತರಣೆ ಮಾಡಲಾಯಿತು. ನಂತರ ಆಶಾದಾಯಕ ಅನಾಥಾಶ್ರಮದಲ್ಲಿ ಮಕ್ಕಳಿಗೆ ಊಟ ವಿತರಿಸುವುದು ಸೇರಿದಂತೆ ಹತ್ತು–ಹಲವು ಸೇವಾ ಕಾರ್ಯದ ಮೂಲಕ ಅರ್ಥಪೂರ್ಣವಾಗಿ ಶಾಸಕ ಕೆ.ಹರೀಶ್‌ಗೌಡ ಅರ್ಥಪೂರ್ಣವಾಗಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು.

ಅವರೊಂದಿಗೆ ಎಂಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಚಂದ್ರಶೇಖರ್, ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಯೋಗೇಶ್ ಪಡುವಾರಹಳ್ಳಿ, ಎಸ್.ಆರ್.ರವಿಕುಮಾರ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ಮಹದೇಶ್, ಮಾಜಿ ನಗರಪಾಲಿಕೆ ಸದಸ್ಯರಾದ ಪೈಲ್ವಾನ್ ಶ್ರೀನಿವಾಸ್, ಗೋಪಿ, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ರಾಯಪ್ಪ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಕಾಂಗ್ರೆಸ್ ಮುಖಂಡರಾದ ಮಾರ್ಕೆಟ್ ದಿನೇಶ್, ರಾಜಕೀಯ ರವಿ, ಭಾಸ್ಕರ್, ಡೆಲ್ಲಿ ರವಿ, ಕೃಪಾನಂದಾ, ಪಡುವಾರಹಳ್ಳಿ ಕುಮಾರ್, ಕೆ.ಜಿ.ಕೊಪ್ಪಲು ಪ್ರದೀಪ್ ಕುಮಾರ್, ದೀಪು, ಮಹೇಶ್, ರಾಜೀವ್, ವಿಜಯನಗರ ಗೋಪಾಲಸ್ವಾಮಿ, ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ಅಧ್ಯಕ್ಷ ಬಿ.ಸಂದೀಪ್, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಿಶಾಂತ್ ಪಟೇಲ್, ಕೆ.ಚಂದ್ರಶೇಖರ್, ನಿತಿನ್ ಪುಟ್ಟಸ್ವಾಮಿ, ಗೋಕುಲಂ ಟೆಂಟ್ ಶ್ರೀನಿವಾಸ್, ದಿನೇಶ್ ಮತ್ತಿತರರಿದ್ದರು.

ಕಾಂಗ್ರೆಸ್ ಸಮಿತಿ ಅಭಿನಂದನೆ




ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಶಾಸಕ ಕೆ.ಹರೀಶ್‌ಗೌಡರನ್ನು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪದಾಧಿಕಾರಿಗಳಾದ ಉತ್ತನಹಳ್ಳಿ ಶಿವಣ್ಣ, ಶಿವಪ್ರಸಾದ್, ಮಳಿಯೂರ್ ಸಂತೋಷ್, ಲಕ್ಷ್ಮಣ್, ಸಕಳ್ಳಿ ಬಸವರಾಜ್, ಮನೋಹರ್ ಗೌಡ ಮತ್ತಿತರರು ಚಿತ್ರದಲ್ಲಿದ್ದಾರೆ.

ಜನ್ಮದಿನದ ಶುಭಾಶಯ



ಮೈಸೂರು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬವನ್ನು 40 ಹಾಗೂ 41ನೇ ವಾರ್ಡ್‌ನ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮದಿಂದ ಆಚರಿಸಿದರು. ದೇವರಾಜ ಮಾರುಕಟ್ಟೆ ಅಧ್ಯಕ್ಷ ದಿನೇಶ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್, ಬೋರ ಕುರುಬಗೇರಿ, ದಿನೇಶ್, ನಾಗೇಶ್, ಅರುಣ, ವಿಕ್ಕಿ ಸಿಂಹ ಮತ್ತಿತರರು ಉಪಸ್ಥಿತರಿದ್ದರು.

ಗಿಡ ನೆಟ್ಟು ಹುಟ್ಟುಹಬ್ಬ ಆಚರಣೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಭಿವೃದ್ಧಿ ಮಿಲನ ಸಂಸ್ಥೆ ವತಿಯಿಂದ 40ನೇ ವಾರ್ಡ್‌ನ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಶಾಲೆಯ ಆವರಣದಲ್ಲಿ ಸಾವಿರ ವನ ಮಹೋತ್ಸವ ಹಮ್ಮಿಕೊಳ್ಳಲಾಗಿತ್ತು. ಶಾಸಕ ಹರೀಶ್‌ಗೌಡರು ಸಸಿ ನೆಟ್ಟು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಕೆಪಿಸಿಸಿ ಸದಸ್ಯ ನಟರಾಜ್, ದೀಪಕ್ ಪುಟ್ಟಸ್ವಾಮಿ, ಮಾದೇಶ್, ಶಿವಣ್ಣ, ಶ್ರೀಪಾಲ್ ನಾಗರಾಜ್, ಬಸವಣ್ಣ, ಮೋಹನ್ ಕುಮಾರ್ ಗೌಡ, ಮಹೇಶ್, ಮನೋಜ್, ತಿಲಕ್, ರವಿ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

ಹರೀಶ್‌ಗೌಡರ ಹುಟ್ಟುಹಬ್ಬ



ಮೈಸೂರು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರಿಗೆ ಕುವೆಂಪುನಗರದಲ್ಲಿನ ಶ್ರೀ ಆದಿಶಕ್ತಿ ಬಂದಂತಮ್ಮ ಕಾಳಮ್ಮ ದೇವಸ್ಥಾನದ ಪದಾಧಿಕಾರಿಗಳು ಹಾಗೂ ಕನ್ನೆಗೌಡ ಕೊಪ್ಪಲಿನ ಯುವಕರು ಅಭಿನಂದಿಸಿ, ಜನ್ಮದಿನದ ಶುಭಾಶಯ ಕೋರಿದರು. ಈ ವೇಳೆ ಕೊಪ್ಪಲು ರಾಜಣ್ಣ, ಎಸ್.ಬಾಲು, ವಿಕ್ರಾಂತ್ ಪಿ.ದೇವೇಗೌಡ, ಡಿಟಿಪಿ ರಮೇಶ್, ಚೆನ್ನಪ್ಪ, ಪ್ರಕಾಶ್, ಪುಟ್ಟಸ್ವಾಮಿ, ಶ್ರೀನಿವಾಸ್, ಸಂಬಣ್ಣ, ರಾಜು, ನಾಗಣ್ಣ ಮತ್ತಿತರರಿದ್ದರು.

ಹುಟ್ಟುಹಬ್ಬದಂದು ಅಭಿನಂದನೆ



ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಕಾಂಗ್ರೆಸ್ ಮುಖಂಡ ಸಿ.ಭಾಸ್ಕರ್ ನೇತೃತ್ವದಲ್ಲಿ ಅಭಿನಂದಿಸಿ, ಶುಭಾಶಯ ಕೋರಲಾಯಿತು. ಪ್ರಸಾದ್, ಅಭಿಷೇಕ್, ಲೋಕೇಶ್, ಸಂತೋಷ್, ಪ್ರಸನ್ನ, ಮೋಹನ್, ನಿಶಾಂತ್, ಹರೀಶ್ ಮತ್ತಿತರರು ಪಾಲ್ಗೊಂಡಿದ್ದರು.

ಕ್ರಿಯೇಟಿವ್ ಹಿರಿಯ ಪ್ರಾಥಮಿಕ ಶಾಲೆಯ ಮಾನ್ಯತೆ ರದ್ದು

ಮೈಸೂರು,ಆ.4– ಮೈಸೂರಿನ ರಾಜೀವನಗರದ ಕ್ರಿಯೇಟೀವ್ ಎಜುಕೇಷನ್ ಟ್ರಸ್ಟ್ ಆಡಳಿತ ಮಂಡಳಿಯ ವತಿಯಿಂದ ನಡೆಯುತ್ತಿರುವ ಕ್ರಿಯೇಟಿವ್ ಹಿರಿಯ ಪ್ರಾಥಮಿಕ ಶಾಲೆಯ ಮಾನ್ಯತೆಯನ್ನು ಹಿಂಪಡೆಯಲಾಗಿದೆ. ಪ್ರಸ್ತುತ 2024–25ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 8ನೇ ತರಗತಿಯ ಮಕ್ಕಳನ್ನು ಪೋಷಕರು ಯಾವುದಾದರೂ ಶಾಲೆಗೆ ದಾಖಲು ಮಾಡಬಹುದಾಗಿದೆ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಹತ್ತಿರದ ಶಾಲೆಗಳಿಗೆ ಸೇರಿಸಲು ಇಲಾಖೆಯು ಕೂಡ ಬದ್ಧವಾಗಿದ್ದು, ಪೋಷಕರು ಆತಂಕಪಡಬಾರದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಬೇರೆಯವರ ಸಂಶೋಧನೆಗಳನ್ನು ಕಟ್ ಅಂಡ್ ಪೇಸ್ಟ್ ಮಾಡಿದರೆ ಕೃತಿಚೌರ್ಯವಾಗುತ್ತದೆ



'ಸಂಶೋಧನಾ ಪರಿಕರಗಳು ಮತ್ತು ನೀತಿಶಾಸ್ತ್ರ' ವಿಷಯ ಕುರಿತು ಜೆಎಸ್‌ಎಸ್ ಎಸ್‌ಟಿಯು ಕಂಪ್ಯೂಟರ್ ವಿಭಾಗದ ಪ್ರಾಧ್ಯಾಪಕಿ ಡಾ.ಭಾರತಿ ಮಾತನಾಡಿದರು.

ಮೈಸೂರು, ಆ.4(ಎಸ್‌ಪಿಎನ್)– ಬೇರೆಯವರು ಕ್ಷೇತ್ರ ಅಧ್ಯಯನ ನಡೆಸಿ, ಸಂಶೋಧನೆ ನಡೆಸಿದ್ದ ವರದಿಗಳನ್ನು ಕಟ್ ಅಂಡ್ ಪೇಸ್ಟ್ ಮಾಡಿ, ವರದಿ ತಯಾರಿಸುವುದು ಕೃತಿಚೌರ್ಯ ಮಾಡಿದಂತೆ ಎಂದು ಜೆಎಸ್‌ಎಸ್‌ಎಸ್‌ಟಿಯು ಕಂಪ್ಯೂಟರ್ ವಿಭಾಗದ ಪ್ರಾಧ್ಯಾಪಕಿ ಡಾ.ಭಾರತಿ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ 'ಸಂಶೋಧನಾ ಪರಿಕರಗಳು ಮತ್ತು ನೀತಿಶಾಸ್ತ್ರ' ವಿಷಯ ಕುರಿತು ಮಾತನಾಡಿದರು.

ಸಂಶೋಧನಾ ಕ್ಷೇತ್ರದಲ್ಲಿ ಪ್ರತಿಭಾವಂತರು ಬಹಳ ಕಷ್ಟಪಟ್ಟು ಒಂದು ವಿಷಯದ ಬಗ್ಗೆ ಸಂಶೋಧನೆ ನಡೆಸಿರುತ್ತಾರೆ. ಅದನ್ನು ಅವರ ವೆಬ್‌ಸೈಟ್‌ನಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಅಪ್‌ಲೋಡ್ ಮಾಡಿದ್ದಾಗ, ಬೇರೆಯವರು ಆ ಸಾಹಿತ್ಯವನ್ನು ಅಧ್ಯಯನ ನಡೆಸಬೇಕೆ ಹೊರತು, ಅದೇ ಡೇಟಾವನ್ನು ಕಟ್ ಅಂಡ್ ಪೇಸ್ಟ್ ಮಾಡಿ, ನಮ್ಮ ವರದಿಯೆಂದು ಬಿಂಬಿಸಿಕೊಳ್ಳುವುದು ತಪ್ಪಾಗುತ್ತದೆ. ಈ ಕೃತಿ ಚೌರ್ಯ ಕಂಡು ಹಿಡಿಯಲು ತಂತ್ರಜ್ಞಾನ ಬಂದಿದ್ದು, ಸುಲಭವಾಗಿ ಪತ್ತೆ ಹಚ್ಚಬಹುದಾಗಿದೆ. ಹಾಗಾಗಿ ಕೃತಿಚೌರ್ಯ ಮಾಡುವವರು ಸ್ವಲ್ಪ ಎಚ್ಚರಿಕೆ ಇರಬೇಕು ಎಂದು ಡಾ.ಭಾರತಿ ಕಿವಿಮಾತು ಹೇಳಿದರು.

ಇತ್ತೀಚೆಗೆ ಹೆಸರಾಂತ ವಿಜ್ಞಾನಿಯೊಬ್ಬರು, ಬೇರೆಯವರ ಸಂಶೋಧನಾ ಡೇಟಾಗಳನ್ನು ಕದ್ದು, ತಮ್ಮ ವರದಿ ಎಂದು ವೆಬ್‌ಸೈಟ್‌ನಲ್ಲಿ ಹಾಕಿಕೊಂಡಿದ್ದರು. ಕೃತಿ ಚೌರ್ಯ ಕಂಡು ಹಿಡಿಯುವ ತಂತ್ರಜ್ಞಾನ ಬಳಸಿ, ಆ ವಿಜ್ಞಾನಿಯ ನೈಜತೆಯನ್ನು ಬಯಲು ಮಾಡಿದ್ದರು. ಹಾಗಾಗಿ ತಂತ್ರಜ್ಞಾನ ಮುಂದುವರೆದಂತೆ ಕೃತಿ ಚೌರ್ಯ ಮತ್ತು ನೈತಿಕತೆ ಕುರಿತು ಸ್ವಲ್ಪ ಯೋಚಿಸಿ, ಕಟ್ ಅಂಡ್ ಪೇಸ್ಟ್ ಬಿಟ್ಟು, ಅಧ್ಯಯನ ನಡೆಸಿ ವರದಿ ತಯಾರಿಸುವಂತೆ ಸಲಹೆ ನೀಡಿದರು. ಈ ವೇಳೆ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ಅಧ್ಯಕ್ಷ ಡಾ.ಆರ್.ದೀಪು, ನಿಕಟಪೂರ್ವ ಅಧ್ಯಕ್ಷ ಬಿ.ಎಸ್.ಪ್ರಭಾಕರ್ ಇನ್ನಿತರರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಷಡ್ಯಂತರ ಖಂಡಿಸಿ

ಮೈಸೂರಲ್ಲಿ ಪ್ರತಿಭಟನೆ, ಬೃಹತ್ ಸಮಾವೇಶ

- ವಿವಿಧ ಸಮುದಾಯಗಳ ನಾಯಕರು, ಸಿದ್ದರಾಮಯ್ಯ ಅಭಿಮಾನಿಗಳ ಸಭೆಯಲ್ಲಿ ನಿರ್ಣಯ
- ಆ.9ರಂದು ಮೈಸೂರಲ್ಲಿ ಬೃಹತ್ ಸಮಾವೇಶ

ಮೈಸೂರು,ಆ.4(ಎಂಕೆ)–ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ–ಜೆಡಿಎಸ್ ಬೆಂಗಳೂರಿಂದ ಮೈಸೂರಿಗೆ ಹಮ್ಮಿಕೊಂಡಿರುವ ಪಾದಯಾತ್ರೆಗೆ ಸೆಡ್ಡು ಹೊಡೆಯುವ ರೀತಿಯಲ್ಲಿ ಮೈಸೂರಿನಲ್ಲಿ ಪ್ರತಿಭಟನೆ, ಆ.9 ರಂದು ನಡೆಯುವ ಬೃಹತ್ ಸಮಾವೇಶವನ್ನು ಯಶಸ್ವಿಗೊಳಿಸಲು ವಿವಿಧ ಸಮುದಾಯಗಳ ಮುಖಂಡರು, ಸಿದ್ದರಾಮಯ್ಯ ಅವರ ಅಭಿಮಾನಿಗಳ ಸಭೆಯಲ್ಲಿ ಒಕ್ಕೊರಲ ನಿರ್ಣಯ ಕೈಗೊಳ್ಳಲಾಯಿತು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ, ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ನಡೆದ ಸಭೆಯಲ್ಲಿ ಬಿಜೆಪಿ–ಜೆಡಿಎಸ್ ಪಾದಯಾತ್ರೆಗೆ ಪ್ರತ್ಯುತ್ತರವಾಗಿ ಆ.5ರಂದು ರಾಜ್ಯಾದ್ಯಂತ ಶೋಷಿತ ಸಮುದಾಯಗಳು ನಡೆಸುವ ಪ್ರತಿಭಟನೆಗೆ ಬೆಂಬಲ ನೀಡುವುದು. ಆ.9ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಬೃಹತ್ ಸಮಾವೇಶದಲ್ಲಿ 2 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಯಶಸ್ವಿಗೊಳಿಸಲು ನಿರ್ಧರಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪ್ರಾಮಾಣಿಕ, ಕಳಂಕ ರಹಿತ ಜನಾನುರಾಗಿ, ಸಜ್ಜನ ರಾಜಕಾರಣಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಪಿತೂರಿ ನಡೆಸುತ್ತಿರುವ ಬಿಜೆಪಿ–ಜೆಡಿಎಸ್, ಮುಖ್ಯಮಂತ್ರಿಗಳ ತಪ್ಪಿಲ್ಲದಿದ್ದರೂ ಅವರ ಜನಪ್ರಿಯತೆಯನ್ನು ಸಹಿಸದೆ ಮುಡಾ ಪ್ರಕರಣವನ್ನು ಮುಂದಿಟ್ಟುಕೊಂಡು ಪಾದಯಾತ್ರೆ ನಡೆಸುತ್ತಿದೆ ಎಂದರಲ್ಲದೆ ರಾಜ್ಯದ ಜನತೆಯೇ ಸರ್ವಾನುಮತದಿಂದ ಆಯ್ಕೆ ಮಾಡಿರುವ ಮುಖ್ಯಮಂತ್ರಿಗಳ ವಿರುದ್ಧ ಬಿಜೆಪಿ–ಜೆಡಿಎಸ್‌ನ ಪಾದಯಾತ್ರೆಗೆ ಯಾವುದೇ ಅರ್ಥವಿಲ್ಲ ಎಂದರು.

ಸಭೆಯ ನೇತೃತ್ವ ವಹಿಸಿದ್ದ ಶೋಷಿತ ಸಮುದಾಯದ ಮುಖಂಡ ಬಿ.ಸುಬ್ರಹ್ಮಣ್ಯ ಮಾತನಾಡಿ, ಅಹಿಂದ ನಾಯಕ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಇಲ್ಲ–ಸಲ್ಲದ ಆರೋಪ ಮಾಡಿ, ಅವರ ಘನತೆಗೆ ಧಕ್ಕೆ ತರಲು ಹೊರಟಿರುವ ಬಿಜೆಪಿ–ಜೆಡಿಎಸ್‌ನ ಬ್ರಹ್ಮಾಂಡ ಭ್ರಷ್ಟಾಚಾರ ರಾಜ್ಯದ ಜನತೆಗೆ ತಿಳಿದಿದೆ. ಈ ರೀತಿಯ ಆಧಾರವಿಲ್ಲದ ಆರೋಪಗಳನ್ನು ಎಷ್ಟೇ ಮಾಡಿದರೂ ಮುಖ್ಯಮಂತ್ರಿಗಳು ಜಗ್ಗುವವರಲ್ಲ. ಅವರ ಹಿಂದೆ ಇಡೀ ರಾಜ್ಯದ ಜನತೆ, ಅಹಿಂದ ಸಮಾಜ ನಿಂತಿದೆ ಎಂದರು.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ವಿವಿಧ ಸಮುದಾಯದ ಮುಖಂಡರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಭಿಮಾನಿಗಳ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿದರು.

ಪಾದಯಾತ್ರೆಯಲ್ಲ... ಪಾಪದ ಯಾತ್ರೆ...

"ಸಿದ್ದರಾಮಯ್ಯ ಉಳಿದರೆ ಕಾಂಗ್ರೆಸ್ ಉಳಿಯಲಿದೆ. ಇದು ಕಾಂಗ್ರೆಸ್‌ನ ಅಸ್ತಿತ್ವದ ಪ್ರಶ್ನೆ. ಸಿದ್ದರಾಮಯ್ಯ ಅವರ ವಿರುದ್ಧ ಮಾಡುತ್ತಿರುವ ಆರೋಪ ಪೂರ್ವ ನಿಯೋಜಿತ. ಬಿಜೆಪಿ–ಜೆಡಿಎಸ್‌ನವರು ಪಾದಯಾತ್ರೆ ಬದಲು ತಮ್ಮ ಪಾಪದ ಯಾತ್ರೆ ಮಾಡುತ್ತಿದ್ದಾರೆ. ಇದರ ಪರಿಣಾಮವನ್ನು ಅವರು ಅನುಭವಿಸುತ್ತಾರೆ.

–ಎಂ.ಲಕ್ಷ್ಮಣ, ಕೆಪಿಸಿಸಿ ವಕ್ತಾರ

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಮಾಜಿ ಮೇಯರ್‌ಗಳಾದ ಪುರುಷೋತ್ತಮ್, ಅನಂತು, ಆರೀಫ್ ಹುಸೇನ್, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಸೀತಾರಾಮು, ಶಿವಣ್ಣ, ಎನ್.ಆರ್.ನಾಗೇಶ್, ಕೆಂಪನಾಯಕ, ಯರಗನಹಳ್ಳಿ ಮಾದೇಗೌಡ, ಬೀರಿಹುಂಡಿ ಬಸವಣ್ಣ, ಕೆ.ವಿ.ಮಲ್ಲೇಶ್, ಪ್ರಕಾಶ್ ಸೇರಿದಂತೆ ವಿವಿಧ ಸಮುದಾಯದ ಮುಖಂಡರು, ಸಿದ್ದರಾಮಯ್ಯ ಅವರ ಅಭಿಮಾನಿಗಳು ಉಪಸ್ಥಿತರಿದ್ದರು.

ಎರಡು ದಿನಗಳ ಸ್ಫೂರ್ತಿ ಉತ್ಸವ



ಮೈಸೂರಿನ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಕೇಂದ್ರದ ಮಹಿಳಾ ಘಟಕ ಆಯೋಜಿಸಿರುವ ಸ್ಫೂರ್ತಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಮೈಸೂರು, ಆ.4(ಬಿಎಲ್‌ಯು)– ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಕೇಂದ್ರದ ಮಹಿಳಾ ಘಟಕ ಆಯೋಜಿಸಿರುವ ಎರಡು ದಿನಗಳ ಸ್ಫೂರ್ತಿ ಉತ್ಸವ ಶನಿವಾರದಿಂದ ಆರಂಭವಾಗಿದೆ.

ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಆರಂಭವಾದ ಸ್ಫೂರ್ತಿ ಉತ್ಸವವನ್ನು ರಘುಲೀಲಾ ಸ್ಕೂಲ್ ಆಫ್ ಮ್ಯೂಸಿಕ್‌ನ ಅಧ್ಯಕ್ಷೆ ಎ.ಎಸ್.ಸುನೀತಾ ಚಂದ್ರಕುಮಾರ್ ಉದ್ಘಾಟಿಸಿದರು. ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಕೇಂದ್ರದ ಅಧ್ಯಕ್ಷ ಎ.ಎಸ್.ಯೋಗ ನರಸಿಂಹ, ಮಹಿಳಾ ಘಟಕದ ಅಧ್ಯಕ್ಷೆ ರಮಾದೇವಿ ಶ್ರೀಕಾಂತ್, ಕಾರ್ಯದರ್ಶಿ ಜಾಹ್ನವಿ ದಿನೇಶ್, ಖಜಾಂಚಿ ಶಾಂತಿ ಸಿ.ಭಾರದ್ವಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಹಿಳಾ ಉದ್ಯಮಿಗಳಿಗೆ ಉತ್ತೇಜನ ನೀಡಲು ಈ ಉತ್ಸವ ಆಯೋಜಿಸಲಾಗಿತ್ತು.

ಮಹಿಳೆಯರು ಪ್ರಕಾಶನ ಕ್ಷೇತ್ರದಲ್ಲೂ ತೊಡಗಿಸಿಕೊಳ್ಳಲಿ

38 ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಸಾಹಿತಿ ಅರವಿಂದ ಮಾಲಗತ್ತಿ ಕರೆ



ಸಾಹಿತಿ ಅರವಿಂದ ಮಾಲಗತ್ತಿ 38 ಕೃತಿಗಳನ್ನು ಲೋಕಾರ್ಪಣೆ ಮಾಡಿದರು.

ಮೈಸೂರು, ಆ.4(ಜಿಎ)– ಮಹಿಳೆಯರು ಇಂದು ಎಲ್ಲಾ ಕ್ಷೇತ್ರದಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಮಂದಿ ಸಿಗುತ್ತಾರೆ. ಆದರೆ ಪ್ರಕಾಶನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರು ವಿರಳ ಎಂದು ಖ್ಯಾತ ಸಾಹಿತಿ ಅರವಿಂದ ಮಾಲಗತ್ತಿ ತಿಳಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಭವನದಲ್ಲಿ ಅಕ್ಷರ ನಾದ ಪಬ್ಲಿಕೇಶನ್ಸ್–ಎಎಸ್‌ಟಿಆರ್, ಅಕ್ಷರ–ಕಲೆ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ 'ಕವಿ ಕಾವ್ಯ ಕಥಾ ಸಂಗಮ' ಕಾರ್ಯಕ್ರಮದ ಮೊದಲ ಆವೃತ್ತಿ–2024, ಅಕ್ಷರ ನಾದದ ಮೊದಲ ವಾರ್ಷಿಕೋತ್ಸವ ಹಾಗೂ 38 ಕೃತಿಗಳ ಲೋಕಾರ್ಪಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಿಮ್ಮ ಬರವಣಿಗೆಯಲ್ಲಿ ಅನುಭವಕ್ಕೆ ಆದ್ಯತೆ ಕೊಡಿ. ನಿಮ್ಮ ಅನುಭವದ ಶಕ್ತಿಯನ್ನು ಬರವಣಿಗೆಯಲ್ಲಿ ಹಂಚಿಕೊಳ್ಳಿ ಎಂದರು.

ಮಹಿಳೆಯರು ಯಾವ ಪುರುಷರಿಗೂ ಕಡಿಮೆ ಇಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ಪ್ರಕಾಶನ ಕ್ಷೇತ್ರ ಮಹತ್ವದ ಕಾರ್ಯ ಎನಿಸುತ್ತದೆ. ಜಗತ್ತು ತಂತ್ರಜ್ಞಾನದ ಜತೆಗೆ ತೊಡಗಿಸಿಕೊಂಡಿದೆ. ಹಾಗೆ ನೋಡಿದರೆ ಎಲ್ಲರೂ ಲೇಖಕರೇ. ಯಾರ ಯಾರಲ್ಲಿ ಮೊಬೈಲ್ ಇದೆಯೋ, ಪ್ರತಿಯೊಬ್ಬರೂ ಸಾಮಾನ್ಯ ಜನತೆಯ ನೋವು, ಸ್ತ್ರೀ ಸಾಮಾನ್ಯರ ನೋವು, ಅನಿಸಿಕೆ, ಅಭಿಪ್ರಾಯ ಹಂಚಿಕೊಳ್ಳಲು ಇದು ಸೂಕ್ತ ಜಾಗವಾಗಿದೆ ಎಂದರು.

ರನ್ನನ ಅಜಿತನಾಥ ಪುರಾಣವನ್ನು ಅತ್ತಿಮಬ್ಬೆ ಅನೇಕ ಪ್ರತಿಗಳನ್ನು ಅಚ್ಚಾಕಿಸಿ ಹಂಚಿದ ದಾಖಲೆ ಇದೆ. ಇಂತಹ ಕೆಲಸ ಮಾಡುವುದು ಧಾರ್ಮಿಕ ಸೇವೆ ಎಂದು ಅತ್ತಿಮಬ್ಬೆ ತಿಳಿದಿದ್ದಳು. ಮಹಿಳೆಯರು ಈ ರೀತಿಯ ಕೃತಿ ಪ್ರಕಟಣೆಯ ಪುಣ್ಯದ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದ್ದಾರೆ. ಅಂತಹ ಪರಂಪರೆಯ ಪ್ರತಿರೂಪವೇ ಅಕ್ಷರ ಪ್ರಕಾಶನದ ಮುಖ್ಯಸ್ಥೆ ಡಾ.ಶ್ರುತಿ ಮಧುಸೂದನ್. ಅವರ ಸಂಸ್ಥೆಯೂ ಅಕ್ಷರ ನಾದ ಸಂಸ್ಥೆ ಮನುಷ್ಯರನ್ನಾಗಿಸಲು ಹಾತೊರೆಯುತ್ತಿದೆ. 38 ಕೃತಿಗಳ ಲೋಕಾರ್ಪಣೆ ಸಾಮಾನ್ಯ ಸಂಗತಿಯಲ್ಲ ಎಂದರು.

ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಅಕ್ಷರನಾದ ಪಬ್ಲಿಕೇಷನ್ ಅಧ್ಯಕ್ಷೆ ಡಾ.ಶ್ರುತಿ ಮಧುಸೂದನ್, ಉಪಾಧ್ಯಕ್ಷ ಮಧುಸೂದನ್ ಕೆ.ಆಚಾರ್, ನಟ ಸ್ಟೈಲ್ ಶಿವಕುಮಾರ್, ಮಂಜುಳಾ ಪಾವಗಡ, ಸಿದ್ದನಕೊಪ್ಪಲು ಕುಮಾರ್, ಟಿ.ತ್ಯಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ನಾಲ್ಕಡಿ ಕೃಷ್ಣರಾಜ ಒಡೆಯರ್ ಪುಣ್ಯಸ್ಮರಣೆ



ಮೈಸೂರಿನ ಮನುವನದಲ್ಲಿ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 84ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ವೇಳೆ ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಅರಸು ಮಂಡಳಿ ಮಾಜಿ ಅಧ್ಯಕ್ಷ ಕುಮಾರ್ ಅರಸ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್, ಸಿದ್ದರಾಜು, ಯಮುನ, ವರದರಾಜನ್, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಉದ್ಯಮಶೀಲತಾ ಅಭಿವೃದ್ಧಿ ತರಬೇತಿಗೆ ಅರ್ಜಿ

ಮೈಸೂರು,ಆ.4– ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ(ಸಿಡಾಕ್) ಸ್ವಂತ ಉದ್ಯೋಗವನ್ನು ಸ್ಥಾಪಿಸಲು ಇಚ್ಛಿಸುವವರಿಗಾಗಿ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅಭ್ಯರ್ಥಿಗಳು 18 ವರ್ಷದಿಂದ 45 ವರ್ಷ ವಯಸ್ಸಿನವರಾಗಿರಬೇಕು. ಪರಿಶಿಷ್ಟ ಜಾತಿ ಪುರುಷರಿಗೆ ಮತ್ತು ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಅರ್ಜಿಯನ್ನು ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಿ.ಟಿ.ಐ ಕಟ್ಟಡದ ಸಿಡಾಕ್ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಪಡೆದು ಆ.9ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಿಡಾಕ್ ಜಂಟಿ ನಿರ್ದೇಶಕರ ಕಚೇರಿಯ ದೂ.ಸಂ: 6361611136 ಅಥವಾ 7353474649 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಯುವ ನಿಧಿ: ಅರ್ಜಿ ಸ್ಥಿತಿ ಪರಿಶೀಲನೆಗೆ ಅವಕಾಶ

ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

ಮೈಸೂರು,ಆ.4– 2023ರ ಸಾಲಿನಲ್ಲಿ ತೇರ್ಗಡೆಯಾದಂತಹ ಪದವೀಧರ ಮತ್ತು ಡಿಪ್ಲೊಮಾ ಅಭ್ಯರ್ಥಿಗಳಿಂದ ಯುವನಿಧಿ ಕಾರ್ಯಕ್ರಮದಡಿಯಲ್ಲಿ ನಿರುದ್ಯೋಗ ಭತ್ಯೆಯನ್ನು ನೀಡಲಾಗುತ್ತಿದೆ. ಈಗಾಗಲೇ ಅರ್ಜಿ ಸಲ್ಲಿಸಿ ಯುವ ನಿಧಿ ಯೋಜನೆ ಹಣ ಪಡೆಯುತ್ತಿರುವ ಅಭ್ಯರ್ಥಿಗಳು ಪ್ರತಿ ತಿಂಗಳು 25ನೇ ದಿನಾಂಕದೊಳಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಸ್ವಯಂ ಘೋಷಣೆ ಮಾಡಿಕೊಳ್ಳುವುದು ಕಡ್ಡಾಯ. ಸ್ವಯಂ ಘೋಷಣೆ ಮಾಡದೇ ಇರುವ ಅಭ್ಯರ್ಥಿಗಳಿಗೆ ನೇರ ನಗದು ವರ್ಗಾವಣೆಯಾಗುವುದಿಲ್ಲ. ಫಲಿತಾಂಶದ ನಂತರ ನಿರುದ್ಯೋಗಿಗಳಾಗಿ 180 ದಿನಗಳು ಪೂರೈಸಿದ ನಂತರವೂ ನಗದು ಹಣ ಪಡೆಯದಿದ್ದರೆ ಸೇವಾಸಿಂಧು https://sevasin dhugs. karnataka.gov.in ಪೋರ್ಟಲ್‌ನಲ್ಲಿ ಅರ್ಜಿ ಸ್ಥಿತಿ ಪರಿಶೀಲಿಸಿ, ತಮ್ಮ ಅರ್ಜಿಯು ಯಾವ ಕಚೇರಿಯಲ್ಲಿ ಪರಿಶೀಲನೆಗಾಗಿ ಬಾಕಿ ಇದೆ ಎಂದು ತಿಳಿದುಕೊಳ್ಳಬಹುದು. ಒಂದು ವೇಳೆ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯನ್ನು ಅಪ್ಲೋಡ್ ಮಾಡದಿದ್ದರೆ ಅಂತಹ ಅಭ್ಯರ್ಥಿಗಳು ಡಿ.ಸುಬ್ಬಯ್ಯ ರಸ್ತೆಯ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಗೆ ಅರ್ಜಿಯ ಒಂದು ಪ್ರತಿ, ಎಸ್‌ಎಸ್‌ಎಲ್‌ಸಿ ಮೂಲ ಅಂಕಪಟ್ಟಿ ಹಾಗೂ ಒಂದು ಜೆರಾಕ್ಸ್ ಪ್ರತಿಯೊಂದಿಗೆ ಭೇಟಿ ನೀಡಿ ಅನುಮೋದನೆ ಪಡೆದುಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಳೆಯಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಆ.4–ಶ್ರೀ ರವಿಶಂಕರ್ ಗುರುದೇವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಆ.6ರಿಂದ 10ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಮಾಹಿತಿಗೆ, 9480476825, 9483589825.

ಜಿಎಸ್‌ಟಿ ಕೌನ್ಸಿಲ್‌ನಲ್ಲಿ ತೆರಿಗೆ ಸಲಹೆಗಾರರಿಗೆ ಅವಕಾಶ ನೀಡಬೇಕು

ತೆರಿಗೆ ಸಲಹೆಗಾರ ರಾಷ್ಟ್ರೀಯ ಸಮಾವೇಶದಲ್ಲಿ ಕೇಂದ್ರ ಸರ್ಕಾರಕ್ಕೆ ಆಗ್ರಹ

ಮೈಸೂರು, ಆ.4(ಬಿಎಲ್‌ಯು)– ಜಿಎಸ್‌ಟಿ ಕೌನ್ಸಿಲ್‌ನಲ್ಲಿ ತೆರಿಗೆ ಸಲಹೆಗಾರರು, ಆಡಿಟರ್ಸ್ ಹಾಗೂ ಎಫ್‌ಕೆಸಿಸಿಐ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರು ಸಂಘದ ಅಧ್ಯಕ್ಷ ಎಸ್.ನಂಜುಂಡ ಪ್ರಸಾದ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಹುಣಸೂರು ರಸ್ತೆಯ ಹೋಟೆಲ್ ಲಿ ರುಚಿ ದಿ ಪ್ರಿನ್ಸ್‌ನಲ್ಲಿ ಇಂದು ಅಖಿಲ ಭಾರತ ತೆರಿಗೆ ಸಲಹೆಗಾರರ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘ ಸಂಯುಕ್ತವಾಗಿ ಆಯೋಜಿಸಿರುವ ಎರಡು ದಿನಗಳ ರಾಷ್ಟ್ರೀಯ ತೆರಿಗೆ ಸಲಹೆಗಾರರ ಸಮಾವೇಶದಲ್ಲಿ ಮಾತನಾಡಿದ ಅವರು, ಜಿಎಸ್‌ಟಿ ಕೌನ್ಸಿಲ್‌ನಲ್ಲಿ ನಮಗೆ ಪ್ರಾಧಾನ್ಯತೆ ನೀಡಿದರೆ ತೆರಿಗೆ ಸುಧಾರಣೆ ಸಂಬಂಧ ನಮ್ಮ ಅಭಿಪ್ರಾಯ ಮಂಡಿಸಲು ಅವಕಾಶವಾಗುತ್ತದೆ ಎಂದು ಹೇಳಿದರು.

ಎರಡನೆ ದರ್ಜೆಯ ನಗರಗಳಲ್ಲಿ ತೆರಿಗೆ ಸಲಹೆಗಾರರಿಗೆ ಸರ್ಕಾರ ಮಾನ್ಯತೆ ನೀಡಬೇಕು. ತೆರಿಗೆ ಸಲಹೆಗಾರರು ಹಲವು ಸಮಸ್ಯೆ ಎದುರಿಸುತ್ತಿದ್ದು, ಅದನ್ನು ಪರಿಹಾರ ಮಾಡಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.



ಮೈಸೂರಿನ ಹೋಟೆಲ್ ಲಿ ರುಚಿ ದಿ ಪ್ರಿನ್ಸ್‌ನಲ್ಲಿ ಭಾನುವಾರ ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘದ ಎರಡು ದಿನಗಳ ಸಮಾವೇಶ ಆರಂಭವಾಯಿತು.

ಕೋವಿಡ್ ಸಮಯದಲ್ಲಿ ಬಹಳಷ್ಟು ತೆರಿಗೆ ಸಲಹೆಗಾರರು ಪ್ರಾಣ ಕಳೆದುಕೊಂಡಿದ್ದಾರೆ. ಕೆಲಸದ ಒತ್ತಡದಲ್ಲಿರುವ ತೆರಿಗೆ ಸಲಹೆಗಾರರು ಆರೋಗ್ಯ ಸಮಸ್ಯೆ ಎದುರಿಸುತ್ತಿರುತ್ತಾರೆ. ಈ ಹಿನ್ನೆಲೆ ಗ್ರೂಪ್ ಇಶ್ಯೂರೆನ್ಸ್ ಸೌಲಭ್ಯ ಕಲ್ಪಿಸಬೇಕಾದ ಅವಶ್ಯಕತೆ ಇದೆ ಎಂದು ನಂಜುಂಡ ಪ್ರಸಾದ್ ಅಭಿಪ್ರಾಯಪಟ್ಟರು.


ಎರಡು ದಿನಗಳ ಸಮಾವೇಶದಲ್ಲಿ ಕರ್ನಾಟಕದ ಮಾತ್ರವಲ್ಲದೆ ದೇಶದ ಹಲವು ರಾಜ್ಯಗಳ ತೆರಿಗೆ ಸಲಹೆಗಾರರು ಭಾಗವಹಿಸಿದ್ದರು. ತೆರಿಗೆ ಸುಧಾರಣೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಸಮಾವೇಶದಲ್ಲಿ ಗೋಷ್ಠಿಗಳು ನಡೆಯಲಿವೆ. ತೆರಿಗೆ ಸಲಹೆಗಾರರ ಸಂಘದ ರಾಷ್ಟ್ರೀಯ ಅಧ್ಯಕ್ಷ ನಾರಾಯಣ್ ಪ್ರಸಾದ್ ಜೈನ್, ದಕ್ಷಿಣ ವಲಯದ ಅಧ್ಯಕ್ಷ ರಾಮರಾಜು ಶ್ರೀನಿವಾಸರಾಜು, ಸಮಾವೇಶದ ಸಮಿತಿ ಸಂಯೋಜಕರಾದ ಸುದರ್ಶನ್, ಡಿ.ಎಂ.ಭಟ್ಟಡ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಆ.4–2024–25ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರೆಸಿಕೊಂಡು ಹೋಗಲು ವಿವಿಧ ಸೌಲಭ್ಯವನ್ನು ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಲ್ಲಿ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಮತ್ತು ವಿದ್ಯುತ್‌ಚಾಲಿತ ಮರಗೆಲಸದ ಉಪಕರಣಗಳು, ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಕುಶಲಕರ್ಮಿಗಳಿಗೆ ಬಂಡವಾಳ ಹೂಡಿಕೆ ಸಹಾಯಧನ ಯೋಜನೆಯಡಿ ಸಹಾಯಧನ ಪಡೆಯಲು ಇಚ್ಛಿಸಿದಲ್ಲಿ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳೊಂದಿಗೆ https://mysore.nic.in ಮೂಲಕ ಆ.31ರೊಳಗೆ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪಂಚಾಯತ್‌ನ ಖಾದಿ ಮತ್ತು ಗ್ರಾಮೋದ್ಯೋಗದ ಉಪನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು.

ದೇಶ – ವಿದೇಶ

ಅಮೆರಿಕದ ಫ್ಲೋರಿಡಾ ಕಡಲ ತೀರಕ್ಕೆ ಅಪ್ಪಳಿಸಲಿದೆ ಮಾರಣಾಂತಿಕ ಡೆಬ್ಬಿ ಚಂಡಮಾರುತ



ಫ್ಲೋರಿಡಾ: ಡೆಬ್ಬಿ ಚಂಡಮಾರುತ ಅಮೆರಿಕದ ಆಗ್ನೇಯ ಕರಾವಳಿ ತೀರವಾದ ಫ್ಲೋರಿಡಾಗೆ ಅಪ್ಪಳಿಸಲು ಕ್ಷಣಗಣನೆ ಶುರುವಾಗಿದೆ. ಮಾರಣಾಂತಿಕ ಚಂಡಮಾರುತ ಎಂದೇ ಹವಾಮಾನ ಇಲಾಖೆ ಎಚ್ಚರಿಕೆ ನೀಡಿರುವ ಈ ಚಂಡಮಾರುತ, ಭಾರಿ ಮಳೆ ಹಾಗೂ ಬಿರುಗಾಳಿಯನ್ನು ತರಲಿದೆ. ಭಾರತೀಯ ಕಾಲಮಾನ ಸೋಮವಾರ ಬೆಳಗ್ಗೆ, ಅಮೆರಿಕ ಕಾಲಮಾನ ಭಾನುವಾರ ಸಂಜೆ ವೇಳೆಗೆ ಈ ಚಂಡಮಾರುತ ಅಪ್ಪಳಿಸುವ ನಿರೀಕ್ಷೆ ಇದೆ. ಬಿರುಗಾಳಿ ರೂಪದಲ್ಲಿ ಬೀಸುತ್ತಿರುವ ಗಾಳಿ ಫ್ಲೋರಿಡಾ ಕರಾವಳಿಗೆ ಅಪ್ಪಳಿಸುವ ಮುನ್ನ ಚಂಡಮಾರುತದ ರೂಪ ಪಡೆಯೋದು ದಟ್ಟವಾಗಿದೆ ಎಂದು ಅಮೆರಿಕದ ರಾಷ್ಟ್ರೀಯ ಚಂಡಮಾರುತ ಕೇಂದ್ರದ ಸಹಾಯಕ ನಿರ್ದೇಶಕ ಜೇಮೀ ರೋಮ್ ಮಾಹಿತಿ ನೀಡಿದ್ದಾರೆ. ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುವ ಜನರನ್ನು ಆದಷ್ಟು ಬೇಗ ಸುರಕ್ಷಿತ ಸ್ಥಳಗಳಿಗೆ ರವಾನೆ ಮಾಡಿ ಎಂದು ಫ್ಲೋರಿಡಾ ಸರ್ಕಾರಕ್ಕೆ ಅವರು ಆಗ್ರಹಿಸಿದ್ದಾರೆ.

ಸೆಲ್ಫಿ ತೆಗೆಯುವಾಗ 100 ಅಡಿ ಆಳಕ್ಕೆ ಬಿದ್ದ ಮಹಿಳೆ ರಕ್ಷಣೆ



ಪುಣೆ (ಮಹಾರಾಷ್ಟ್ರ): ಕಳೆದ ತಿಂಗಳಷ್ಟೇ ಟ್ರಾವೆಲ್ ಇನ್‌ಫ್ಲುಯೆನ್ಸರ್, 26 ವರ್ಷದ ಅನ್ವಿ ಕಾಮ್ದಾರ್ ಮಹಾರಾಷ್ಟ್ರದ ರಾಯಗಢ ಸಮೀಪದ ಕುಂಭೆ ಜಲಪಾತದ ಬಳಿ ರೀಲ್ ಚಿತ್ರೀಕರಣದ ವೇಳೆ ಆಯತಪ್ಪಿ ಪ್ರಪಾತಕ್ಕೆ ಬಿದ್ದು ಮೃತಪಟ್ಟಿದ್ದರು. ಈ ಘಟನೆ ಮಾಸುವ ಮುನ್ನವೇ ಪುಣೆಯಲ್ಲಿ ಮಹಿಳೆಯೊಬ್ಬರು ಸೆಲ್ಫಿ ತೆಗೆದುಕೊಳ್ಳುವಾಗ ಆಯ ತಪ್ಪಿ ಪ್ರಪಾತಕ್ಕೆ ಬಿದ್ದಿದ್ದಾರೆ. ಸತಾರಾದಲ್ಲಿ ಸೆಲ್ಫಿ ತೆಗೆದುಕೊಳ್ಳುವಾಗ ಆಳವಾದ ಕಮರಿಗೆ 29 ವರ್ಷದ ಮಹಿಳೆ ಬಿದ್ದಿದ್ದಾರೆ. ಪುಣೆಯಿಂದ ಸ್ನೇಹಿತರ ಗುಂಪಿನೊಂದಿಗೆ ಬೋರ್ನ್ ಘಾಟ್‌ಗೆ ಬಂದಿದ್ದ ಮಹಿಳೆ ಥೋಸ್ಘರ್ ಜಲಪಾತದ ಬಳಿ 100 ಅಡಿ ಆಳದ ಕಮರಿಗೆ ಬಿದ್ದಿದ್ದರು. ಮಹಿಳೆ ಪ್ರಪಾತಕ್ಕೆ ಬೀಳುತ್ತಿದ್ದಂತೆ ಸ್ಥಳೀಯ ಆಡಳಿತಕ್ಕೆ ಸುದ್ದಿ ನೀಡಲಾಯಿತು. ಕೂಡಲೇ ಪೊಲೀಸರು, ಗೃಹರಕ್ಷಕ ದಳ ಮತ್ತು ಸಹ ಪರ್ವತಾರೋಹಿಗಳು ಆಕೆಯನ್ನು ರಕ್ಷಿಸಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಮಹಿಳೆಯನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆಕೆಯ ಸ್ಥಿತಿ ಈಗ ಸ್ಥಿರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇರಾನ್–ಇಸ್ರೇಲ್ ನಡುವೆ ಬಿಕ್ಕಟ್ಟು: ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಾರ್ಮೋಡ



ಟೆಲ್ ಅವಿವ್/ಟೆಹರಾನ್: ಹಮಾಸ್ ನಾಯಕ ಇಸ್ಮಾಯಿಲ್ ಹನಿಯೆ ಹಾಗೂ ಹೆಜ್ಬೊಲ್ಲಾ (ಇರಾನ್ ಬೆಂಬಲಿತ ಲೆಬನಾನ್ ಸೈನಿಕಪಡೆ)ದ ಕಮಾಂಡರ್ ಹತ್ಯೆ ಬಳಿಕ ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಾರ್ಮೋಡ ಕವಿದಿದೆ.

ಹನಿಯೆ ಉಳಿದುಕೊಂಡಿದ್ದ ಅತಿಥಿ ಗೃಹದಲ್ಲಿ ವ್ಯಾಪಕ ಭದ್ರತೆ ಮಾಡಲಾಗಿತ್ತು. ಇದನ್ನು ಭೇದಿಸಿ ಇಸ್ರೇಲ್ ಪಡೆ ಹತ್ಯೆ ಮಾಡಿತ್ತು. ಈ ಘಟನೆ ಬಳಿಕ ಭದ್ರತೆಯಲ್ಲಿ ಉಂಟಾದ ಲೋಪಕ್ಕೆ ಸಂಬಂಧಿಸಿದಂತೆ ಗುಪ್ತಚರ ಇಲಾಖೆ ಹಿರಿಯ ಅಧಿಕಾರಿಗಳು, ಸೇನಾಧಿಕಾರಿಗಳು ಹಾಗೂ ರಾಜಧಾನಿಯ ಸೇನೆಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಸೇರಿದಂತೆ 20ಕ್ಕೂ ಹೆಚ್ಚು ಮಂದಿಯನ್ನು ಇರಾನ್ ಸರ್ಕಾರ ಬಂಧಿಸಲಾಗಿದೆ. ಹನಿಯೆ ಹತ್ಯೆಗೆ ಇಸ್ರೇಲ್ ಕಾರಣ ಎಂದು ಹಮಾಸ್ ಇರಾನ್‌ನ ಪ್ಯಾರಾ ಮಿಲಿಟರಿ ರೆವಲ್ಯೂಷನರಿ ಗಾರ್ಡ್ ತಿಳಿಸಿದೆ. ಇದಕ್ಕೆ ಪ್ರತೀಕಾರ ತಿರಿಸಿಕೊಳ್ಳುವುದಾಗಿ ಅದು ಹೇಳಿದೆ. ಈ ನಡುವೆ ಲೆಬನಾನ್ ರಾಜಧಾನಿ ಬೈರುತ್ ಪ್ರದೇಶದ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿ ಬಿಕ್ಕಟ್ಟನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ. ಈ ಘಟನೆ ಬಳಿಕ ಇರಾನ್ ನೆರವಿನೊಂದಿಗೆ ಸೇಡು ತೀರಿಸಿಕೊಳ್ಳಲು ಮುಂದಾಗಿರುವ ಹೆಜ್ಬೊಲ್ಲಾ ಪಡೆ ಇಸ್ರೇಲ್ ಮೇಲಿನ ದಾಳಿಗೆ ಸಿದ್ಧವಾಗಿವೆ.

ಮಧ್ಯಪ್ರದೇಶದ ಸಾಗರ್ ಜಿಲ್ಲೆಯಲ್ಲಿ ಗೋಡೆ ಕುಸಿತ: 9 ಮಕ್ಕಳು ಸಾವು



ಸಾಗರ್: ಮಧ್ಯಪ್ರದೇಶದ ಸಾಗರ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಇಂದು ಭಾನುವಾರ ಗೋಡೆ ಕುಸಿದು 9 ಮಕ್ಕಳು ಮೃತಪಟ್ಟ ಘಟನೆ ನಡೆದಿದೆ. ರೆಹ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಹಪುರ್ ಗ್ರಾಮದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದ ವೇಳೆ ಈ ಘಟನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಾಹಿತಿ ಪ್ರಕಾರ, ಶಹಪುರದ ಧಾರ್ಮಿಕ ಕಾರ್ಯಕ್ರಮದಲ್ಲಿ ಗೋಡೆ ಕುಸಿದ ಘಟನೆಯಲ್ಲಿ 10 ರಿಂದ 15 ವರ್ಷ ವಯಸ್ಸಿನ ಒಂಬತ್ತು ಮಕ್ಕಳು ಮೃತಪಟ್ಟಿದ್ದಾರೆ ಎಂದು ಸಾಗರ ವಿಭಾಗೀಯ ಆಯುಕ್ತ ವೀರೇಂದ್ರ ಸಿಂಗ್ ರಾವತ್ ತಿಳಿಸಿದ್ದಾರೆ.

ಕೆಲವು ಮಕ್ಕಳು ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆಯ ಸ್ಥಳದಿಂದ ಎಲ್ಲಾ ಅವಶೇಷಗಳನ್ನು ಹೊರತೆಗೆಯಲಾಗಿದೆ ಎಂದು ಜಿಲ್ಲಾಧಿಕಾರಿ ದೀಪಕ್ ಆರ್ಯ ತಿಳಿಸಿದ್ದಾರೆ. ಮಕ್ಕಳ ಸಾವಿಗೆ ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಸಂತಾಪ ಸೂಚಿಸಿದ್ದಾರೆ. ಪ್ರತಿ ಕುಟುಂಬಕ್ಕೆ ಸರ್ಕಾರವು 4 ಲಕ್ಷ ರೂ. ಆರ್ಥಿಕ ನೆರವು ನೀಡಲಿದೆ ಎಂದು ತಿಳಿಸಿದ್ದಾರೆ.

ಸೋಮಾಲಿಯಾದ ಹೋಟೆಲ್‌ನಲ್ಲಿ ಬಾಂಬ್ ದಾಳಿ: 32 ಮಂದಿ ಸಾವು



ಸೋಮಾಲಿಯಾ: ಸೋಮಾಲಿಯಾದ ರಾಜಧಾನಿ ಮೊಗಾದಿಶುವಿನ ಬೀಚ್ ಹೋಟೆಲ್‌ನಲ್ಲಿ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, ಪರಿಣಾಮ 32 ಮಂದಿ ಸಾವನ್ನಪ್ಪಿದ್ದು, 63 ಜನರು ಗಾಯಗೊಂಡಿದ್ದಾರೆ. ಅಲ್–ಖೈದಾದ ಪೂರ್ವ ಆಫ್ರಿಕಾದ ಅಂಗಸಂಸ್ಥೆ ಅಲ್–ಶಬಾಬ್ ತನ್ನ ರೇಡಿಯೋ ಸ್ಟೇಷನ್ ಮೂಲಕ ತನ್ನ ಹೋರಾಟಗಾರರು ದಾಳಿ ನಡೆಸಿದ್ದಾರೆ ಎಂದು ಹೇಳಿದೆ. ದಾಳಿಯಲ್ಲಿ ಓರ್ವ ಯೋಧ ಸಾವನ್ನಪ್ಪಿದ್ದು, ಉಳಿದವರು ನಾಗರಿಕರು ಎಂದು ಪೊಲೀಸ್ ವಕ್ತಾರ ಮೇಜರ್ ಅಬ್ದಿಫತಾ ಆದಾನ್ ಹಸನ್ ಪತ್ರಕರ್ತರಿಗೆ ತಿಳಿಸಿದ್ದಾರೆ. ದಾಳಿಯಲ್ಲಿ ಮತ್ತೊಬ್ಬ ಯೋಧ ಕೂಡ ಗಾಯಗೊಂಡಿದ್ದಾರೆ ಎಂದು ಹಸನ್ ತಿಳಿಸಿದ್ದಾರೆ. ಪ್ರತ್ಯಕ್ಷದರ್ಶಿಗಳು ಸ್ಫೋಟದ ನಂತರ ಗುಂಡಿನ ದಾಳಿಯೂ ನಡೆದಿರುವುದಾಗಿ ತಿಳಿಸಿದ್ದಾರೆ. ಸೋಮಾಲಿಯಾದಲ್ಲಿ ಅಂತಾರಾಷ್ಟ್ರೀಯ ಬೆಂಬಲ ಪಡೆದಿರುವ ಫೆಡರಲ್ ಸರ್ಕಾರದ ವಿರುದ್ಧ ಬಂಡೆದ್ದಿರುವ ಅಲ್‌ಖೈದಾದ ಜತೆ ಸಂಪರ್ಕವಿರುವ ಅಲ್–ಶಬಾಬ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

ಕಸ್ತೂರಿ ರಂಗನ್ ವರದಿ ಅನುಷ್ಠಾನ ಮತ್ತೆ ಮುನ್ನೆಲೆಗೆ

ಪಶ್ಚಿಮ ಘಟ್ಟ ನಿವಾಸಿಗಳಿಗೆ ಆತಂಕ



ಮಡಿಕೇರಿ, ಆ.4–ಗುಜರಾತ್‌ನಿಂದ ಕೇರಳದ ವರೆಗೆ ವ್ಯಾಪಿಸಿರುವ ಪಶ್ಚಿಮ ಘಟ್ಟ ಪ್ರದೇಶಗಳ ಸಂರಕ್ಷಣೆ ನಿಟ್ಟಿನಲ್ಲಿ ಕಸ್ತೂರಿ ರಂಗನ್ ನೀಡಿರುವ ವರದಿ ಅನುಷ್ಠಾನ ಕುರಿತ ವಿಚಾರ ಇದೀಗ ಮತ್ತೆ ಮುನ್ನೆಲೆಗೆ ಬರುತ್ತಿದ್ದು, ಈ ಮೂಲಕ ಪರ–ವಿರೋಧಗಳು ವ್ಯಕ್ತವಾಗುವುದರೊಂದಿಗೆ ಪಶ್ಚಿಮ ಘಟ್ಟ ಸಾಲಿನ ನಿವಾಸಿಗಳಲ್ಲಿ ಆತಂಕ ಉಂಟಾಗುತ್ತಿದೆ.

ಕಸ್ತೂರಿ ರಂಗನ್ ವರದಿಯ ನಾಲ್ಕನೇ ಕರಡು ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಹೊರಡಿಸಿದ್ದು, ಇದರ ಸಾಧಕ–ಬಾಧಕ ಪರಿಶೀಲಿಸಿಯೇ ಮುಂದಿನ ನಡೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಹೀಗಿದ್ದೂ ಪಶ್ಚಿಮ ಘಟ್ಟ ಸಾಲಿನ ಸಣ್ಣ ಕೊಡಗು ಜಿಲ್ಲೆ ಈ ವಿಚಾರದಿಂದ ಮತ್ತೆ ಆತಂಕಕ್ಕೆ ಸಿಲುಕಿದೆ.

ಪಶ್ಚಿಮ ಘಟ್ಟ ಸಾಲಿನ ಹಸಿರು ವಲಯ ಕೃಷಿಯೇತರ ಚಟುವಟಿಕೆ, ಗಣಿಗಾರಿಕೆಗಳಿಂದ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ದಶಕಗಳ ಹಿಂದೆ ಪಶ್ಚಿಮ ಘಟ್ಟ ಸಂರಕ್ಷಣೆಗೆ ಪೂರಕವಾಗಿ ಮಾಧವ ಗಾಡ್ಗಿಲ್ ವರದಿ ಬಂದಿತ್ತು. ಇದರಲ್ಲಿನ ಅಂಶಗಳು ಪಶ್ಚಿಮ ಘಟ್ಟ ಸಾಲಿನಲ್ಲಿ ಬರುವ ಜನರ ಬದುಕನ್ನು ನಾಶಪಡಿಸುತ್ತದೆ ಎನ್ನುವ ಆರೋಪಗಳ ಹಿನ್ನೆಲೆಯಲ್ಲಿ ಇದನ್ನು ತೀವ್ರವಾಗಿ ವಿರೋಧಿಸಲಾಗಿತ್ತು. ನಂತರ ಪಶ್ಚಿಮ ಘಟ್ಟ ಸಮಗ್ರ ಅಧ್ಯಯನದ ಮೂಲಕ ಹಸಿರು ಪರಿಸರ ಉಳಿಯುವಿಕೆಗೆ ಏನೆಲ್ಲ ಮಾಡಬೇಕು ಎನ್ನುವ ಅಂಶಗಳ ಒಳಗೊಂಡ ಕಸ್ತೂರಿ ರಂಗನ್ ವರದಿ ಕೇಂದ್ರ ಸರ್ಕಾರದ ಕೈ ಸೇರಿತ್ತು.

ಸೂಕ್ಷ್ಮ ವಲಯದಲ್ಲಿ 55 ಗ್ರಾಮ: ಕಸ್ತೂರಿ ರಂಗನ್ ವರದಿಯಲ್ಲಿ ಸೂಚಿಸಿರುವಂತೆ ಕೊಡಗಿನ 55 ಗ್ರಾಮಗಳು ಸೂಕ್ಷ್ಮ ಪರಿಸರ ವಲಯಕ್ಕೆ ಒಳಪಡುತ್ತವೆ. ಇದರೊಂದಿಗೆ ಇಲ್ಲಿನ ಅರಣ್ಯ ಪ್ರದೇಶಗಳು ಇದರ ವ್ಯಾಪ್ತಿಗೆ ಸಹಜವಾಗಿಯೇ ಸೇರ್ಪಡೆಯಾಗುತ್ತವೆ. ಆದರೆ, ಸ್ಥಳೀಯರ ಆತಂಕವೆಂದರೆ ಸೂಚಿತ ಗ್ರಾಮಗಳಲ್ಲಿ ಬೆರಳೆಣಿಕೆಯ ಕೆಲ ಗ್ರಾಮಗಳನ್ನು ಹೊರತುಪಡಿಸಿದರೆ, ಉಳಿದೆಲ್ಲವು ಜನವಸತಿ ಗ್ರಾಮಗಳಾಗಿವೆ. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗೆ ಅವಕಾಶವಿದ್ದರೂ, ರಾಸಾಯನಿಕ ಗೊಬ್ಬರ ಬಳಕೆಯ ಬಗ್ಗೆ ವರದಿಯಲ್ಲಿ ನಿರ್ಬಂಧ ವಿಧಿಸಲಾಗಿದೆ. ಇದರೊಂದಿಗೆ ಗಿಡಮರಗಳ ಸಂರಕ್ಷಣೆಯಡಿ ಕಠಿಣ ನಿರ್ಬಂಧಗಳಿವೆ. ಹೀಗಿರುವಾಗ ತಮ್ಮ ಸ್ವಂತ ಜಾಗವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಿ ಬದುಕನ್ನು ಕಟ್ಟಿಕೊಳ್ಳುವುದಾದರು ಹೇಗೆ ಎನ್ನುವುದು ಸ್ಥಳೀಯರ ಆತಂಕವಾಗಿದೆ.

ಇಡೀ ಕೊಡಗು ಸಂಕಷ್ಟಕ್ಕೆ?: ಜಿಲ್ಲೆಯಲ್ಲಿ ಗುರುತಿಸಿರುವ ಸೂಕ್ಷ್ಮ ಪರಿಸರ ಗ್ರಾಮಗಳು ಮತ್ತು ಅರಣ್ಯವಾಗಿದ್ದು, ಇದರೊಂದಿಗೆ ಸೂಕ್ಷ್ಮ ಪರಿಸರ ವಲಯದಿಂದ ನಿರ್ದಿಷ್ಟ ಅಂತರದ ಪ್ರದೇಶವನ್ನು 'ಬಫರ್ ಝೋನ್' ಎಂದು ಪರಿಗಣಿಸಲಾಗುತ್ತದೆ. ಈ ಪ್ರದೇಶದಲ್ಲೂ ವರದಿಯ ಅನ್ವಯ ಹತ್ತು ಹಲ ನಿರ್ಬಂಧಗಳಿರುತ್ತವೆ. ಸೂಕ್ಷ್ಮ ಪರಿಸರ ವಲಯ, ಗ್ರಾಮಗಳು ಮತ್ತು ಬಫರ್ ಝೋನ್ ಅನ್ನು ಪರಿಗಣಿಸಿದಲ್ಲಿ ಬಹುತೇಕ ಕೊಡಗು ಜಿಲ್ಲೆಯೆ ಸೂಕ್ಷ್ಮ ಪರಿಸರ ವ್ಯಾಪ್ತಿಗೆ ಒಳಪಡುವ ಆತಂಕ ಸ್ಥಳೀಯರದ್ದಾಗಿದೆ.

ಉಪಗ್ರಹ ಆಧಾರಿತ ಸರ್ವೇ?: ಹಿಂದೆ ಕಸ್ತೂರಿ ರಂಗನ್ ವರದಿ ಜಾರಿ ವಿಚಾರಗಳು ಬಂದಾಗ ವರದಿ ವಿರುದ್ಧ ಪಕ್ಷಾತೀತವಾದ ದೊಡ್ಡ ಮಟ್ಟದ ಹೋರಾಟಗಳು ಜಿಲ್ಲೆಯಲ್ಲಿ ನಡೆದಿದ್ದವು. ಆ ಹಂತದಲ್ಲಿ ಪಶ್ಚಿಮ ಘಟ್ಟ ಸಂರಕ್ಷಣೆ ವರದಿಯನ್ನು ಸ್ಥಳ ಪರಿಶೀಲನೆಯ ಬದಲಾಗಿ ಉಪಗ್ರಹ ಆಧಾರಿತವಾಗಿ ಮಾಡಲಾಗಿದೆ ಎನ್ನುವ ಆರೋಪಗಳು ಕೇಳಿ ಬಂದಿತ್ತು. ಅಲ್ಲದೆ, ಜನವಸತಿ ಗ್ರಾಮಗಳನ್ನು ಸೂಕ್ಷ್ಮ ಪರಿಸರ ವಲಯದಿಂದ ಕೈ ಬಿಡಬೇಕೆನ್ನುವ ಆಗ್ರಹ ಮಾಡಲಾಗಿತ್ತು. ಇದೀಗ ಕಸ್ತೂರಿ ರಂಗನ್ ವರದಿ ಮತ್ತೆ ಸದ್ದು ಮಾಡಲಾರಂಭಿಸಿದೆ. ಕೊಡಗು ಇದಕ್ಕೆ ಯಾವ ರೀತಿ ಪ್ರತಿಕ್ರಿಯಿಸುತ್ತದೆ ಮತ್ತು ರಾಜ್ಯ ಸರ್ಕಾರದ ನಿಲುವುಗಳೇನು ಎನ್ನುವುದು ಅತ್ಯಂತ ಮಹತ್ವದ್ದಾಗಿದೆ.

ರೈತ ಸಂಘದ ಕೊಡಗು ಜಿಲ್ಲಾಧ್ಯಕ್ಷ, ಪದಾಧಿಕಾರಿಗಳ ಪದಚ್ಯುತಿ ಖಂಡನೀಯ



ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಚೆಟ್ರುಮಾಡ ಸುಜಯ್ ಬೋಪಯ್ಯ ಮಾತನಾಡಿದರು.

ಮಡಿಕೇರಿ, ಆ.4–ರೈತ ಸಂಘದ ಕೊಡಗು ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಮತ್ತು ಇತರ ಪದಾಧಿಕಾರಿಗಳನ್ನು ಪದಚ್ಯುತಿಗೊಳಿಸಿರುವುದು ಖಂಡನೀಯ ಎಂದು ಸಂಘದ ಪದಾಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಚೆಟ್ರುಮಾಡ ಸುಜಯ್ ಬೋಪಯ್ಯ, ಜಿಲ್ಲೆಯ 5 ತಾಲೂಕು ಸಂಘಟನೆಗಳು ಒಮ್ಮತದಿಂದ ಕಾಡ್ಯಮಾಡ ಮನು ಸೋಮಯ್ಯ ನೇತೃತ್ವದಲ್ಲಿ ಕೊಡಗು ಜಿಲ್ಲಾ ರೈತ ಸಂಘದ ಹೆಸರಲ್ಲಿ ಮುನ್ನಡೆಯಲು ನಿರ್ಣಯ ಕೈಗೊಂಡಿವೆ. ಮನು ಸೋಮಯ್ಯ ಬೆಳವಣಿಗೆ ಮತ್ತು ಹೋರಾಟವನ್ನು ಸಹಿಸದೆ ಸಂಘದ ಕೆಲ ರಾಜ್ಯ ಪದಾಧಿಕಾರಿಗಳು ಜಿಲ್ಲಾಧ್ಯಕ್ಷರ ಸಹಿತ ಕೆಲ ಪದಾಧಿಕಾರಿಗಳನ್ನು ಪದಚ್ಯುತಿಗೊಳಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ರಾಜ್ಯ ಪದಾಧಿಕಾರಿಗಳ ಅವಧಿ ಮುಗಿದಿದ್ದರೂ ಅಧಿಕಾರದಲ್ಲಿ ಮುಂದುವರೆಯುವ ಮೂಲಕ ಅಸಂವಿಧಾನಿಕವಾಗಿ ನಡೆದುಕೊಂಡಿದ್ದು ಸರಿಯಲ್ಲ. ಈ ಹಿನ್ನೆಲೆಯಲ್ಲಿ ಜು.23ರಂದು ಸಭೆ ನಡೆಸಿ ರಾಜ್ಯ ಸಮಿತಿ ತೀರ್ಮಾನವನ್ನು ಖಂಡಿಸಲಾಗಿದೆ. ಅಲ್ಲದೆ, ಮನು ಸೋಮಯ್ಯ ಮುಂದಾಳತ್ವದಲ್ಲಿ ಜಿಲ್ಲಾ ಸಮಿತಿಯನ್ನು ಪುನರಾಯ್ಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಮನು ಸೋಮಯ್ಯ ನೇತೃತ್ವದಲ್ಲಿ ಸಂಘ ಬೆಳೆಗಾರರು, ಕೃಷಿಕರು, ಕಾರ್ಮಿಕರ ಸಮಸ್ಯೆಗಳ ಬಗ್ಗೆ ನಿರಂತರ ಹೋರಾಟ ನಡೆಸಲಾಗುತ್ತಿದೆ. ಜಾನುವಾರು ಸಾವು, ವನ್ಯಜೀವಿಗಳಿಂದ ಮಾನವ ಜೀವ ಹಾನಿ ಸಂದರ್ಭ ಸರ್ಕಾರ ನೀಡುತ್ತಿದ್ದ ಅಲ್ಪ 2.5 ಲಕ್ಷ ರೂ. ಪರಿಹಾರವನ್ನು 15 ಲಕ್ಷ ರೂ.ಗೆ ಹೆಚ್ಚಿಸಿರುವುದು ರೈತ ಸಂಘದ ಹೋರಾಟದ ಫಲವಾಗಿದೆ ಎಂದು ಹೇಳಿದರು.

ಲೋಕಸಭಾ ಚುನಾವಣೆ ಸಂದರ್ಭ ರಾಜಕೀಯ ಪಕ್ಷವೊಂದರ ವಿರುದ್ಧ ಭಿತ್ತಿ ಪತ್ರ ಹಂಚಿಲ್ಲ ಎಂಬ ಕಾರಣ ನೀಡಿ, ಜಿಲ್ಲಾಧ್ಯಕ್ಷ ಸಹಿತ ಪದಾಧಿಕಾರಿಗಳನ್ನು ಪದಚ್ಯುತಿಗೊಳಿಸಿರುವುದು ಸಂಘದ ತತ್ವ ಸಿದ್ಧಾಂತಗಳಿಗೆ ವಿರುದ್ಧವಾಗಿದೆ. ರೈತ ಸಂಘ ರಾಜಕೀಯೇತರ ಸಂಘಟನೆಯಾಗಿದ್ದು, ರೈತರ ಸಮಸ್ಯೆಗಳಿಗೆ ಹೋರಾಟ ಮಾಡಬೇಕು. ಇದೇ ಸಿದ್ಧಾಂತದಂತೆ ಜಿಲ್ಲಾ ರೈತ ಸಂಘ ತನ್ನ ಹೋರಾಟ ನಡೆಸುತ್ತಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಮುಖರಾದ ಪುಚ್ಚಿಮಾಡ ಸುಭಾಷ್ ಸುಬ್ಬಯ್ಯ, ಅಲೆಮಾಡ ಮಂಜುನಾಥ್, ಎ.ಎಂ.ಕುಶಾಲಪ್ಪ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ಕೆ.ಎಂ.ದಿನೇಶ್, ಉಪಾಧ್ಯಕ್ಷ ಹೂವಯ್ಯ ಉಪಸ್ಥಿತರಿದ್ದರು.

ಟ್ರ್ಯಾಕ್ಟರ್‌ನಿಂದ ಬಿದ್ದು ವ್ಯಕ್ತಿ ಸಾವು



ಅಂಥೋಣಿ

ಮಡಿಕೇರಿ, ಆ.4–ಟ್ರ್ಯಾಕ್ಟರ್‌ನಿಂದ ಬಿದ್ದು ವ್ಯಕ್ತಿ ಮೃತಪಟ್ಟ ಘಟನೆ ನಾಪೋಕ್ಲು ಹಳೇ ತಾಲೂಕು ಮುಖ್ಯ ರಸ್ತೆಯಲ್ಲಿ ಶನಿವಾರ ರಾತ್ರಿ ನಡೆದಿದೆ.

ನಾಪೋಕ್ಲು ಬಳಿಯ ಬಾವಲಿ ಗ್ರಾಮದ ಮೂಕಂಡ ಬಾಣೆ ಪೈಸಾರಿ ನಿವಾಸಿ ದಿವಂಗತ ಅಲೆಕ್ಸ್ ಹಾಗೂ ಮೇರಿ ದಂಪತಿ ಪುತ್ರ ಅಂಥೋಣಿ(43) ಮೃತ ವ್ಯಕ್ತಿ.

ಈತ ನಾಪೋಕ್ಲು ತರಕಾರಿ ಮಳಿಗೆಯೊಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಶನಿವಾರ ರಾತ್ರಿ ನಾಪೋಕ್ಲು ಹಳೇ ತಾಲೂಕಿನ ತನ್ನ ಸಹೋದರಿಯ ಮಗನ ಹುಟ್ಟುಹಬ್ಬ ಆಚರಣೆಯಲ್ಲಿ ಪಾಲ್ಗೊಂಡು ಸ್ನೇಹಿತ ಶಿವಕುಮಾರ್ ಟ್ರ್ಯಾಕ್ಟರ್‌ನಲ್ಲಿ ನಾಪೋಕ್ಲುವಿಗೆ ಬರುತ್ತಿದ್ದಾಗ ಆಯತಪ್ಪಿ ಬಿದ್ದಿದ್ದಾರೆ. ಪರಿಣಾಮ ಗಂಭೀರ ಗಾಯಗೊಂಡಿದ್ದ ಅಂಥೋಣಿ ಯನ್ನು ಸ್ಥಳೀಯರು ನಾಪೋಕ್ಲುವಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದಾರೆ.

ಈ ಸಂಬಂಧ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಕುಶಾಲನಗರದಲ್ಲಿ ಬಿಜೆಪಿ ವಿರುದ್ಧ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕುಶಾಲನಗರ, ಆ.4–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕೇಂದ್ರ ಸರ್ಕಾರ ಹಾಗೂ ರಾಜ್ಯ ಬಿಜೆಪಿ ಪಿತೂರಿ ನಡೆಸುತ್ತಿದೆ ಎಂದು ಆರೋಪಿಸಿ ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಕಚೇರಿಯಿಂದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಕೆಲಕಾಲ ರಸ್ತೆ ಸಂಚಾರ ತಡೆ ನಡೆಸಿ ಬಿಜೆಪಿ ವರಿಷ್ಠರ ವಿರುದ್ಧ ಘೋಷಣೆ ಕೂಗಿದರು.

ಪ್ರಧಾನ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂವಿಧಾನ ವಿರೋಧಿ ಕಾರ್ಯ ನಡೆಸುತ್ತಿದ್ದಾರೆ. ರಾಜ್ಯಪಾಲರು ಕೇಂದ್ರದ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಬಿಜೆಪಿ ವಿರುದ್ಧ ದನಿ ಎತ್ತುವವರ ವಿರುದ್ಧ ಪಿತೂರಿ ನಡೆಸಿ ಪ್ರಕರಣ ದಾಖಲಿಸುವ ಪ್ರವೃತ್ತಿ ಹೊಂದಿರುವ ಕೇಂದ್ರ ಸರ್ಕಾರ ಇಡಿ, ಸಿಬಿಐ ದುರ್ಬಳಕೆ ಮಾಡಿಕೊಂಡು ರಾಜ್ಯ ಸರ್ಕಾರವನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿರುವುದು ಖಂಡನೀಯ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ನಡೆಸುತ್ತಿರುವ ಮೈಸೂರು ಚಲೋ ಪಾದಯಾತ್ರೆ ಅರ್ಥಹೀನ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್, ಕುಶಾಲನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಕೆಪಿಸಿಸಿ ಸದಸ್ಯರಾದ ಮಂಜುನಾಥ್ ಗುಂಡೂರಾವ್, ನಟೇಶ್ ಗೌಡ, ಪ್ರಮುಖರಾದ ಜೋಸೆಫ್ ವಿಕ್ಟರ್ ಸೋನ್ಸ್, ಶಿವಶಂಕರ್, ಕಿರಣ್, ಪದ್ಮಾ, ಜಗದೀಶ್, ಶಾಜಿ, ಖಲೀಮುಲ್ಲಾ, ಟಿ.ಪಿ. ಹಮೀದ್, ನವೀನ್‌ಗೌಡ, ಅಣ್ಣಯ್ಯ, ರಫೀಕ್, ಶಿವಮ್ಮ, ಕೃಷ್ಣೇಗೌಡ, ಶೇಖರ್, ಆದಂ, ರೋಷನ್ ಭಾಗವಹಿಸಿದ್ದರು.

ಭಗಂಡೇಶ್ವರ ದೇವಸ್ಥಾನದಲ್ಲಿ ಪೊಲಿಂಕಾನ ಉತ್ಸವ



ಪೊಲಿಂಕಾನ ಉತ್ಸವದ ಅಂಗವಾಗಿ ಭಾಗಮಂಡಲದ ಕಾವೇರಿ ತ್ರಿವೇಣಿ ಸಂಗಮದಲ್ಲಿ ಬಾಗಿನ ಅರ್ಪಿಸಲಾಯಿತು.

ಮಡಿಕೇರಿ, ಆ.4–ಕ್ರೋಧಿ ಸಂವತ್ಸರದ ಗ್ರೀಷ್ಮ ಋತುವಿನ ದಕ್ಷಿಣಾಯನ ಕರ್ಕಾಟಕ ಮಾಸ ಆಷಾಢ ಕೃಷ್ಣ ಪಕ್ಷದ ಅಮಾವಾಸ್ಯೆಯ ದಿನವಾದ ಭಾನುವಾರ ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ 'ಪೊಲಿಂಕಾನ ಉತ್ಸವ'ವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ದೇವಾಲಯದ ಪ್ರಧಾನ ಅರ್ಚಕ ಎಸ್.ರವಿಕುಮಾರ್ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಾಂಪ್ರದಾಯಿಕ ವಾಲಗದೊಂದಿಗೆ ತ್ರಿವೇಣಿ ಸಂಗಮದವರೆಗೆ ಮೆರವಣಿಗೆ ನಡೆಸಲಾಯಿತು. ಬಳಿಕ 'ಪೊಲಿಂಕಾನ ಉತ್ಸವ' ಮತ್ತು ಮಹಾಪೂಜೆ ನಡೆಸಿ, ನಾಡಿನಲ್ಲಿ ಉತ್ತಮ ಬೆಳೆ, ಸಮೃದ್ಧಿ ಮತ್ತು ಶಾಂತಿಗಾಗಿ ಪ್ರಾರ್ಥಿಸಲಾಯಿತು. ಬಳಿಕ ಮೈದುಂಬಿ ಹರಿಯುತ್ತಿರುವ ಕಾವೇರಿ ತ್ರಿವೇಣಿ ಸಂಗಮದಲ್ಲಿ ಬಾಗಿನ ಅರ್ಪಿಸಲಾಯಿತು.

ದೇವಾಲಯದ ಕಾರ್ಯ ನಿರ್ವಹಣಾಧಿಕಾರಿ ಎನ್.ಜಿ.ಚಂದ್ರಶೇಖರ್, ತಕ್ಕ ಮುಖ್ಯಸ್ಥ ಬಳ್ಳಡ್ಕ ಬಿ.ಸಿ.ಅಪ್ಪಾಜಿ, ಶ್ರೀ ತಲಕಾವೇರಿ ದೇವಾಲಯದ ತಕ್ಕಮುಖ್ಯಸ್ಥ ಕೋಡಿ ಯು.ಮೋಟಯ್ಯ, ಸಿಬ್ಬಂದಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ನೂರಾರು ಭಕ್ತರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲೆಯ ವಿವಿಧೆಡೆ ಅನ್ನಸಂತರ್ಪಣೆ



ಗುಂಡ್ಲುಪೇಟೆಯಲ್ಲಿ ಕಾಳಿಕಾಂಬ ದೇವಿಯ ಉತ್ಸವ ಮೂರ್ತಿಯನ್ನು ಮೆರವಣಿಗೆ ನಡೆಸಲಾಯಿತು.

ಚಾಮರಾಜನಗರ, ಆ.4–ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ಭಾನುವಾರ ಭೀಮನ ಅಮಾವಾಸ್ಯೆ ವಿಶೇಷ ಪೂಜಾ ಕೈಂಕರ್ಯ ಹಾಗೂ ಅನ್ನಸಂತರ್ಪಣೆ ನಡೆಯಿತು.

ಬಿಳಿಗಿರಿರಂಗನಬೆಟ್ಟ, ಹಿಮವದ್ ಗೋಪಾಲ ಸ್ವಾಮಿ ಬೆಟ್ಟ, ಸಂತೇಮರಹಳ್ಳಿ, ಕಂದಹಳ್ಳಿ, ಕೂಡ್ಲೂರಿನ ಮಹದೇಶ್ವರ ಹಾಗೂ ಮಂಟೇಸ್ವಾಮಿ, ಯಡಬೆಟ್ಟದಮಹದೇಶ್ವರ, ಚಾಮರಾಜನಗರದ ಆದಿ ಶಕ್ತಿ, ಮಂಟೇಸ್ವಾಮಿ, ಚಾಮರಾಜೇಶ್ವರ, ಕೊಳದ ಗಣಪತಿ, ವೀರಭದ್ರಸ್ವಾಮಿ, ರಾಮಸಮುದ್ರದ ಮಹದೇಶ್ವರ, ಚುಂಡಕವಾಡಿ ಲಕ್ಷ್ಮೀದೇವಿ, ಶನೇಶ್ವರಸ್ವಾಮಿ, ಹರದನಹಳ್ಳಿ ದಿವ್ಯಲಿಂಗೇಶ್ವರ, ದೇಮಹಳ್ಳಿಯ ಮಂಟೇಸ್ವಾಮಿ, ತೊರವಳ್ಳಿಯ ಮಹದೇಶ್ವರ, ಸೋಮವಾರಪೇಟೆಯ ಶಿರಗಳ್ಳಿ ಲಕ್ಷ್ಮೀದೇವಿ ಹಾಗೂ ಬೊಮ್ಮೇಶ್ವರ ದೇವಾಲಯಗಳಲ್ಲಿ ಬೆಳಗ್ಗೆಯಿಂದ ರಾತ್ರಿವರೆಗೆ ಪೂಜೆ ನೆರವೇರಿಸಲಾಯಿತು.

ಬಹುತೇಕ ದೇವಾಲಯಗಳಲ್ಲಿ ಅನ್ನಸಂತರ್ಪಣೆ ನಡೆಯಿತು. ದೇವಾಲಯಗಳನ್ನು ಬಣ್ಣ ಬಣ್ಣದ ಹೂ, ತಳಿರು ತೋರಣಗಳಿಂದ ಅಲಂಕರಿ ಸಲಾಗಿತ್ತು. ಮನೆಗಳಲ್ಲಿ ಮಹಿಳೆಯರು ಜ್ಯೋತಿ ಭೀಮೇಶ್ವರ ವ್ರತ ಆಚರಿಸಿದರು.

ಕಾಳಿಕಾಂಬ ದೇವಿ ಮೆರವಣಿಗೆ

ಗುಂಡ್ಲುಪೇಟೆ ಕಾಳಿಕಾಂಬ ಕಮಟೇಶ್ವರ ಸ್ವಾಮಿ ದೇವಾಲಯದಲ್ಲಿ ಭೀಮನ ಅಮಾವಾಸ್ಯೆ ಪೂಜಾ ಕಾರ್ಯ ನೆರವೇರಿಸಲಾಯಿತು. ನಂತರ ದೇವಿಯ ಉತ್ಸವ ಮೂರ್ತಿಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯ, ವೀರಗಾಸೆ ಹಾಗೂ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು.

ಇದೇ ವೇಳೆ ಸಾವಿರಾರು ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಹೆಚ್ಚಿನ ವಿಶ್ವಕರ್ಮ ಜನಾಂಗದ ಮುಖಂಡರು, ಯುವಕರು ಹಾಗೂ ಮಹಿಳೆಯರು ಭಾಗವಹಿಸಿದ್ದರು.

ಬೆಟ್ಟದ ಮಾದಪ್ಪನಿಗೆ ಎಣ್ಣೆ ಮಜ್ಜನ

ಲಕ್ಷಾಂತರ ಭಕ್ತರ ನಡುವೆ ಭೀಮನ ಅಮಾವಾಸ್ಯೆ ವಿಶೇಷ ಪೂಜೆ



ಮಹದೇಶ್ವರಬೆಟ್ಟದಲ್ಲಿ ಹುಲಿ, ಬಸವ ವಾಹನ ಹಾಗೂ ರುದ್ರಾಕ್ಷಿ ಮಂಟಪ ಉತ್ಸವ ನಡೆದವು.

ಹನೂರು, ಆ.4–ಪ್ರಸಿದ್ಧ ಯಾತ್ರಾ ಸ್ಥಳ ಮಲೆ ಮಹದೇಶ್ವರಬೆಟ್ಟದಲ್ಲಿ ಭಾನುವಾರ ಭೀಮನ ಅಮಾವಾಸ್ಯೆ ವಿಶೇಷ ಪೂಜಾ ಕೈಂಕರ್ಯ ವಿಜೃಂಭಣೆಯಿಂದ ನಡೆಯಿತು.

ಶನಿವಾರ ಮಾದಪ್ಪನಿಗೆ ಎಣ್ಣೆ ಮಜ್ಜನ ಸೇವೆ ನಡೆಯಿತು. ಎಣ್ಣೆ ಮಜ್ಜನ ಸೇವೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಮಾದಪ್ಪನ ದರ್ಶನ ಪಡೆದರು. ಶನಿವಾರವೇ ಹೆಚ್ಚಿನ ಭಕ್ತರು ಬೆಟ್ಟಕ್ಕೆ ಆಗಮಿಸಿ ವಾಸ್ತವ್ಯ ಹೂಡಿದ್ದರು. ದೇವಸ್ಥಾನದ ಮುಂಭಾಗ ಹಾಗೂ ರಂಗಮಂದಿರ ಸೇರಿದಂತೆ ಇತರೆ ಕಡೆಗಳಲ್ಲಿ ಬಿಡಾರ ಹೂಡಿದ್ದ ಭಕ್ತರು, ಮಾದಪ್ಪನ ಗೀತೆ ಹಾಡಿ ಭಕ್ತಿ ಮೆರೆದರು. ಉಘೇ ಮಾದಪ್ಪ.. ಉಘೇ ಮಾದಪ್ಪ.... ಎಂಬ ಜೈಕಾರಗಳನ್ನು ಹಾಕಿದರು.

ಭಾನುವಾರ ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ಮಾದಪ್ಪನಿಗೆ ವಿವಿಧ ಅಭಿಷೇಕ, ವಿಶೇಷ ಪೂಜೆ ನೆರವೇರಿಸಲಾಯಿತು. ಹರಕೆ ಹೊತ್ತ ಭಕ್ತರು ಹುಲಿ ವಾಹನ, ಬಸವ ವಾಹನ, ರುದ್ರಾಕ್ಷಿ ಮಂಟಪ ಉತ್ಸವಗಳಲ್ಲಿ ಪಾಲ್ಗೊಳ್ಳುವ ಮೂಲಕ ಹರಕೆ ತೀರಿಸಿದರು. ಅಲ್ಲದೇ ಮುಡಿ ಸೇವೆ, ಉರುಳು ಸೇವೆ, ಪಂಜಿನ ಸೇವೆ ಸಲ್ಲಿಸಿದರು. ದೇವಸ್ಥಾನವನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಭಕ್ತರು ಸರತಿ ಸಾಲಿನಲ್ಲಿ ನಿಂತು ಮಾದಪ್ಪನ ದರ್ಶನ ಪಡೆದರು.

ವಿಶೇಷ ದಾಸೋಹ: ಶ್ರೀಕ್ಷೇತ್ರಕ್ಕೆ ಆಗಮಿಸುವ ಭಕ್ತರಿಗೆ ಬೆಂಗಳೂರಿನ ಮಹದೇಶ್ವರ ಕ್ಯಾಂಟೀನ್ ಮಾಲೀಕರು ಪ್ರತಿವರ್ಷ ದಾಸೋಹ ಏರ್ಪಡಿಸುತ್ತಾರೆ. ಈ ಬಾರಿ 1 ಲಕ್ಷಕ್ಕೂ ಹೆಚ್ಚು ಭಕ್ತರಿಗೆ ದಾಸೋಹ ಏರ್ಪಡಿಸಿದ್ದರು. ರಾಜ್ಯ ಸರ್ಕಾರ ಶಕ್ತಿ ಯೋಜನೆಯಡಿ ಉಚಿತ ಬಸ್ ಪ್ರಯಾಣ ಕಲ್ಪಿಸಿರುವುದರಿಂದ ಹೆಚ್ಚಿನ ಮಹಿಳೆಯರು ಆಗಮಿಸಿದರು. ಜೊತೆಗೆ ರಾಜ್ಯದ ನಾನಾ ಭಾಗಗಳಿಂದ ಲಕ್ಷಾಂತರ ಭಕ್ತ ಸಮೂಹವೇ ಹರಿದು ಬಂದಿತು.

ಟ್ರಾಫಿಕ್ ಜಾಮ್: ಭೀಮನ ಅಮಾವಾಸ್ಯೆ ಪ್ರಯುಕ್ತ ಲಕ್ಷಾಂತರ ಭಕ್ತರು ಆಗಮಿಸಿದ ಹಿನ್ನೆಲೆಯಲ್ಲಿ ತಾಳಬೆಟ್ಟದಿಂದ ರಂಗಸ್ವಾಮಿ ಹೊಡ್ಡಿವರಗೆ ಸುಮಾರು 10 ಕಿ.ಮೀ. ಟ್ರಾಫಿಕ್ ಜಾಮ್ ಆಗಿತ್ತು. ಇದರಿಂದ ಭಕ್ತರು 3 ತಾಸು ಬಸವಳಿದರು. ಇದೇ ವೇಳೆ ಪೊಲೀಸ್ ಬಿಗಿಬಂದೋಬಸ್ತ್ ಕಲ್ಪಿಸಲಾಗಿತ್ತು.

130 ಮಂದಿಗೆ ತಪಾಸಣೆ, 55 ಮಂದಿ ಚಿಕಿತ್ಸೆಗೆ ಆಯ್ಕೆ



ಚಾಮರಾಜನಗರ ರೋಟರಿ ಭವನದಲ್ಲಿ ಆಯೋಜಿಸಿದ್ದ ಶಿಬಿರದಲ್ಲಿ ಕಣ್ಣಿನ ತಪಾಸಣೆ ನಡೆಸಲಾಯಿತು.

ಚಾಮರಾಜನಗರ, ಆ.4–ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಕಣ್ಣಿನ ತಪಾಸಣಾ ಉಚಿತ ಶಿಬಿರ ಯಶಸ್ವಿಯಾಗಿ ನಡೆಯಿತು.

ಬಿ.ರಾಚಯ್ಯ ಜೋಡಿ ರಸ್ತೆಯ ರೋಟರಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಡೆದ ಶಿಬಿರದಲ್ಲಿ 130 ಮಂದಿಗೆ ತಪಾಸಣೆ ನಡೆಸಿ, 55 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

ರೋಟರಿ ಸಂಸ್ಥೆ ಅಧ್ಯಕ್ಷ ರಾಮಸಮುದ್ರ ನಾಗರಾಜು ಮಾತನಾಡಿ, ಮನುಷ್ಯನ ಅಂಗಗಳಲ್ಲಿ ಕಣ್ಣು ಬಹುಮುಖ್ಯವಾಗಿದೆ. ಕಣ್ಣಿನ ಬಗ್ಗೆ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು. ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿ ರುವವರಿಗೆ ಅನುಕೂಲ ಕಲ್ಪಿಸಲು ರೋಟರಿ ಸಂಸ್ಥೆ ಪ್ರತಿ ತಿಂಗಳು ಮೊದಲ ಭಾನುವಾರ ನೇತ್ರ ತಪಾಸಣಾ ಉಚಿತ ಶಿಬಿರ ಆಯೋಜಿಸುತ್ತಿದೆ ಎಂದರು. ಸಂಸ್ಥೆ ಕಾರ್ಯದರ್ಶಿ ಹೆಚ್.ಎಂ.ಗುರುಸ್ವಾಮಿ, ಸಂಸ್ಥಾಪಕ ಸದಸ್ಯ ಶ್ರೀನಿವಾಸಶೆಟ್ಟಿ, ಕಾಗಲವಾಡಿ ಚಂದ್ರು, ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಪ್ರಭಾಕರ್, ರಾಜು ವರ್ಗೀಸ್, ಸದಸ್ಯ ಅಂಕಶೆಟ್ಟಿ, ಸಂಜಯ್ ಕುಮಾರ್, ವಿಜಯಕಾಂತ್, ಶ್ರೀನಿವಾಸ್ ಎಸ್‌ಆರ್‌ಎಸ್, ಪಿಆರ್‌ಓ ವಿಜಯ ಕಾಂತ್ ಇತರರು ಹಾಜರಿದ್ದರು.

ವ್ಯಸನ ಮುಕ್ತದಿಂದ ನೆಮ್ಮದಿ ಜೀವನ

ಯಳಂದೂರು: ಒಬ್ಬ ವ್ಯಕ್ತಿ ಕುಡಿತಕ್ಕೆ ದಾಸನಾದರೆ ಅವನ ಆರೋಗ್ಯ ಹದಗೆಡುವ ಜೊತೆಗೆ ಸಮಾಜದ ಸ್ವಾಸ್ಥ್ಯ ಕೂಡ ಹಾಳಾಗುತ್ತದೆ. ಹೀಗಾಗಿ ವ್ಯಸನ ಮುಕ್ತರಾಗುವುದರಿಂದ ನೆಮ್ಮದಿಯ ಜೀವನ ನಡೆಸಲು ಸಾಧ್ಯ ಎಂದು ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ವಿವಿಧ ಸಂಘ–ಸಂಸ್ಥೆಗಳೊಂದಿಗೆ ಏರ್ಪಡಿಸಿದ್ದ ಕುಡಿತ ಬಿಡಿಸುವ ಉಚಿತ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು, ಮದ್ಯಪಾನ ಹಾಗೂ ಧೂಮಪಾನಗಳಂತಹ ವ್ಯಸನಗಳಿಂದ ಜನರು ಮುಕ್ತರಾಗಬೇಕು. ವ್ಯಸನಕ್ಕೆ ದಾಸರಾದರೆ, ಅದರಿಂದ ಹೊರಬರುವುದು ಕಷ್ಟ. ಕುಡಿತ ಸಾರ್ವಕಾಲಿಕ ಸಮಸ್ಯೆಯಾಗಿದ್ದು, ಇದರಿಂದ ಅನೇಕ ದುಷ್ಪರಿಣಾಮಗಳು ಉಂಟಾಗುತ್ತವೆ ಎಂದರು.

ವ್ಯಸನದಿಂದ ವ್ಯಕ್ತಿಯ ಘನತೆ ಹಾಗೂ ಆರೋಗ್ಯಕ್ಕೆ ತೊಂದರೆಯಾಗಲಿದೆ. ಜೊತೆಗೆ ಸಮಾಜ ಹಾಗೂ ಸಮುದಾಯಗಳ ಸ್ವಾಸ್ಥ್ಯವೂ ಹದಗೆಡುತ್ತದೆ. ವ್ಯಸನ ಮುಕ್ತರಾಗಿ ಸಮಾಜಕ್ಕೆ ಉತ್ತಮ ಸಂದೇಶ ನೀಡಬೇಕು ಎಂದರು. ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಸಾಮಾಜಿಕ ಪಿಡುಗಾಗಿರುವ ಕುಡಿತದಿಂದ ಕುಟುಂಬದಲ್ಲಿ ತೊಂದರೆಗಳಾಗುತ್ತವೆ. ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಉತ್ತಮ ಜೀವನ ನಡೆಸಬೇಕೆಂದು ಸಲಹೆ ನೀಡಿದರು.

ಇದೇ ವೇಳೆ ಶಿಬಿರಾರ್ಥಿ ಮಾರ್ಟಳ್ಳಿ ಸೆಲ್ವನಾಥನ್, ಬೀರೂರು ಯತೀಶ್ ಹಾಗೂ ಹಲವು ಶಿಬಿರಾರ್ಥಿಗಳು ಹಾಗೂ ಅವರ ಪೋಷಕರು ತಮ್ಮ ಅಭಿಪ್ರಾಯ ಹಂಚಿಕೊಂಡರು. ಅಗರ ಮಠದ ಶ್ರೀ ಸಿದ್ದಮಲ್ಲಸ್ವಾಮೀಜಿ, ಕಾರಾಪುರ ಮಠದ ಶ್ರೀ ಬಸವರಾಜಸ್ವಾಮೀಜಿ, ಗೌಡಹಳ್ಳಿ ಮಠದ ಶ್ರೀ ಮರಿತೋಂಟದಾರ್ಯಸ್ವಾಮೀಜಿ, ಕೆಸ್ತೂರು ಮಠದ ಶ್ರೀ ತೋಂಟದಾರ್ಯಸ್ವಾಮೀಜಿ, ಡಿ.ಜಿ.ರಾಜೇಶ್, ವಿ.ಮಲ್ಲಿಕಾರ್ಜುನಸ್ವಾಮಿ, ಎಂ.ವೀರಭದ್ರಸ್ವಾಮಿ, ಹೆಚ್.ಜಿ.ಸಂತೋಷ್, ಡಾ.ಎಂ.ಪಿ.ಸೋಮಶೇಖರ್, ಶಿಬಿರಾಧಿಕಾರಿ ಮನೋಹರ್, ಡಾ.ನಾಗೇಂದ್ರ ಇತರರಿದ್ದರು.



ಯಳಂದೂರಿನ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಿದ್ದ ಕುಡಿತ ಬಿಡಿಸುವ ಉಚಿತ ಶಿಬಿರದಲ್ಲಿ ಶಿಬಿರಾರ್ಥಿಗಳು ಸುತ್ತೂರು ಶ್ರೀಗಳ ಆಶೀರ್ವಾದ ಪಡೆದರು.

ಜಿಲ್ಲೆ ಅಭಿವೃದ್ಧಿಗೆ ಹಲವು ನಾಯಕರ ಶ್ರಮ



ಚಾಮರಾಜನಗರ ಸಣ್ಣ ಕೈಗಾರಿಕೆಗಳ ಸಂಘದ ವಾರ್ಷಿಕೋತ್ಸವದಲ್ಲಿ ಕಾಡಾ ಅಧ್ಯಕ್ಷ ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರದ ನಿವೃತ್ತ ಜಂಟಿ ನಿರ್ದೇಶಕ ಕೆ.ಎ.ರಾಜೇಂದ್ರ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಆ.4–ಜಿಲ್ಲೆ ಅಭಿವೃದ್ಧಿಗೆ ರಾಜಕೀಯ ಹಲವು ನಾಯಕರ ಶ್ರಮ ಬಹಳಷ್ಟಿದ್ದು, ಜಿಲ್ಲೆಯಲ್ಲಿ ಹೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗುತ್ತಿರುವುದರಿಂದ ಉದ್ಯೋಗಗಳು ದೊರೆಯುತ್ತಿವೆ ಎಂದು ಚಾಮರಾಜನಗರ ಸಣ್ಣ ಕೈಗಾರಿಕೆ ಸಂಘದ ಅಧ್ಯಕ್ಷ ಎ.ಜಯಸಿಂಹ ತಿಳಿಸಿದರು.

ನಗರದ ನಂಜನಗೂಡು ರಸ್ತೆಯ ಖಾಸಗಿ ಸಭಾಂಗಣದಲ್ಲಿ ನಡೆದ ಚಾಮರಾಜನಗರ ಸಣ್ಣ ಕೈಗಾರಿಕೆಗಳ ಸಂಘದ (ಛಾಸಿಯ) ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಕೈಗಾರಿಕೆಗಳ ಸ್ಥಾಪನೆಯಿಂದ ಜಿಲ್ಲೆ ಅಭಿವೃದ್ಧಿಯಾಗಲಿದೆ. ಜೊತೆಗೆ ಯುವಕರಿಗೆ ಹೆಚ್ಚು ಉದ್ಯೋಗಾವಕಾಶಗಳು ಸಿಗಲಿದೆ. ಚಾಮರಾಜನಗರ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಿಸಿದ ಕೀರ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ದಿ.ಹೆಚ್.ಎಸ್.ಮಹದೇವ ಪ್ರಸಾದ್ ಹಾಗೂ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರಿಗೆ ಸಲ್ಲುತ್ತದೆ ಎಂದರು.

ಕಾಡಾ ಅಧ್ಯಕ್ಷ ಮರಿಸ್ವಾಮಿ ಮಾತನಾಡಿ, ಚಾಮರಾಜನಗರ ಹಿಂದುಳಿದ ಜಿಲ್ಲೆಯಾದ್ದರಿಂದ ಮುಖ್ಯಮಂತ್ರಿಗಳು ವಿಶೇಷ ಆಸಕ್ತಿ ವಹಿಸಿ ಅಭಿವೃದ್ಧಿಗೆ ಸಹಕಾರ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಕಾಡಾ ಅಧ್ಯಕ್ಷ ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಹಾಗೂ ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರದ ನಿವೃತ್ತ ಜಂಟಿ ನಿರ್ದೇಶಕ ಕೆ.ಎ.ರಾಜೇಂದ್ರ ಪ್ರಸಾದ್, ವರ್ತಕರ ಸಂಘ ಅಧ್ಯಕ್ಷ ಎನ್.ಶಂಕರ್, ಗೌರವ ಕಾರ್ಯದರ್ಶಿ ಚಿದಾನಂದ ಗಣೇಶ್ ಅವರನ್ನು ಸನ್ಮಾನಿಸಲಾಯಿತು. ಸಂಘದ ನಿರ್ದೇಶಕರು, ಸದಸ್ಯರು ಉಪಸ್ಥಿತರಿದ್ದರು.



ಅವನತಿಯತ್ತ ಅಕ್ಷರ ದೇಗುಲಗಳು!

-ಮಿರ್ಲೆ ಚಂದ್ರಶೇಖರ,
ಲೇಖಕರು, ಮೊ: 9916129654

“ ನನ್ನ ಕಾಲದ ಶಾಲಾ ಕಟ್ಟಡಗಳು ಬದುಕಿನ ಅಂತ್ಯಕಾಲದಲ್ಲಿವೆ, ಇಂದೋ ನಾಳೆಯೋ ಬಿದ್ದುಹೋಗುವ ಸ್ಥಿತಿಯಲ್ಲಿವೆಯಾದರೂ ಪಾಠಗಳು ನಡೆಯುತ್ತಿರುವುದು ಇಲ್ಲಿಯೇ. ಕಿರಿಯ ಪ್ರಾಥಮಿಕ ಶಾಲೆ 1904ರ ಅವಧಿಯಲ್ಲಿ ಮತ್ತು ಹಿರಿಯ ಪ್ರಾಥಮಿಕ ಶಾಲೆಯು 1950ರಲ್ಲಿ ಕಟ್ಟಿರುವುದಾಗಿ ಕೇಳಿದ್ದೇನೆ. ಮನಸ್ಸು ತಡೆಯ ಲಾರದೆ ಕುತೂಹಲದಿಂದ ನಾನು ತಳದಲ್ಲಿ ಕುಳಿತು ಕನ್ನಡದ ಮೊದಲಕ್ಷರಗಳನ್ನು ಬಳಪದಲ್ಲಿ ತಿದ್ದಿ ಕಲಿತ ಕೊಠಡಿಯ ಬಾಗಿಲುಗಳು ಇಲ್ಲದ ಮುರಿದ ಕಿಟಕಿಗಳಿಂದ ಇಣುಕುತ್ತಿದ್ದಂತೆ ನೆನಪುಗಳು ಚುಚ್ಚಲು ಪ್ರಾರಂಭಿಸಿದವು, ಅನಾಥ ಮಕ್ಕಳಂತೆ ಪಾಲನೆ–ಪೋಷಣೆಗಳಿಲ್ಲದ ಕಟ್ಟಡಗಳನ್ನು ನೋಡು ನೋಡುತ್ತಿದ್ದಂತೆ ನನ್ನ ಜೀವ ದಸಕ್ ಎಂದಿತು.

ನನ್ನದೊಂದು ಚಾಳಿ ಇದೆ. ಅದು ಕೆಟ್ಟದೆನ್ನಿ ಇಲ್ಲವೇ ಕೆಲವರಿಗೆ ಒಳ್ಳೆಯದು ಎನಿಸಬಹುದು. ಅದು ವಿದ್ಯೆ ಕಲಿತ ಶಾಲೆ ಅಥವಾ ಕರ್ತವ್ಯ ನಿರ್ವಹಿಸುತ್ತಿದ್ದ ಸರ್ಕಾರಿ ಕಚೇರಿ ಇರಬಹುದು ಒಮ್ಮೆ ವರ್ಗಾವಣೆಯಾಗಿ ಅಲ್ಲಿಂದ ಹೊರಟರೆ ಮತ್ತೆ ಭೇಟಿ ಕೊಡುವುದೆಂದರೆ ನನಗೆ ಇಷ್ಟವಾಗದ ಕೆಲಸ. ವಿಶೇಷ ಸಂದರ್ಭಗಳಲ್ಲಿ ತೀರಾ ಅವಶ್ಯಕತೆ ಇದ್ದು ಹಳೆಯ ದಾಖಲೆಗಳನ್ನು ಪಡೆಯಲು ಹೋಗಲೇಬೇಕಿರುವಾಗ ಹೋಗಿದ್ದೇನೆ. ವಯೋನಿವೃತ್ತಿ ಆದ ನಂತರವಂತೂ ಕರ್ತವ್ಯ ನಿರ್ವಹಿಸಿದ ಕಚೇರಿಗಳಿಗೆ ಹೋಗೇ ಇಲ್ಲ, ಮುಂದೆ ಹೋಗುವುದೂ ಇಲ್ಲ. ಆದರೆ ಭವಿಷ್ಯದಲ್ಲಿ ನಡೆಯಬಹುದಾದ ಘಟನೆಗಳನ್ನು ಊಹಿಸಲಾಗದು, ಏನು ಬೇಕಾದರೂ ಆಗಬಹುದು.

ನನ್ನ ಪ್ರಾಥಮಿಕ ಶಾಲೆಯ ಓದು ನಡೆದದ್ದು ಊರಿನ ನಮ್ಮ ಮನೆಯ ಎದುರು ಇರುವ ಶಾಲೆಯಲ್ಲಿ. ಊರಿಗೆ ಆಗಾಗ್ಗೆ ಹೋಗುತ್ತಿರುತ್ತೇನೆ ಆದರೆ ಮನಸ್ಸಿನೊಳಗೆ ತುಡಿತವಿದ್ದರೂ ಒಮ್ಮೆಯೂ ಶಾಲಾ ಆವರಣಕ್ಕೆ ಹೋಗುವ ಮನಸ್ಸು ಮಾಡಿರಲಿಲ್ಲ, ಕಾಂಪೌಂಡ್ ಹೊರಗಿನ ದೃಶ್ಯವನ್ನು ಮಾತ್ರ ಜಗುಲಿಯ ಮೇಲೆ ಅಥವಾ ಶಾಲಾ ಕಾಂಪೌಂಡ್ ಮೇಲೆ ಕುಳಿತು ಬಾಲ್ಯದ ನೆನಪುಗಳನ್ನು ಮನಸ್ಸಿನ ಪರದೆಯಲ್ಲಿ ಕಟ್ಟಿಕೊಳ್ಳುತ್ತಾ ನೋಡುತ್ತಿದ್ದೆ. ವಿಶಾಲ ಆವರಣದ ಸುತ್ತಲೂ ಮರಗಳು ಬೆಳೆದು ನಿಂತಿರುವುದರಿಂದ ಒಳಗಿನ ಕಟ್ಟಡಗಳು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಒಮ್ಮೆ ಎಂದಿನಂತೆ ಊರಿಗೆ ಹೋಗಿದ್ದಾಗ ಸಂಜೆ ಸೂರ್ಯನ ಬೆಳಕನ್ನು ಕತ್ತಲೆಯು ನುಂಗುತ್ತಿದ್ದ ಸಮಯ, ನಾನು ಬಾಲ್ಯದಲ್ಲಿ ಆಟವಾಡುತ್ತಿದ್ದ ಶಾಲಾ ಮೈದಾನವನ್ನು ನೋಡಬೇಕೆನಿಸಿ ಒಳಹೊಕ್ಕಿದೆ, ಚಿಕ್ಕವನಿದ್ದಾಗ ದೊಡ್ಡದಾಗಿ ಕಾಣುತ್ತಿದ್ದ ಮೈದಾನ ನನಗೆ ಚಿಕ್ಕದಾಗಿ ಕಾಣತೊಡಗಿತು, ಖೋಖೋ, ಸೂರ್‌ಚೆಂಡು, ಜೂಟಾಟ ಹಾಗೂ ಡ್ರಿಲ್ ಮಾಡುತ್ತಿದ್ದ ಜಾಗವದು, ಸಂಜೆ ಆಯಿತೆಂದರೆ ದೊಡ್ಡವರು ವಾಲಿಬಾಲ್ ಆಟವನ್ನು ರಾಜ್ಯ ಮಟ್ಟಕ್ಕೆ ಸಮನಾಗಿ ಅದ್ಭುತವಾಗಿ ಆಡುತ್ತಿದ್ದರು, ನಾನು ಗೆಳೆಯರ ಜೊತೆ ತಪ್ಪದೆ ಅದನ್ನು ನೋಡುತ್ತಿದ್ದೆ.

ನನ್ನ ಕಾಲದ ಶಾಲಾ ಕಟ್ಟಡಗಳು ಬದುಕಿನ ಅಂತ್ಯಕಾಲದಲ್ಲಿವೆ, ಇಂದೋ ನಾಳೆಯೋ ಬಿದ್ದುಹೋಗುವ ಸ್ಥಿತಿಯಲ್ಲಿವೆಯಾದರೂ ಪಾಠಗಳು ನಡೆಯುತ್ತಿರುವುದು ಇಲ್ಲಿಯೇ. ಕಿರಿಯ ಪ್ರಾಥಮಿಕ ಶಾಲೆ 1904ರ ಅವಧಿಯಲ್ಲಿ ಮತ್ತು ಹಿರಿಯ ಪ್ರಾಥಮಿಕ ಶಾಲೆಯು 1950ರಲ್ಲಿ ಕಟ್ಟಿರುವುದಾಗಿ ಕೇಳಿದ್ದೇನೆ. ಮನಸ್ಸು ತಡೆಯಲಾರದೆ ಕುತೂಹಲದಿಂದ ನಾನು ತಳದಲ್ಲಿ ಕುಳಿತು ಕನ್ನಡದ ಮೊದಲಕ್ಷರಗಳನ್ನು ಬಳಪದಲ್ಲಿ ತಿದ್ದಿ ಕಲಿತ ಕೊಠಡಿಯ ಬಾಗಿಲುಗಳು ಇಲ್ಲದ ಮುರಿದ ಕಿಟಕಿಗಳಿಂದ ಇಣುಕುತ್ತಿದ್ದಂತೆ ನೆನಪುಗಳು ಚುಚ್ಚಲು ಪ್ರಾರಂಭಿಸಿದವು, ಅನಾಥ ಮಕ್ಕಳಂತೆ ಪಾಲನೆ–ಪೋಷಣೆಗಳಿಲ್ಲದ ಕಟ್ಟಡಗಳನ್ನು ನೋಡು ನೋಡುತ್ತಿದ್ದಂತೆ ನನ್ನ ಜೀವ ದಸಕ್ ಎಂದಿತು. ಕಿರಿಯ ಪ್ರಾಥಮಿಕ ಶಾಲೆ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ, ಕಿಟಕಿ–ಬಾಗಿಲುಗಳು ಮುರಿದು ಬಿದ್ದಿವೆ, ಬಾಗಿಲುಗಳಿದ್ದರೂ ಅವುಗಳು ಕರ್ತವ್ಯದಿಂದ ವಯೋನಿವೃತ್ತಿಗೊಂಡಿವೆ, ಮೇಲ್ಚಾವಣಿಯಲ್ಲಿ ಕೆಂಪನೆ ಚೆಂದವಾಗಿ ಕಾಣುತ್ತಿದ್ದ ಮಂಗಳೂರು ಹೆಂಚುಗಳು ಅಲ್ಲಲ್ಲಿ ಬಿದ್ದುಹೋಗಿವೆ, ಬಹುಶಃ ಮಳೆ ಬಂದರೆ ಮಕ್ಕಳು ಕೊಡೆ ಹಿಡಿದು ಕುಳಿತುಕೊಳ್ಳುತ್ತಿರಬಹುದು, ಕಟ್ಟಡವು ಸುಣ್ಣಬಣ್ಣ ಕಂಡು ಎಷ್ಟು ಕಾಲವಾಗಿದೆಯೋ, ಕಿರಿಯ ತಮ್ಮನದು ಈ ರೀತಿಯಾದರೆ ಇನ್ನು ಹಿರಿಯಣ್ಣನ ಸ್ಥಿತಿ ಇದಕ್ಕಿಂತ ಭಿನ್ನವೇನು ಇಲ್ಲ, ಹಿರಿಯ ಪ್ರಾಥಮಿಕ ಶಾಲೆಯು ಆರ್‌ಸಿಸಿ ಕಟ್ಟಡವಾದರೂ ವಾರ್ಷಿಕ ನಿರ್ವಹಣೆ ಇಲ್ಲದೆ ಸೊರಗಿದೆ, ಚರ್ಮ ಕಿತ್ತು ಕೆಂಪಗೆ ಕಾಣುವ ಮಾಂಸದ ದೇಹದಂತೆ ಗೋಡೆಯ ಕೆಮ್ಮಣ್ಣಿನ ಇಟ್ಟಿಗೆಗಳು ಕಾಣುತ್ತಿವೆ.

ಆ ನನ್ನ ಅಕ್ಷರದೇಗುಲದ ಆವರಣದ ಸುತ್ತಾ ನೋವಿನಿಂದ ಒಂದು ಸುತ್ತು ಪ್ರದಕ್ಷಿಣೆ ಹಾಕಿದೆ ಮೈ ಆಟೋಗ್ರಾಫ್ ಸಿನಿಮಾದ ನಾಯಕ ತನ್ನ ಬಾಲ್ಯ ಕಳೆದ ಸ್ಥಳಗಳಿಗೆ ಭೇಟಿ ನೀಡಿ ಅನುಭವಿಸಿದ ನೋವಿನ ಹಾಗೆ, ಅದು ಸಿನಿಮಾದಲ್ಲಿನ ಕಲ್ಪನಾ ಲೋಕ, ಆದರೆ ಇಲ್ಲಿ ವಾಸ್ತವವಾಗಿ ಹೃದಯ ಹಿಂಡಿದ ನೋವನ್ನು ಅನುಭವಿಸಿದೆ. 'ಸವಿ ಸವಿ ನೆನಪು ಸಾವಿರ ನೆನಪು ಸಾವಿರ ಕಾಲಕು ಸವೆಯದ ನೆನಪು, ಎದೆಯಾಳದಲಿ ಬಚ್ಚಿಕೊಂಡಿರುವ ಅಚ್ಚಳಿಯದ ನೂರೊಂದು ನೆನಪು'ಗಳು ಕಾಡಿ ನನ್ನ ಕಣ್ಣಲಿ ಕಣ್ಣೀರು ಸುರಿದಿದ್ದು ಸುಳ್ಳಲ್ಲ.

ಐದು ದಶಕಗಳ ಹಿಂದೆ ಕಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದಲ್ಲಿ ಅರ್ಧ ಎಕರೆಯಷ್ಟು ಜಾಗದಲ್ಲಿ ಸೊಪ್ಪು ತರಕಾರಿಗಳನ್ನು ಬೆಳೆಯಲಾಗುತ್ತಿತ್ತು, ನಮ್ಮಗಳಿಂದ ಗಿಡಗಳಿಗೆ ನೀರುಣಿಸುವುದರಿಂದ ಹಿಡಿದು ಎಲ್ಲಾ ಕೆಲಸಗಳನ್ನು ಟೀಚರ್‌ಗಳ ಮಾಡಿಸುತ್ತಿದ್ದರಲ್ಲದೆ ಸ್ವತಃ ಅವರೂ ಭಾಗಿಯಾಗುತ್ತಿದ್ದರು, ಹತ್ತಿರದ ಪಿಳಗಾಲುವೆ ಅಥವಾ ಶಾಲೆಯ ಆವರಣದಲ್ಲೇ ಇದ್ದ ತೆರೆದ ಬಾವಿಯಿಂದ ನೀರನ್ನು ಸೇದಿಸಿ ಗಿಡಗಳಿಗೆ ಹಾಕಿಸುತ್ತಿದ್ದರು. ಆ ಸಂಭ್ರಮವನ್ನು ಅನುಭವಿಸಿ ಕೈ ತೋಟದ ಸೊಬಗನ್ನು ನೋಡುವುದೇ ಆನಂದ, ಅಂದು ಅಂದಾಜು ಆರನೂರು ಮಕ್ಕಳವರೆಗೆ ಕಲಿಯುತ್ತಿದ್ದ ಕನ್ನಡ ಶಾಲೆಯಲ್ಲಿ ಈಗ ಒಂದರಿಂದ ಏಳನೇ ತರಗತಿಯವರೆಗೆ ಕೇವಲ ಅರವತ್ತು ಮಕ್ಕಳಿದ್ದಾರೆ ಎನ್ನುವುದನ್ನು ಕೇಳಿ ಆ ಕ್ಷಣಕ್ಕೆ ಬಹಳವೇ ಬೇಸರವಾಗಿ ಎದೆಗೆ ಗುಂಡು ಹೊಡೆದಂತಾಯಿತು, ಹತ್ತು ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹಾಗೂ ಕೆಲವೇ ಕಿಮೀ ದೂರದಲ್ಲಿ ಹಲವು ಹಳ್ಳಿಗಳನ್ನು ಸುತ್ತುವರಿದ ನನ್ನೂರು ಶಾಲೆ, ನಾ ಕಲಿತ ಶಾಲೆ ಕಳೆದುಹೋಗುವ ಸ್ಥಿತಿಯಲ್ಲಿ ಇರುವ ನೋವನ್ನು ಹೇಗೆ ಸಹಿಸುವುದು?, ಕನ್ನಡ ಶಾಲೆಗಳಿಗೆ ಯಾಕಿಂತಹ ದುಸ್ಥಿತಿ?.

ಹಳ್ಳಿಹಳ್ಳಿಗಳಲ್ಲಿ ಗಲ್ಲಿಗಲ್ಲಿಗಳಲ್ಲಿ ಖಾಸಗಿ ಇಂಗ್ಲೀಷ್ ಕಾನ್ವೆಂಟ್‌ಗಳು ತಲೆ ಎತ್ತಿರುವುದು ಹಾಗೂ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ಕಲಿತರಷ್ಟೇ ನಮ್ಮ ಮಕ್ಕಳು ವಿದ್ಯಾವಂತರು ಎನ್ನುವ ತೀರ್ಮಾನಕ್ಕೆ ಬಂದಿರುವ ಪೋಷಕರು ಸರ್ಕಾರಿ ಕನ್ನಡ ಶಾಲೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ. ಪೋಷಕರ ಜೊತೆಗೆ ಸರ್ಕಾರದ ಆಡಳಿತವು ಕೂಡ ಪರೋಕ್ಷವಾಗಿ ಖಾಸಗಿ ಶಾಲೆಗಳನ್ನು ಪೋಷಿಸುತ್ತಿರುವುದು ಸುಳ್ಳಲ್ಲ ಏಕೆಂದರೆ ಬಹುತೇಕ ಖಾಸಗಿ ಶಾಲೆಗಳು ರಾಜಕಾರಣಿಗಳ ಒಡೆತನದಲ್ಲಿವೆ. ಶಿಕ್ಷಣವು ಒಂದು ಲಾಭದಾಯಕ ಉದ್ಯಮವಾಗಿ ಬೆಳೆದಿರುವುದು ಬಹುದೊಡ್ಡ ದುರಂತ. ಭವಿಷ್ಯದಲ್ಲಿ ಉಳಿವಿಗಾಗಿ ದೊಡ್ಡ ಆಂದೋಲನವೇ ನಡೆಯಬೇಕಾಗುತ್ತದೆ, ಪುನಶ್ಚೇತನಗೊಳಿಸಲು ಆಗದಿದ್ದರೆ ಸರ್ಕಾರ ಶಿಕ್ಷಣ ಇಲಾಖೆಯನ್ನು ಸಂಪೂರ್ಣವಾಗಿ ಮುಚ್ಚಿ ಎಲ್ಲವನ್ನೂ ಖಾಸಗೀಕರಣಗೊಳಿಸಿ ಆ ಶಾಲೆಗಳಿಂದ ವಾರ್ಷಿಕ ತೆರಿಗೆ ಕಟ್ಟಿಸಿಕೊಂಡು ಸುಮ್ಮನಿರುವುದು ಲೇಸು.


ಇಂತಹ ಒಂದು ಸಂಕಷ್ಟಕಾಲದಲ್ಲಿ ನಮ್ಮೂರು–ನಮ್ಮ ಶಾಲೆಯನ್ನು ಉಳಿಸಬೇಕೆಂಬ ದಿಟ್ಟ ಮನಸ್ಸಿನಿಂದ ನಮ್ಮೂರ ಕನ್ನಡ ಶಾಲೆಯಲ್ಲಿ ನನ್ನ ಜೊತೆಜೊತೆಯಾಗಿ ಪ್ರಾಥಮಿಕ ಶಾಲೆಯಲ್ಲಿ ಓದಿದ ಉದ್ಯಮಿ ಎಂ.ಪಿ.ನಟರಾಜ್ ಮುಂದೆ ಬಂದಿರುವುದು ಶ್ಲಾಘನೀಯ, ಹಿಂದೆ ಇದೇ 'ಮೈಸೂರು ಮಿತ್ರ'ನಲ್ಲಿ 'ಸಾಮಾನ್ಯರಲ್ಲಿ ಅಸಾಮಾನ್ಯ' ಎಂಬ ಶೀರ್ಷಿಕೆಯಡಿ ಇವರ ಸಾಧನೆಯ ಕುರಿತು ಲೇಖನವೊಂದನ್ನು ನಾನೇ ಬರೆದಿದ್ದೆ. ಇವರು ಬೆಂಗಳೂರಲ್ಲಿ ನೆಲೆಸಿದ್ದರೂ ಬಹಳ ಆಸಕ್ತಿಯಿಂದ ಐವತ್ತು ವರ್ಷಗಳಿಗೂ ಹಿಂದೆ ಓದಿದ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ನಮ್ಮ ಸರ್ಕಾರಿ ಕನ್ನಡ ಶಾಲೆಯನ್ನು ಅಭಿವೃದ್ಧಿಗೊಳಿಸುವ ದಾರಿಯಲ್ಲಿ ಮೊದಲ ಹೆಜ್ಜೆಯನ್ನು ಇಟ್ಟಾಗಿದೆ. ಓದಿದವರಲ್ಲಿ ಅನೇಕರು ಉನ್ನತ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಅನ್ಯ ಊರುಗಳಲ್ಲಿ ನೆಲೆಸಿರುವ ಇವರೆಲ್ಲರನ್ನು ಕಲೆಹಾಕಿ ಮಕ್ಕಳ ಸಂಖ್ಯೆ ಕಡಿಮೆಯಾಗಿ ನಶಿಸಿಹೋಗುತ್ತಿರುವ ನಮ್ಮೂರ ಶಾಲೆಯನ್ನು ಉಳಿಸಲು ಟೊಂಕ ಕಟ್ಟಿಯಾಗಿದೆ. ಇದರಲ್ಲಿ ಯಶಸ್ಸು ಕೂಡ ಲಭಿಸುತ್ತದೆ ಎಂಬುದಕ್ಕೆ ಇವರ ಇಲ್ಲಿವರೆಗಿನ ಸಾಧನೆಗಳೇ ಸಾಕ್ಷಿ. ಒಟ್ಟಾರೆ ಅಳಿವಿನ ಅಂಚಿನಲ್ಲಿರುವ ನಮ್ಮ ಶಾಲೆಯನ್ನು ಉದ್ಧರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ. ಸಮಾಜಕ್ಕೆ ಏನಾದರೂ ಕೊಡಬೇಕೆಂಬ ತುಡಿತವನ್ನು ಎಲ್ಲರಲ್ಲೂ ಮೂಡಿಸಿರುವ ನಟರಾಜು ತಮ್ಮ ಹೆತ್ತವರ ಹೆಸರಿನಿಂದ ಕರೆಯುವ ಕೆ.ಲ.ಪುಟ್ಟಸ್ವಾಮಿಗೌಡ್ರು–ನಾಗಮ್ಮ ಚಾರಿಟಬಲ್ ಟ್ರಸ್ಟ್(ರಿ) ಅಡಿ, ಊರಿನಲ್ಲಿ ವಿವಿಧ ಸಾಮಾಜಿಕ ಸೇವೆ ಹಾಗೂ ವಿಶೇಷವಾಗಿ ಸರ್ಕಾರಿ ಕನ್ನಡ ಶಾಲೆಯ ಪ್ರತಿಭಾವಂತ ಮಕ್ಕಳನ್ನು ಪ್ರೋತ್ಸಾಹಿಸುತ್ತಾ ಬರುತ್ತಿದ್ದಾರೆ.

ನಟರಾಜು ಒಗ್ಗೂಡಿಸಿರುವ ಸಂಘಟನೆಯಲ್ಲಿ ವಿಶೇಷ ಸಾಧಕರು ಇರುವುದು ಮತ್ತೊಂದು ವಿಶೇಷ, 1956–57ರಲ್ಲಿ ಇದೇ ಕನ್ನಡ ಶಾಲೆಯಲ್ಲಿ ಓದಿ ಉನ್ನತ ಜ್ಞಾನ ಪಡೆದಿರುವ ಡಾ.ಎಂ.ಕೆ. ಸೂರಪ್ಪ, ಪಂಜಾಬಿನ ರೂಪಾರ್‌ನ ಐಐಟಿಯ ನಿವೃತ್ತ ನಿರ್ದೇಶಕರು ಹಾಗೂ ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಕಾರ್ಯನಿರ್ವಹಿಸಿ ಆಡಳಿತ ಅನುಭವ ಇರುವ ಕರ್ನಾಟಕದ ಹೆಮ್ಮೆಯ ಲೋಹ ವಿಜ್ಞಾನಿ ಗೌರವಾಧ್ಯಕ್ಷರಾಗಿದ್ದಾರೆ.

ಇಲ್ಲಿವರೆಗೆ ನಮ್ಮೂರಿನ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳ ಸಂಖ್ಯೆ ಅಂದಾಜು ಹತ್ತು ಸಾವಿರ ಗಡಿಯನ್ನು ದಾಟಿದೆ. ಅದರಲ್ಲಿ ಅಳಿದುಳಿದವರು ಹಾಗೂ ಯಶಸ್ವೀ ಬದುಕು ಕಂಡವರು ಐದನೂರು ಜನರಾದರೂ ಇಲ್ಲವೇ?, ಅವರೆಲ್ಲ ಕೈಜೋಡಿಸಿದರೆ 'ಹನಿ ಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ಬಳ್ಳ'ವಾಗಿ ನನ್ನೂರು ಶಾಲೆ ಹಿಂದಿನಂತೆ ಮಕ್ಕಳು ತುಂಬಿತುಳುಕುವಂತೆ ಮಾಡುವುದು ಕಷ್ಟವೇನಲ್ಲ. ಸರ್ಕಾರಿ ಕನ್ನಡ ಶಾಲೆಗಳನ್ನು ಉಳಿಸುವುದು ನನ್ನೂರಿನ ಸಮಸ್ಯೆ ಮಾತ್ರವಲ್ಲ ಎಲ್ಲಾ ಊರುಗಳ ಸಮಸ್ಯೆಯೂ ಆಗಿದೆ. ಸರ್ಕಾರ ಆಯವ್ಯಯದಲ್ಲಿ ಪ್ರತೀ ವರ್ಷ ಶಿಕ್ಷಣ ಕ್ಷೇತ್ರಕ್ಕೆ ಭಾರೀ ಮೊತ್ತವನ್ನೇ ಮೀಸಲಿಡುತ್ತಾ ಬಂದಿದೆ, ಪ್ರಸಕ್ತ ಸಾಲಿನಲ್ಲಿ ರೂ. 44,422 ಕೋಟಿಯನ್ನು ತೆಗೆದಿಟ್ಟಿದೆ, ಹಣವೇನೋ ದಂಡಿಯಾಗಿದೆ. ಆದರೆ ಇಚ್ಛಾಶಕ್ತಿಯ ಕೊರತೆಯಿಂದಾಗಿ ಸರ್ಕಾರಿ ಶಾಲೆಗಳು ಮಕ್ಕಳ ಕೊರತೆಯಿಂದಾಗಿ ಬಿಕೋ ಎನ್ನುತ್ತಿವೆ.



ವಾರಭವಿಷ್ಯ



4.8.2024 ರಿಂದ 10.8.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕಟಕ, ಚಂದ್ರ–ಕಟಕ, ಸಿಂಹ, ಕನ್ಯಾ, ಕುಜ–ವೃಷಭ, ಬುಧ–ಸಿಂಹ, ಗುರು–ವೃಷಭ, ಶುಕ್ರ–ಸಿಂಹ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ವಿತ್ತ ಲಾಭ. ಸುಖ, ಸಂತೋಷಗಳು, ಸಾಮಾಜಿಕ ಉತ್ಕರ್ಷಗಳು. ಹಿಡಿದ ಕೆಲಸ ಸಾಧಿಸಲು ಪ್ರಭಾವಿಗಳ ಒತ್ತಾಸೆ. ಸಹೋದರರು ಅಸಹಕಾರ ತೋರುವರು. ಗುರು–ಹಿರಿಯರ ಬುದ್ಧಿ ಮಾತ ಆಲಿಸುವುದರಿಂದ ಒಳಿತಾಗುವುದು. ವಿದ್ಯಾರ್ಥಿಗಳ ಪ್ರೊಜೆಕ್ಟ್ ಕೆಲಸ ಯಶಸ್ವಿಯಾಗಿ ನೆರವೇರುವುದು. ಸ್ನಾಯು ಸೆಳೆತ ಕಾಡಬಹುದು.
ಶ್ರೀ ಸುಬ್ರಮಣ್ಯ ದರ್ಶನ. ಶುಭ ಸಂಖ್ಯೆ–1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಎಲ್ಲರೊಂದಿಗೆ ಸೌಹಾರ್ದದಿಂದ ಇರಬೇಕಾದ ಸಮಯವಿದು. ಅನ್ಯಥಾ ಅನವಶ್ಯಕ ಕಲಹ, ಮಾನಸಿಕ ಕಿರಿಕಿರಿ ಉಂಟಾಗುವುದು. ಶುಭ ಚಂದ್ರನಿಂದ ಧನಲಾಭ, ಸ್ಥಾನ ಲಾಭವನ್ನು ಹೊಂದುವಿರಿ. ತಾಮ್ರಯುಕ್ತ ವಸ್ತುಗಳ ಮಾರಾಟಗಾರರಿಗೆ ಅಧಿಕ ಲಾಭವಾಗುವುದು. ಸರ್ಕಾರಿ ನೌಕರರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ದೊರೆಯುವ ಸಂಭವ. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ. ಅನ್ಯಥಾ ತೊಂದರೆಗೆ ಗುರಿಯಾಗುವಿರಿ.
ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ–6

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
ವಾರದಾರಂಭಕ್ಕೆ ನಿಮ್ಮ ಮನೋಧೈರ್ಯದಿಂದ ಕ್ಲಿಷ್ಟ ಕಾರ್ಯವೊಂದನ್ನು ಸಾಧಿಸಿಕೊಳ್ಳುವಿರಿ. ಮನೆಗೆ ನೆಂಟರಿಷ್ಟರ ಆಗಮನ ಹಾಗೂ ಅವರ ಸತ್ಕಾರಕ್ಕೆ ಹಣ ವ್ಯಯವಾಗುವುದು. ಸರ್ಕಾರಿ ಕಚೇರಿ ಕೆಲಸಗಳು ಕುಂಟುತ್ತಾ ಸಾಗುತ್ತವೆ. ಮನೆ ಮಂದಿಯೇ ಅಪನಂಬಿಕೆಯಿಂದ ನೋಡುವರು. ಟೂರ್ ಪ್ರೋಗ್ರಾಂಗಳನ್ನು ಮುಂದೂಡಿ. ಅನ್ಯಥಾ ಪರಸ್ಥಳಕ್ಕೆ ಹೋಗಿ ಪರದಾಡುವಿರಿ. ಸಣ್ಣಪುಟ್ಟ ಅನಾರೋಗ್ಯ ಕಾಡಿಸುತ್ತೆ.
ಶ್ರೀ ಹರಿನಾಮ ಸ್ತುತಿ, ಶುಭ ಸಂಖ್ಯೆ –8

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ನಿರೀಕ್ಷಿತ ಧನ ಕೈ ಸೇರುವುದು. ಹಳೆಯ ಕಾಯಿಲೆಗಳಿಂದ ಬಿಡುಗಡೆ, ನಿವೇಶನ, ಗೃಹ ಖರೀದಿಗೆ ಗುರುಬಲವಿದೆ. ಪ್ರಯತ್ನಿಸಿ ಸಫಲರಾಗಿ. ನೂತನ ವಸ್ತ್ರ ಭೂಷಣ ಪ್ರಾಪ್ತಿ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವಧು–ವರ ದೊರೆಯುವ ಸಂಭವವಿದೆ. ಶ್ರೀ ಗುರುವಿನ ದಯೆಯಿಂದ ನಿಮ್ಮ ಪೂರ್ವ ವೈಭವ ಮರುಕಳಿಸುವುದು. ದಾನ–ಧರ್ಮ ಬುದ್ಧಿಯಿಂದ ಪ್ರಸಿದ್ಧಿಗೆ ಬರುವಿರಿ. ಮನೆಯಲ್ಲಿ ಹಿರಿಯರ ಆರೋಗ್ಯದ ಕಡೆ ಗಮನ ನೀಡಿ.
ಶ್ರೀ ದೇವಿ ಸ್ತುತಿ. ಶುಭ ಸಂಖ್ಯೆ–6

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದ ಮೊದಲ ಭಾಗದಲ್ಲಿ ಸಂತೋಷ, ಉತ್ಸಾಹಗಳು ನಿಮ್ಮನ್ನು ಅರಸಿ ಬರುವುದು. ನಿಮ್ಮ ಸ್ವಂತ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಳ್ಳುವಿರಿ. ಸಾಮಾಜಿಕ ವಲಯದಲ್ಲಿ ಸರ್ವರ ಗೌರವಾದರಗಳಿಗೆ ಭಾಜನರಾಗುವಿರಿ. ಚಂದ್ರಗ್ರಹದ ದಯೆಯಿಂದ, ರಜತ, ರೇಷ್ಮೆ ವ್ಯಾಪಾರಗಳಲ್ಲಿ ಹೆಚ್ಚಿನ ವರಮಾನವಾಗುವುದು. ಸಪ್ತಮ ಶನಿಯಿಂದ ಶ್ರೀಮತಿಯಲ್ಲಿ ವಿರಸ, ಆರೋಗ್ಯದಲ್ಲೂ ಏರುಪೇರು ಉಂಟಾಗುವುದು.
ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ–5

ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)
ಸಪ್ತಾಹದ ಪೂರ್ವಾರ್ಧದಲ್ಲಿ ದೇಹ ಸೌಖ್ಯ, ಸುಭೋಜನ, ಸಜ್ಜನರ ಭೇಟಿ ಉಂಟಾಗುವುದು. ಅಧಿಕಾರಿ ವರ್ಗದವರ ಸಹಾಯ ದೊರಕುವುದು. ಕಾರ್ಯನಿಮಿತ್ತ ದೂರ ಪ್ರಯಾಣಗಳು ಸಂಭವ. ಪೂಜಾ ಸಾಮಗ್ರಿ ಹಾಗೂ ಪುಷ್ಪ ವ್ಯಾಪಾರಿಗಳಿಗೆ ಉತ್ತಮ ಧನಲಾಭವಾಗಲಿದೆ. ವಾರದ ಉತ್ತರಾರ್ಧಕ್ಕೆ ಕೆಲಸ ಕಾರ್ಯಗಳ ಒತ್ತಡದಿಂದ ಮಾನಸಿಕ ದುಗುಡತೆ ಉಂಟಾಗುವುದು. ಆಪ್ತರು ತಪ್ಪು ತಿಳಿಯುವರು.
ಶ್ರೀ ವಿಷ್ಣು ಪೂಜೆ. ಶುಭ ಸಂಖ್ಯೆ–9

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಅಂದುಕೊಂಡಿದ್ದೆಲ್ಲಾ ಆಗುವುದಿಲ್ಲ. ಆಗಿದ್ದನ್ನು ಒಪ್ಪಿಕೊಳ್ಳಲೇಬೇಕು. ಹೊಸ ಬಂಡವಾಳ ಹೂಡಿಕೆಗಳು ಸದ್ಯಕ್ಕೆ ಮುಂದೂಡಿ. ದುಡುಕು ಮಾತಿನಿಂದ ಮಕ್ಕಳ ವಿರೋಧವನ್ನು ಎದುರಿಸಬೇಕಾದೀತು. ವಾರ ಮಧ್ಯೆ ಚಂದ್ರಗ್ರಹ ಕೃಪೆಯಿಂದ ಕೊಂಚ ಹರುಷದ ತಂಗಾಳಿ ಬೀಸಲಿದೆ. ಅಪರಿಚಿತ ಸ್ತ್ರೀಯರೊಬ್ಬರ ಸಹಾಯದಿಂದ ಸಂಕಷ್ಟದಿಂದ ಪಾರಾಗುವಿರಿ. ನದಿ, ಜಲಪಾತಗಳ ಹತ್ತಿರ ಹುಡುಗಾಟ ಸಲ್ಲದು.
ಶ್ರೀ ಶ್ರೀನಿವಾಸ ಉಪಾಸನೆ. ಶುಭ ಸಂಖ್ಯೆ–3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)
ವಾರದ ಪ್ರಾರಂಭಕ್ಕೆ ನೂತನ ವ್ಯವಹಾರಗಳಲ್ಲಿ ಜಯವಾಗುವುದು. ಗೌರವ ಅಧಿಕಾರಗಳಿಗೆ ಭಾಜನರಾಗುವಿರಿ. ಗುರು ಕೃಪೆಯಿಂದ ನಿಂತು ಹೋಗಿದ್ದ ಕೆಲಸಗಳನ್ನು ಪೂರ್ಣಗೊಳಿಸಿಕೊಳ್ಳಿ. ವಿವಾಹಾರ್ಥಿಗಳಿಗೆ ಮನ ಮೆಚ್ಚಿನ ಸಂಗಾತಿ ದೊರೆಯುವ ಸಂಭವವಿದೆ. ನಿಮ್ಮ ರಾಶ್ಯಾಧಿಪತಿ ಕುಜ ನಿಮಗೆ ದುಡುಕು ಬುದ್ಧಿಗೆ ಪ್ರೇರೇಪಿಸುವನು. ಉಷ್ಣ ಸಂಬಂಧಿ ಕಾಯಿಲೆ ಕಾರಣ ವೈದ್ಯರ ದರ್ಶನ.
ಶ್ರೀ ಗಣೇಶ ಅರ್ಚನೆ. ಶುಭ ಸಂಖ್ಯೆ–7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಸುಖದಿಂದ ಇರುವವರು ಅದನ್ನು ಕಷ್ಟಪಟ್ಟೇ ಸಂಪಾದಿಸಿರುತ್ತಾರೆ. ಕೈ ಕೆಸರಾದರೆ ಬಾಯಿ ಮೊಸರು ಎಂಬಂತೆ ವಾರದ ಆದಿಗೆ ಧನ–ಧಾನ್ಯ ಲಾಭ, ಕೃಷಿ ಹಾಗೂ ಹೈನುಗಾರಿಕೆಯಿಂದ ಹೆಚ್ಚಿನ ಆದಾಯವಾಗುವುದು. ಮಿತ್ರರ ಮಿಲನದಿಂದ ಮನಸ್ಸಿಗೆ ಹರುಷ. ಆದರೆ ನಿಮ್ಮದಲ್ಲದ ತಪ್ಪಿಗೆ ನಿಂದನೆಗೆ ಒಳಗಾಗುವಿರಿ. ರಾಜಕಾರಣಿಗಳಿಗೆ ಅಪವಾದಗಳಿಂದ ಕಾನೂನು ತೊಡಕುಗಳು ಉಂಟಾಗುವುದು.
ಶ್ರೀ ಗುರುಮಂತ್ರ ಜಪಿಸಿ. ಶುಭ ಸಂಖ್ಯೆ–2

ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)
ಸಪ್ತಾಹದ ಆದಿಗೆ ಇಷ್ಟ ಕಾರ್ಯ ಸಿದ್ಧಿಯಾಗಿ ಮನಸ್ಸಂತೋಷ. ನಿರೀಕ್ಷಿತ ಧನ ಕೈ ಸೇರುವುದು. ಬ್ಯಾಂಕ್ ಸಾಲದ ಪ್ರಯತ್ನ ಸಫಲವಾಗುವುದು. ಪ್ರತಿಭಾವಂತ ಕಲಾವಿದರು, ವಿದ್ವಜ್ಜನರಿಗೆ ಸಾಮಾಜಿಕ ಗೌರವ, ಸನ್ಮಾನಗಳು ದೊರೆಯುವುದು. ಕಾರ್ಮಿಕ ವರ್ಗದವರಿಗೆ ಸರ್ಕಾರದ ಸವಲತ್ತುಗಳು ಲಭ್ಯವಾಗುವುದು. ದ್ವಿದಳ ಧಾನ್ಯ ಬೆಳೆ ಹಾಗೂ ವ್ಯಾಪಾರದಿಂದ ಹೆಚ್ಚಿನ ಲಾಭ ಗಳಿಕೆ ಆಗುವುದು. ವಾಯು ಸಂಬಂಧಿ ಕಾಯಿಲೆ ಕಾಡಿಸುತ್ತದೆ.
ಶ್ರೀ ಶನಿಮಂತ್ರ ಜಪಿಸಿ. ಶುಭ ಸಂಖ್ಯೆ–4


ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಪ್ರತಿಫಲ ಬೇಕೆಂದರೆ ಪ್ರಯತ್ನಶೀಲರಾಗಿ. ಸರ್ಕಾರಿ ನೌಕರರಿಗೆ ಮುಂಬಡ್ತಿಯ ಯೋಗವಿದೆ. ನಾವು ಸರಿಯಿದ್ದರೆ ಅನ್ಯರಿಂದ ನಮಗೆ ತೊಂದರೆ ಇಲ್ಲ ಎಂಬ ತತ್ವವನ್ನು ಅನುಸರಿಸಿದರೆ ಒಳ್ಳೆಯದಾಗುತ್ತದೆ. ಸಹಧರ್ಮಿಣಿಯ ಸಲಹೆಯಿಂದ ಮಹತ್ತರ ಸಮಸ್ಯೆಗೆ ಪರಿಹಾರ ಒದಗುವುದು. ವಾರಾಂತ್ಯಕ್ಕೆ ಚಂದ್ರಗ್ರಹದ ಆಸರೆಯಿಂದ ಧನ–ಧಾನ್ಯ ಲಾಭ, ಸ್ತ್ರೀ ಸಂಗ, ಸಹವಾಸಗಳು ದೊರೆಯಲಿದೆ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–7

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಕೈಗೊಂಡ ಕೆಲಸ ಕಾರ್ಯಗಳು ಮುನ್ನಡೆದರೂ ಬಂಧುಜನರಲ್ಲಿ ಕಲಹ, ಅಸಮಾಧಾನಗಳಿಂದ ಮನಃಶಾಂತಿಗೆ ಭಂಗ. ಸಜ್ಜನರ ಆಗ್ರಹಕ್ಕೆ ಗುರಿಯಾಗುವಂತಹ ಕೆಲಸಗಳು ನಡೆದು ಹೋಗುವುದು. ಸ್ವಧರ್ಮಾಚರಣೆಯಿಂದ ನಿಮ್ಮ ರಾಶ್ಯಾಧಿಪತಿಯಲ್ಲಿ ಭಕ್ತಿ ಉಂಟಾಗುವುದು. ವಾರಾಂತ್ಯಕ್ಕೆ ಮಿತ್ರ ಸಮಾಗಮದಿಂದ ಹರ್ಷಚಿತ್ತರಾಗಿರುತ್ತೀರಿ. ಪಿಕ್‌ನಿಕ್ ಪ್ರವಾಸ ಸಮಯದಲ್ಲಿ ಜಲಾಶಯ, ಜಲಪಾತಗಳ ಹತ್ತಿರ ಸೆಲ್ಫಿ ಮುಳ್ಳಾಗುವುದು.
ಶ್ರೀ ರಾಘವೇಂದ್ರಸ್ವಾಮಿ ವಂದನೆ. ಶುಭ ಸಂಖ್ಯೆ–6


ಮಕ್ಕಳ ಚಿತ್ರಕಥೆ

‘ಇನ್ಮುಂದೆ ನಾನು ಹೇಗೆ ಬದುಕಬೇಕು...?’

■ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಕೆಲ ಗೊಲ್ಲ ಹುಡುಗರು ಒಂದು ಹುಲ್ಲುಗಾವಲಿನಲ್ಲಿ ದನ ಕಾಯುತ್ತಿದ್ದರು. ಅಲ್ಲಿ ಒಂದು ಭಯಂಕರ ವಿಷ ಸರ್ಪವಿತ್ತು. ಎಲ್ಲರೂ ಇದಕ್ಕೆ ಹೆದರಿ ಬಹಳ ಎಚ್ಚರಿಕೆಯಿಂದ ಸಂಚರಿಸುತ್ತಿದ್ದರು. ಒಂದು ದಿನ ಒಬ್ಬ ಸನ್ಯಾಸಿಯು ಅದೇ ದಾರಿಯಲ್ಲಿ ನಡೆದುಹೋಗುತ್ತಿದ್ದಾಗ ಅಲ್ಲಿದ್ದ ಹುಡುಗರು ವಿಷ ಸರ್ಪ ಇರುವ ಬಗ್ಗೆ ಎಚ್ಚರಿಸಿದರೂ ನಿರ್ಲಕ್ಷಿಸಿ ಮುನ್ನಡೆದ.




ಸನ್ಯಾಸಿಯು ಸ್ವಲ್ಪ ದೂರ ಹೋಗುವುದರೊಳಗೆ ವಿಷ ಸರ್ಪವು ರೋಷದಿಂದ ಹೆಡೆಯೆತ್ತಿಕೊಂಡು ಅಟ್ಟಿಸಿಕೊಂಡು ಬಂತು. ತಕ್ಷಣ ಸನ್ಯಾಸಿಯು ತನ್ನಲ್ಲಿದ್ದ ಮಂತ್ರದ ನೀರನ್ನು ಹಾವಿನ ಮೇಲೆ ಚಿಮುಕಿಸಿದ. ಸರ್ಪವು ಶಾಂತವಾಯಿತು. ಸನ್ಯಾಸಿಯು ಹಾವಿಗೆ ಬುದ್ಧಿ ಹೇಳಿ "ಇನ್ನು ಮುಂದೆ ಹಿಂಸಾ ಪ್ರವೃತ್ತಿಯನ್ನು ಬಿಟ್ಟು ಬದುಕು..!" ಎಂದು ಉಪದೇಶಿಸಿದ.



ಅದಕ್ಕೆ ವಿಷ ಸರ್ಪವು ಇನ್ಮುಂದೆ ನಾನು ಹೇಗೆ ಬದುಕಬೇಕು..?" ಎಂದು ಕೇಳಿತು.. ಅದಕ್ಕೆ ಸನ್ಯಾಸಿಯು "ಯಾರಿಗೂ ಕಚ್ಚಬೇಡ...ನಾನು ಕೆಲವು ದಿನಗಳು ಬಿಟ್ಟು ಬಂದು ನಿನ್ನನ್ನು ನೋಡುತ್ತೇನೆ...!" ಎಂದು ಹೇಳಿ ಹೊರಟ.



ಹೀಗೆಯೇ ಕೆಲವು ದಿನಗಳು ಕಳೆದವು. ಹತ್ತಿರವಿದ್ದ ಗೊಲ್ಲರ ಹುಡುಗರಿಗೆ ಹಾವು ಕಡಿಯುವುದಿಲ್ಲ ಎಂದು ಅರಿವಾಯಿತು. ಹುಡುಗರು ಬಂದು ಅದಕ್ಕೆ ಕಲ್ಲು ಹೊಡೆದರು. ಬಾಲ ಹಿಡಿದೆತ್ತಿ ತಿರುಗಿಸಿ ನೆಲಕ್ಕೆ ಅಪ್ಪಳಿಸಿದರೂ ಕೂಡ ನೋವನ್ನು ಸಹಿಸಿಕೊಂಡು ಶಾಂತವಾಗಿತ್ತು.



ಸ್ವಲ್ಪ ದಿನಗಳ ಬಳಿಕ ಸನ್ಯಾಸಿಯು ಮತ್ತದೇ ಮಾರ್ಗವಾಗಿ ಬಂದು ವಿಷ ಸರ್ಪದ ಶೋಚನೀಯ ಪರಿಸ್ಥಿತಿ ಕಂಡು ಮರುಗಿ "ನಿನ್ನ ಮೇಲೆ ಇಷ್ಟೊಂದು ಗಾಯಗಳು ಹೇಗಾದವು..? ಬಹಳ ಸೊರಗಿದಂತೆ ಕಾಣುತ್ತಿದ್ದೀಯಲ್ಲಾ...!" ಎಂದು ಕೇಳಿದ.



ಅದಕ್ಕೆ ಸರ್ಪವು "ಆ ದನ ಕಾಯುವ ಹುಡುಗರಿಗೆ ನಾನು ಕಚ್ಚುವುದಿಲ್ಲ ಎಂದು ಗೊತ್ತಾಗಿ ಪ್ರತಿದಿನವೂ ನನ್ನನ್ನು ಒಂದಿಲ್ಲೊಂದು ರೀತಿ ಹಿಂಸಿಸುತ್ತಿದ್ದಾರೆ...!" ಎಂದಿತು. ಆ ಸನ್ಯಾಸಿಯು "ಎಂತಹ ತಿಳಗೇಡಿ ನೀನು..?...ನಿನ್ನ ಆತ್ಮರಕ್ಷಣೆ ಮಾಡಿಕೊಳ್ಳಬೇಕಾಗಿತ್ತು.....ನಿನಗೆ ಕಚ್ಚ ಬೇಡ ಎಂದು ಹೇಳಿದ್ದೆ ಹೌದು...ಆದರೆ ಬುಸುಗುಟ್ಟಿ ಅವರನ್ನೆಲ್ಲಾ ಓಡಿಸಬೇಡಾ ಎಂದು ಹೇಳಿದ್ದೆನೇ...? ದುಷ್ಟರನ್ನು ಕಂಡರೆ ಬುಸುಗುಟ್ಟಬೇಕು ಆದರೆ ಯಾವ ಅಪಾಯವನ್ನೂ ಮಾಡಬಾರದು...!" ಎಂದು ಹೇಳಿದ.

ಮೈಸೂರು ಮಿತ್ರ

ಪ್ರವಾಹದಿಂದ ಮನೆ ಸಂಪೂರ್ಣ ಹಾನಿಗೊಳಗಾಗಿದ್ದರೆ

ರಾಜೀವ್ ಗಾಂಧಿ ವಸತಿ ನಿಗಮದಿಂದ 1.20 ಲಕ್ಷ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ತಿ.ನರಸೀಪುರ, ಆ.4– ಪ್ರವಾಹದಿಂದ ಮನೆ ಸಂಪೂರ್ಣ ಹಾನಿಗೊಳಗಾಗಿದ್ದರೆ ರಾಜೀವ್ ಗಾಂಧಿ ವಸತಿ ನಿಗಮದಿಂದ 1.20 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಟ್ಟಣದ ಹಳೇ ತಿರುಮಕೂಡಲು ಹಾಗೂ ತಾಲೂಕಿನ ಮಾಲಂಗಿ ಗ್ರಾಮಕ್ಕೆ ಭಾನುವಾರ ಸಂಜೆ ಎಂಎಲ್‌ಸಿ ಡಾ.ಯತೀಂದ್ರ ಹಾಗೂ ಜಿಲ್ಲಾಡಳಿತದೊಂದಿಗೆ ಭೇಟಿ ನೀಡಿ ನೆರೆಯಿಂದ ಹಾನಿಗೊಳಗಾದ ಪ್ರದೇಶಗಳನ್ನು ಪರಿಶೀಲಿಸಿ ಮಾತನಾಡಿದ ಅವರು, ಪ್ರವಾಹದಿಂದ ಜಿಲ್ಲೆಯಲ್ಲಿ 600ಕ್ಕೂ ಹೆಚ್ಚು ಜನರು ತೊಂದರೆ ಸಿಲುಕಿದ್ದು, ಕಾಳಜಿ ಕೇಂದ್ರಗಳನ್ನು ತೆರೆದು ಮೂಲ ಸೌಕರ್ಯ ಕಲ್ಪಿಸಲಾಗಿದೆ. 254ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದ್ದು, ತಾತ್ಕಾಲಿಕ ದುರಸ್ತಿಗೆ 6,500 ರೂ. ಪರಿಹಾರ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಕಬಿನಿ ಮತ್ತು ಕೆಆರ್‌ಎಸ್ ಜಲಾಶಯಗಳಿಗೆ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದಿದ್ದರಿಂದ ಕಾವೇರಿ, ಕಪಿಲಾ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಿದ್ದರಿಂದ ನಂಜನಗೂಡು, ವರುಣ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳ ನದಿ ತೀರದ ಪ್ರದೇಶಗಳಲ್ಲಿ ರೈತರ ಬೆಳೆ ಹಾಗೂ ಮನೆ ಹಾನಿ ಉಂಟಾಗಿದೆ. ಜಿಲ್ಲಾಡಳಿತ ಮುನ್ನೆಚ್ಚರಿಕೆ ಕೈಗೊಂಡಿದ್ದರಿಂದ ಕಡಿಮೆ ಹಾನಿಯಾಗಿದೆ. ಎನ್‌ಡಿಆರ್‌ಎಫ್ ನಿಯಮಾವಳಿ ಪ್ರಕಾರ ಹಾನಿ ಆಗಿರುವ ಮನೆ ಹಾಗೂ ಬೆಳೆ ಹಾನಿ ಕುರಿತು ಅಧಿಕಾರಿಗಳಿಂದ ವರದಿ ಪಡೆದು ಪರಿಹಾರ ನೀಡಲಾಗುವುದು ಎಂದರು.

ತಾಲೂಕಿನ ಮಾಲಂಗಿ ಗ್ರಾಮದಲ್ಲಿ ಪ್ರವಾಹದಿಂದ ನದಿ ತೀರದ 27 ಮನೆಗಳಿಗೆ ನೀರು ನುಗ್ಗುತ್ತಿರುವುದರಿಂದ ಸರ್ವೆ ನಂ.77 ಮತ್ತು 78 ರಲ್ಲಿ ಕಾಯ್ದಿರಿಸಿರುವ 9.20 ಎಕರೆ ಜಮೀನಿನಲ್ಲಿ ನೆರೆ ಸಂತ್ರಸ್ತರಿಗೆ ಪರ್ಯಾಯ ನಿವೇಶನ ನೀಡುವಂತೆ ಸ್ಥಳದಲ್ಲಿದ್ದ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು. ನಂತರ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ತೆರೆದಿರುವ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ ಸಂತ್ರಸ್ತರ ಯೋಗಕ್ಷೇಮ ವಿಚಾರಿಸಿದರು.

ಶಾಲೆ ಪಕ್ಕದ ಅಂಗನವಾಡಿ ಕೇಂದ್ರದಲ್ಲಿ ಸಂತ್ರಸ್ತರಿಗೆ ವೈದ್ಯಕೀಯ ನೆರವು ನೀಡಲಾಗುತ್ತಿದ್ದನ್ನು ಪರಿಶೀಲಿಸಿ ಸಂತ್ರಸ್ತರಿಗೆ ಅಗತ್ಯ ನೆರವು ಒದಗಿಸುವಂತೆ ಅಧಿಕಾರಿಗಳಿಗೆ ಸಚಿವರು ತಾಕೀತು ಮಾಡಿದರು.

ಎಂಎಲ್‌ಸಿ ಡಾ.ಯತೀಂದ್ರ ಸಚಿವರಿಗೆ ಸಾಥ್ ನೀಡಿದರು. ಈ ವೇಳೆ ಡಿಸಿ ಜಿ.ಲಕ್ಷ್ಮಿಕಾಂತರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ಎನ್.ವಿಷ್ಣುವರ್ಧನ್, ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ನಟರಾಜು, ಎಸಿ ರಕ್ಷಿತ್, ತಹಸೀಲ್ದಾರ್ ಸುರೇಶ್ ಆಚಾರ್, ಇಓ ಕೃಷ್ಣ, ಇನ್ಸ್‌ಪೆಕ್ಟರ್ ಧನಂಜಯ್ಯ, ಮನೋಜ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಡಿ.ಬಸವರಾಜು, ಮುದ್ದೇಗೌಡ, ಪುರಸಭೆ ಸದಸ್ಯ ತುಂಬಲ ಪ್ರಕಾಶ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ, ದಸಂಸ ಸಂಚಾಲಕ ಆಲಗೂಡು ಶಿವಕುಮಾರ್, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಮಾಲಂಗಿ ಜೆ.ಶಿವಸ್ವಾಮಿ, ಎಂ.ಕೆ.ಗಣೇಶ್ ಮೂರ್ತಿ, ತಾಪಂ ಮಾಜಿ ಸದಸ್ಯರಾದ ಕುಕ್ಕೂರು ಗಣೇಶ, ರಾಮಲಿಂಗಯ್ಯ, ಡಿಕೆಶಿ ಅಭಿಮಾನಿ ಬಳಗದ ಅಧ್ಯಕ್ಷ ಚೇತನ್, ಕಸಬಾ ಪಿಎಸಿಸಿಎಸ್ ನಿರ್ದೇಶಕ ಫಣೀಶ್ ಕುಮಾರ್, ಗ್ರಾಪಂ ಸದಸ್ಯ ಮಾದೇಶ್ ಹಾಗೂ ಅಧಿಕಾರಿಗಳು ಹಾಜರಿದ್ದರು.


ಹಳೇ ತಿರುಮಕೂಡಲು, ಮಾಲಂಗಿ ಗ್ರಾಮದಲ್ಲಿ ಪ್ರವಾಹ ಪೀಡಿತ ಪ್ರದೇಶಗಳನ್ನು ಸಚಿವ ಮಹದೇವಪ್ಪ ಪರಿಶೀಲಿಸಿದರು.

> ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯನವರ ಯಾವುದೇ ಪಾತ್ರವಿಲ್ಲ. 5 ವರ್ಷಗಳ ಅವಧಿಯನ್ನು ಅವರೇ ಪೂರೈಸಲಿದ್ದಾರೆ. ವರುಣಕ್ಕೆ ಸೇರುವ ತಿ.ನರಸೀಪುರ ಸಿಎಂ ಕ್ಷೇತ್ರವಾದ್ದರಿಂದ ಸಿದ್ದರಾಮಯ್ಯ ಅವರು ದಿನಾಂಕ ನೀಡಿದ ಬಳಿಕ ಉದ್ಘಾಟನೆಗೊಳ್ಳಬೇಕಿರುವ ಅಭಿವೃದ್ಧಿ ಕಾರ್ಯಕ್ರಮಗಳ ಸಮಾರಂಭ ಆಯೋಜಿಸಲಾಗುವುದು.
>
> - ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ.

ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ ನೀಡುತ್ತಿಲ್ಲ



ಸುದ್ದಿಗೋಷ್ಠಿಯಲ್ಲಿ ಪುರಸಭಾ ಸದಸ್ಯ ಮಿಲ್ ನಾಗರಾಜ್ ಮಾತನಾಡಿದರು.

ಹೆಚ್.ಡಿ.ಕೋಟೆ, ಆ.4– ರಾಜ್ಯದ ಎಸ್‌ಟಿ, ಎಸ್‌ಸಿ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಸಾಕಷ್ಟು ಅನುದಾನ ಬರುತ್ತಿದ್ದರೂ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ನೀಡುತ್ತಿಲ್ಲ ಎಂದು ಪುರಸಭಾ ಸದಸ್ಯ ಮಿಲ್ ನಾಗರಾಜು ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಯಲ್ಲಮ್ಮ ತಾಯಿ ದೇವಸ್ಥಾನದ ಬಳಿಯ ಮೆಟ್ರಿಕ್ ನಂತರದ ಪದವಿಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಪರಿಶಿಷ್ಟ ವರ್ಗ ಮೆಟ್ರಿಕ್ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಆಹಾರ ಪರಿಶೀಲಿಸಿದಾಗ ಮಕ್ಕಳಿಗೆ ಸರಿಯಾಗಿ ಬೆಂದಿಲ್ಲದ ಆಹಾರ ನೀಡಲಾಗುತ್ತಿದೆ. ವಾರ್ಡನ್‌ಗಳು ಹಾಸ್ಟೆಲ್‌ಗಳಿಗೆ ಸರಿಯಾಗಿ ಆಗಮಿಸದ ಕಾರಣ ಅಡುಗೆಯವರು ಅವರಿಗೆ ಇಷ್ಟ ಬಂದಂತೆ ಮಕ್ಕಳಿಗೆ ಊಟ ತಯಾರಿಸುತ್ತಾರೆ. ಅಲ್ಲದೇ ಕೆಲವು ಅಡುಗೆಯವರು ಸರಿಯಾಗಿ ಹಾಸ್ಟೆಲ್‌ಗೆ ಬರುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದ್ದು, ಮಕ್ಕಳಿಗೆ ಸಿಬ್ಬಂದಿ ಕೂಡ ಸ್ಪಂದಿಸುವುದಿಲ್ಲ ಎಂದರು.

ತಾಲೂಕಿನಲ್ಲಿ ಅತೀ ಹೆಚ್ಚು ಬಡ ವಿದ್ಯಾರ್ಥಿಗಳಿದ್ದು, ಉತ್ತಮ ಆಹಾರ ನೀಡುತ್ತಾರೆ ಎಂಬ ಕಾರಣಕ್ಕೆ ಪೋಷಕರು ಹಾಸ್ಟೆಲ್‌ಗೆ ಮಕ್ಕಳನ್ನು ಸೇರಿಸುತ್ತಾರೆ. ಆದರೆ ವಿದ್ಯಾರ್ಥಿಗಳು ಊಟ ಸೇರಿದಂತೆ ಸೂಕ್ತ ಸೌಲಭ್ಯಗಳಿಲ್ಲದೇ ಬಳಲುತ್ತಿದ್ದಾರೆ ಎಂದರು.

ಹಾಸ್ಟೆಲ್‌ನಲ್ಲಿ ಸಿಸಿ ಕ್ಯಾಮರಾಗಳಿಲ್ಲ. ಸೂಕ್ತ ಭದ್ರತೆ ಇಲ್ಲದೇ ವಿದ್ಯಾರ್ಥಿಗಳು ಜೀವ ಭಯದಲ್ಲಿ ದಿನ ಕಳೆಯುವಂತಾಗಿದೆ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

2007ರಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಿಂದ ಹೆಣ್ಣು ಮಕ್ಕಳ ಹಾಸ್ಟೆಲ್ ನಿರ್ಮಾಣಕ್ಕೆ 326.32 ಲಕ್ಷ ರೂ. ಬಿಡುಗಡೆಯಾಗಿದೆ. ಆದರೆ ಇದುವರೆಗೂ ಕಟ್ಟಡ ಕಾಮಗಾರಿ ಆರಂಭವಾಗಿಲ್ಲ. ನಿವೇಶನದ ತೊಂದರೆಯಿಂದ ನಿರ್ಮಾಣವಾಗಿಲ್ಲ ಎಂದು ಹೇಳಲಾಗಿತ್ತು. ಆದರೆ ಬದಲಿ ನಿವೇಶನ ನೀಡಿದ್ದರೂ ನಿರ್ಮಾಣಗೊಂಡಿಲ್ಲ. ವಿದ್ಯಾರ್ಥಿಗಳು ಇದರ ಪ್ರಯೋಜನದಿಂದ ವಂಚಿತರಾಗಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕೃಷ್ಣನಾಯಕ, ಚಾಕಳ್ಳಿ ಕೃಷ್ಣ, ದೇವನಾಯಕ, ಕುಮಾರ್ ಇದ್ದರು.

ಕೆಲ್ಲೂಪುರದಲ್ಲಿ ಚಿರತೆ ಮರಿ ರಕ್ಷಣೆ



ಮಲ್ಕುಂಡಿ, ಆ.4– ಸಮೀಪದ ಕೆಲ್ಲೂಪುರ ಗ್ರಾಮದ ಜಮೀನಿನಲ್ಲಿ ಪತ್ತೆಯಾದ 3 ತಿಂಗಳ ಹೆಣ್ಣು ಚಿರತೆ ಮರಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಿಸಿದ್ದಾರೆ.

ಗ್ರಾಮದ ನಿವಾಸಿ ಸಿದ್ದರಾಜು ಅವರು ತಮ್ಮ ಜಮೀನಿನಲ್ಲಿ ಚಿರತೆ ಮರಿ ಇರುವ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಮರಿ ರಕ್ಷಿಸಿದ್ದಾರೆ. ಅರಣ್ಯ ಅಧಿಕಾರಿ ನಿತೀನ್ ಕುಮಾರ್ ಮಾತನಾಡಿ ಚಿರತೆ ಮರಿ ಕಾಲಿಗೆ ಗಾಯವಾಗಿದ್ದು ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಸೆಪ್ಟೆಂಬರ್ 2ನೇ ವಾರದ ಬಳಿಕ ಹರಾಜು ಮಾರುಕಟ್ಟೆ ಆರಂಭ

ತಂಬಾಕು ಹರಾಜು ಮಂಡಳಿ ಅಧ್ಯಕ್ಷ ಯಶ್ವಂತ್‌ಕುಮಾರ್ ಚೆರಿಪೋತು

ಹಿರೀಕ್ಯಾತನಹಳ್ಳಿ, ಆ.4– ಪ್ರಸಕ್ತ ಸಾಲಿನ ತಂಬಾಕು ಹರಾಜು ಮಾರುಕಟ್ಟೆ ವಹಿವಾಟನ್ನು ಸೆಪ್ಟೆಂಬರ್ ಎರಡನೇ ವಾರದ ನಂತರ ಆರಂಭಿಸಲಾಗುವುದು ಎಂದು ತಂಬಾಕು ಹರಾಜು ಮಂಡಳಿ ಅಧ್ಯಕ್ಷ ಯಶ್ವಂತ್ ಕುಮಾರ್ ಚೆರಿಪೋತು ತಿಳಿಸಿದರು.

ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ನಡೆದ ತಂಬಾಕು ಬೆಳೆಗಾರರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಈ ಬಾರಿ ನಿರಂತರ ಮಳೆಯಿಂದಾಗಿ ತಂಬಾಕು ಬೆಳೆ ಹಾನಿಗೊಳಗಾಗಿರುವುದರಿಂದ ತಂಬಾಕು ಮಂಡಳಿ ಈಗಾಗಲೇ ಹಲವು ನಿರ್ಧಾರ ತೆಗೆದುಕೊಂಡಿದೆ. ಮುಖ್ಯವಾಗಿ ನಿಲ್‌ಸೋಲ್ಡ್ ಸೇರಿದಂತೆ 2ನೇ ಬಾರಿ ನಾಟಿಗೆ ಅವಕಾಶ, ಲೈಸೆನ್ಸ್ ನವೀಕರಣಕ್ಕಾಗಿ ಅವಕಾಶ ಕಲ್ಪಿಸುವುದು ಮುಂತಾದ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೇ ಆರ್ಥಿಕ ಬೆಂಬಲಕ್ಕಾಗಿ ತಂಬಾಕು ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸುವ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಗಿದೆ. ಅಲ್ಲದೇ ಪ್ರಕೃತಿ ವಿಕೋಪ ನಿಧಿಯಡಿ ರಾಜ್ಯ ಸರ್ಕಾರದಿಂದ ತಂಬಾಕು ಬೆಳೆಗಾರರಿಗೆ ಬೆಳೆ ಪರಿಹಾರ ನೀಡಲು ಮನವಿ ಸಲ್ಲಿಸಲಾಗಿದೆ ಎಂದರು.

ಈ ಬಾರಿ ಸೆಪ್ಟೆಂಬರ್ 2ನೇ ವಾರದ ನಂತರ ಹರಾಜು ಮಾರುಕಟ್ಟೆ ಆರಂಭಿಸಲು ನಿರ್ಧರಿಸಲಾಗಿದ್ದು, ರೈತರು ಸಕಾಲದಲ್ಲಿ ತಂಬಾಕನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಕೋರಿದರು.


ರೈತರಿಗೆ ಯಶ್ವಂತ್ ಕುಮಾರ್ ಚೆರಿಪೋತು ಸೆಣಬಿನ ಬಿತ್ತನೆ ಬೀಜಗಳನ್ನು ವಿತರಿಸಿದರು.

ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಮಾತನಾಡಿ, ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ತಂಬಾಕಿನ ಇಳುವರಿ ಮತ್ತು ಗುಣಮಟ್ಟದಲ್ಲೂ ಇಳಿಕೆ ಕಂಡುಬಂದಿದೆ. ಹಾಗಾಗಿ ಯಾವುದೇ ತೆರನಾದ ಹೊಗೆಸೊಪ್ಪಿಗೂ 300 ರೂ. ಕ್ಕಿಂತ ಕಡಿಮೆ ದರ ನಿಗದಿಪಡಿಸಬಾರದೆಂದು ಖರೀದಿ ಕಂಪನಿಗಳಿಗೆ ಮಂಡಳಿ ತಾಕೀತು ಮಾಡಬೇಕು. ಆಂಧ್ರದಲ್ಲಿ ಈ ಬಾರಿ ದಾಖಲೆಯ ಕೆಜಿಗೆ 400 ರೂ. ದರ ದೊರಕಿದೆ. ಅದರಂತೆ ರಾಜ್ಯದ ತಂಬಾಕಿಗೂ ಉತ್ತಮ ದರ ಸಿಗಬೇಕು. ಇನ್ನು ಬೆಳೆಗಾರರ ಬಹುವರ್ಷಗಳ ಬೇಡಿಕೆಯಾದ ನಿರ್ದೇಶಕರ ಕಚೇರಿಯನ್ನು ಬೆಂಗಳೂರಿನಿಂದ ಮೈಸೂರಿಗೆ ಮತ್ತು ಮೈಸೂರಿನಲ್ಲಿರುವ ಪ್ರಾದೇಶಿಕ ವ್ಯವಸ್ಥಾಪಕರ ಕಚೇರಿಯನ್ನು ಹುಣಸೂರು ಮತ್ತು ಪಿರಿಯಾಪಟ್ಟಣಕ್ಕೆ ವರ್ಗಾಯಿಸಬೇಕೆನ್ನುವ ಕೋರಿಕೆಯನ್ನು ಮಂಡಳಿ ಇನ್ನೂ ಜಾರಿಗೊಳಿಸಿಲ್ಲ. ಇದನ್ನು ಕೂಡಲೇ ಜಾರಿಗೊಳಿಸಬೇಕು. ರೈತ ಭವನದ ನಿರ್ಮಾಣ ಕಾರ್ಯ ಶೀಘ್ರ ಆಗಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ರೈತ ಮುಖಂಡರಾದ ಸತೀಶ್, ನಂಜುಂಡೇಗೌಡ, ಚಂದ್ರೇಗೌಡ, ಹರಿದಾಸ, ಮಹದೇವಸ್ವಾಮಿ, ವೀರೇಗೌಡ, ವಿವಿಧ ಪ್ಲಾಟ್ ಫಾರಂನ ಹರಾಜು ಅಧೀಕ್ಷಕರಾದ ಡಾಗೆ ಹಾಜರಿದ್ದರು. ಇದೇ ವೇಳೆ ರೈತರಿಗೆ ಸೆಣಬು ಬಿತ್ತನೆ ಬೀಜವನ್ನು ಗಣ್ಯರು ವಿತರಿಸಿದರು.

ಇ–ಸ್ಟ್ಯಾಂಪಿಂಗ್ ಕೇಂದ್ರ ಆರಂಭ


ಹುಣಸೂರಲ್ಲಿ ಛಾಪಾ ಕಾಗದ ಮಾರಾಟಕ್ಕೆ ಚಾಲನೆ ನೀಡಲಾಯಿತು

ಹುಣಸೂರು, ಆ.4– ನಗರದ ಜನತೆ ಅನುಕೂಲಕ್ಕಾಗಿ ಇ–ಸ್ಟ್ಯಾಂಪಿಂಗ್ ಕೇಂದ್ರ ತೆರೆಯಲಾಗಿದೆ ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ ತಿಳಿಸಿದರು.

ನಗರದ ತಾಲೂಕು ವ್ಯವಸಾಯೋತ್ಪನ್ನ ಮಳಿಗೆಯಲ್ಲಿ ಛಾಪಾ ಕಾಗದ ಮಾರಾಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಗರದ ಸಂತೆಮಾಳದಲ್ಲಿ ತಾಲೂಕು ವ್ಯವಸಾಯೋತ್ಪನ್ನ ಸಮಿತಿಯಿಂದ 4 ವಾಣಿಜ್ಯ ಮಳಿಗಳನ್ನು ನಿರ್ಮಿಸಿದ್ದು ಸದ್ಯದಲ್ಲೇ ಲೋಕಾರ್ಪಣೆ ಯಾಗಲಿದೆ ಇನ್ನೂ ಮೂರು ಮಳಿಗೆಗಳು ಸಿದ್ಧವಾಗುತ್ತಿವೆ ಎಂದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ರೇವಣ್ಣ, ನಿರ್ದೇಶಕರಾದ ಕೆಂಪೇಗೌಡ, ಬಿ.ನಾಗರಾಜು, ಹೆಚ್.ಟಿ.ಬಾಬು, ಜಿ.ಎನ್.ವೆಂಕಟೇಶ್, ರಮೇಶ್, ಹೆಚ್.ಪ್ರೇಮ್ ಕುಮಾರ್, ಮಂಗಳಗೌರಿ, ಸುಜಾತ, ಇಂದುಕಲಾ, ಮಾಜಿ ಅಧ್ಯಕ್ಷ ಸತ್ಯನಾರಾಯಣ, ಕಾರ್ಯದರ್ಶಿ ಎ.ಎಸ್.ಹೇಮಲತಾ ಇದ್ದರು.

ಕಾಲ ಕಾಲಕ್ಕೆ ತಪಾಸಣೆಗೊಳಗಾಗಿ ಆರೋಗ್ಯ ಕಾಪಾಡಿಕೊಳ್ಳಿ

ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್


ಹೆಗ್ಗಡಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ನಂಜನಗೂಡು, ಆ.4– ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಆರೋಗ್ಯವಂತರಾಗಿದ್ದರೆ ಏನು ಬೇಕಾದರೂ ಸಾಧಿಸಬಹುದು. ಹೀಗಾಗಿ ಎಲ್ಲರೂ ಕಾಲ ಕಾಲಕ್ಕೆ ತಪಾಸಣೆಗೆ ಒಳಗಾಗಿ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ತಿಳಿಸಿದರು.

ತಾಲೂಕಿನ ಹೆಗ್ಗಡಹಳ್ಳಿಯಲ್ಲಿ ಸುಯೋಗ್ ಆಸ್ಪತ್ರೆ ಸಹಯೋಗದಲ್ಲಿ ಸಾಮೂಹಿಕ ನಾಯಕತ್ವದ ಕರ್ನಾಟಕ ರೈತ ಸಂಘ ಆಯೋಜಿಸಿದ್ದ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಜೀವನ ಶೈಲಿ, ದಿನನಿತ್ಯದ ಚಟುವಟಿಕೆಗಳು, ಆಹಾರದ ರೀತಿ ನೀತಿಗಳಿಂದಾಗಿ ಹಲವು ಕಾಯಿಲೆಗಳು ಬರುತ್ತಿವೆ. ಜೀವನದಲ್ಲಿ ಶಿಸ್ತು ಅಳವಡಿಸಿಕೊಂಡು ಆಹಾರ ಕ್ರಮ ನಿಯಮಿತವಾಗಿದ್ದರೆ ರೋಗ ತಡೆಗಟ್ಟಬಹುದು. ಅಲ್ಲದೇ ನಮಗೆ ಕಾಯಿಲೆ ಇಲ್ಲದಿದ್ದರೂ ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆಗೆ ಒಳಗಾಗಬೇಕು. ಆಗ ಕಾಯಿಲೆ ಇಲ್ಲ ಎಂಬ ಬಗ್ಗೆ ಆತ್ಮವಿಶ್ವಾಸ ಮೂಡುವ ಜೊತೆಗೆ ಕಾಯಿಲೆ ಇದ್ದಲ್ಲಿ ಪ್ರಾರಂಭದಲ್ಲೇ ಪತ್ತೆ ಹಚ್ಚಿ ಅದಕ್ಕೆ ಚಿಕಿತ್ಸೆ ಪಡೆದುಕೊಳ್ಳಲು ಸಹಕಾರಿಯಾಗಲಿದೆ. ಸುಯೋಗ್ ಆಸ್ಪತ್ರೆ ವೈದ್ಯರು ಗ್ರಾಮೀಣ ಬಡವರಿಗೆ ಅದರಲ್ಲೂ ಮುಖ್ಯವಾಗಿ ರೈತರಿಗೆ ನೆರವಾಗಲಿ ಎಂಬ ಉದ್ದೇಶದಿಂದ ಆರೋಗ್ಯ ತಪಾಸಣೆ ಶಿಬಿರ ನಡೆಸುತ್ತಿದ್ದು, ಎಲ್ಲರೂ ಇದರ ಸದುಪಯೋಗ ಪಡೆದುಕೊಂಡು ತಪಾಸಣೆಗೆ ಒಳಗಾಗಿ ನಿಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ.ಯೋಗಣ್ಣ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಸೇವೆ ವಾಣಿಜ್ಯಮಯವಾಗಿದೆ. ಆಸ್ಪತ್ರೆಗಳು ಸುಲಿಗೆಯ ತಾಣಗಳಾಗಿವೆ. ಆದ್ದರಿಂದ ಸುಯೋಗ್ ಆಸ್ಪತ್ರೆ ಹಳ್ಳಿಗಾಡಿನ ಜನರಿಗೆ ಆರೋಗ್ಯ ಸೇವೆ ಒದಗಿಸಬೇಕು ಎಂಬ ಸಾಮಾಜಿಕ ಕಳಕಳಿಯೊಂದಿಗೆ ಸುಯೋಗ ಆಸ್ಪತ್ರೆ ಹಳ್ಳಿಯ ಕಡೆಗೆ ಎಂಬ ಕಾರ್ಯಕ್ರಮ ರೂಪಿಸಿಕೊಂಡು ರೈತ ಸಂಘದ ಜೊತೆಗೆ ಗ್ರಾಮೀಣ ಜನರಿಗೆ ಆರೋಗ್ಯ ಸೇವೆ ಒದಗಿಸಲು ಮುಂದಾಗಿದೆ. ಪ್ರತಿ ತಿಂಗಳು ಗ್ರಾಪಂ ಕೇಂದ್ರಗಳಲ್ಲಿ ರೈತ ಸಂಘದ ನೆರವಿನೊಂದಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸುವ ಜೊತೆಗೆ ಬಡವರಿಗೆ ಕಡಿಮೆ ದರದಲ್ಲಿ ಚಿಕಿತ್ಸೆ ಕೊಡಲು ನಿರ್ಧರಿಸಿದೆ. ನಮ್ಮ ಆಸ್ಪತ್ರೆ ಶೋಷಣೆ ಮಾಡದೆ ಅತ್ಯಂತ ಕಡಿಮೆ ದರದಲ್ಲಿ ವೈದ್ಯಕೀಯ ಸೇವೆ ಒದಗಿಸಲಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಸಕ್ಕರೆ ಕಾಯಿಲೆ, ಅಧಿಕ ರಕ್ತದ ಒತ್ತಡ ಮನುಷ್ಯನ ಮೌನ ಕಾಯಿಲೆಯಾಗಿವೆ. ಇದರಿಂದ ಹೃದಯಾಘಾತ, ಲಕ್ವದಂತಹ ಮಾರಣಾಂತಿಕ ಕಾಯಿಲೆಗೂ ಈ ಕಾಯಿಲೆ ಕಾರಣವಾಗುತ್ತಿದೆ. ಆದ್ದರಿಂದ ಆಸ್ಪತ್ರೆಯು ಸಕ್ಕರೆ ಕಾಯಿಲೆ ಸಂಘ ಸ್ಥಾಪಿಸಿದೆ. ಬಡವರು ಆಸ್ಪತ್ರೆ ಕಡೆಗೆ ಸುಳಿಯದಂತೆ ಮಾಡುವ ಸಲುವಾಗಿ ಆಸ್ಪತ್ರೆ ವಾಟ್ಸಪ್ ಗ್ರೂಪ್‌ಗಳನ್ನೂ ರಚಿಸಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದ ರೊಂದಿಗೆ ಸಕ್ಕರೆ ಕಾಯಿಲೆ ಇದ್ದರೆ ಅವರಿಗೆ ಆಹಾರ ಕ್ರಮಗಳ ಬಗ್ಗೆ ತಿಳುವಳಿಕೆ ಮೂಡಿಸಲಾಗುತ್ತಿದೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಕಾಂತರಾಜು, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘು, ತಾಲೂಕು ಅಧ್ಯಕ್ಷ ಸತೀಶ್ ರಾವ್, ಶಿವಣ್ಣ, ವೆಂಕಟೇಗೌಡ, ಮಹದೇವಸ್ವಾಮಿ, ಶಿವಕುಮಾರ್, ಪ್ರಕಾಶ್, ಶೈಲಜಾ, ಶ್ವೇತಾ, ಸುಯೋಗ್ ಆಸ್ಪತ್ರೆ ಡಾ.ಪ್ರಭುದೇವ್, ಡಾ. ಲಿಖಿತಾ, ಡಾ.ಅಲೋಕ್ ಕುಮಾರ್, ಗ್ರಾಪಂ ಸದಸ್ಯ ರಾದ ಮನೋಜ್ ಸೇರಿದಂತೆ ಹಲವರಿದ್ದರು.

ಹುಣಸೂರಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ


ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹುಣಸೂರು, ಆ.4– ನಾಡಿನಲ್ಲಿ ಕನ್ನಡ ಭಾಷೆ ಗಟ್ಟಿಯಾಗಿ ಉಳಿಯಬೇಕಾದರೆ ಭಾವನಾತ್ಮಕ ಅಭಿಮಾನವಿರಬೇಕು. ಆಗ ಮಾತ್ರ ಭಾಷೆಗೆ ಭೀಮ ಬಲ ಬರಲಿದೆ ಎಂದು ಗಾವಡಗೆರೆ ಜಂಗಮ ಮಠದ ಶ್ರೀನಟರಾಜಸ್ವಾಮಿ ಅಭಿಪ್ರಾಯಪಟ್ಟರು.

ನಗರದ ರೋಟರಿ ಭವನದಲ್ಲಿ ರೋಟರಿ ಕ್ಲಬ್ ಮತ್ತು ಕಸಾಪ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಕ್ಷಣ ಭಾವನೆಗಳ ಜೊತೆ ನೈಜತೆಯನ್ನು ಬಿತ್ತುವ ಏಕೈಕ ಭಾಷೆ ಕನ್ನಡವಾಗಿದ್ದು, ಅದನ್ನು ಉಳಿಸುವ ನಿಟ್ಟಿನಲ್ಲಿ ಕಸಾಪ, ರೋಟರಿ ಸಂಸ್ಥೆ ಹಾಗೂ ಇನ್ನಿತರ ಸಂಘಗಳು ಸಹಕಾರಿಯಾಗಿವೆ ಎಂದರು. ಮಾದಹಳ್ಳಿ ಮಠದ ಶ್ರೀಸಾಂಬ ಸದಾಶಿವ ಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳು ಗುರು, ಹಿರಿಯರ ಬಗ್ಗೆ ಗೌರವ ಬೆಳಸಿಕೊಂಡು ನಡೆಯುವ ದಾರಿಯಲ್ಲಿ ಗುರಿ ಇದ್ದರೆ ಯಾವುದು ಅಸಾಧ್ಯವಲ್ಲ. ಆದರೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಣ್ಣುಮಕ್ಕಳ ಸಾಧನೆ ಅವರ ಶಿಸ್ತಿನ ಜೀವನ ಅನಾವರಣವಾಗುತ್ತಿದೆ. ಅವರಂತೆ ಗಂಡು ಮಕ್ಕಳು ಕೂಡ ಪುರಸ್ಕಾರಕ್ಕೆ ಭಾಜನರಾಗಬೇಕೆಂದರು.

ಬಿಇಓ ಎಸ್.ಪಿ.ಮಹದೇವ್ ಮಾತನಾಡಿ, ಈ ಹಿಂದೆ ಕನ್ನಡ ಭಾಷೆ, ನೆಲ, ಜಲದ ಬಗ್ಗೆ ಸಂಘಟನೆಗಳು ಹೋರಾಟ ಮಾಡಿ ಭಾಷೆಯ ಅಭಿಮಾನ ಹೆಚ್ಚಿಸುತ್ತಿದ್ದವು. ಆದರೆ ಅದು ಈಗ ಸ್ವಲ್ಪ ಕಣ್ಮರೆಯಾಗಿದೆ. ಮುಂದೆಯೂ ನಮ್ಮ ಕನ್ನಡ ಭಾಷೆ ಉಳಿಯಬೇಕಾದರೆ ಕನ್ನಡ ಮನೆ, ಮನಗಳಲ್ಲಿ ಅರಳಬೇಕು ಎಂದರು.

ರೋಟರಿ ಅಧ್ಯಕ್ಷ ಪ್ರಸನ್ನ ಕೆ.ಪಿ.ಮಾತನಾಡಿ, ಕನ್ನಡ ಐತಿಹಾಸಿಕ ಭಾಷೆಯಾಗಿದ್ದು, ಅಂದು ಗ್ರಾಮೀಣ ಭಾಗದಲ್ಲಿ ಹೆಚ್ಚು ಮನೆ ಮಾತಾಗಿತ್ತು. ಆದರೆ ಈಗ ಅಂಥ ಅಭಿಮಾನದಿಂದ ಕನ್ನಡ ಭಾಷೆ ಬೆಳಸುತ್ತಿದ್ದೇವೆಯೇ ಹೊರತು ಕನ್ನಡ ಬಳಸುತ್ತಿಲ್ಲ ಎಂದು ವಿಷಾದಿಸಿದರು.

ತಾಲೂಕು ಕಸಾಪ ಅಧ್ಯಕ್ಷ ಹೆಚ್.ಕೆ.ಮಹದೇವ ಮಾತನಾಡಿದರು. ರೋಟರಿ ಕಾರ್ಯದರ್ಶಿ ಹೆಚ್.ಆರ್.ಕೃಷ್ಣಕುಮಾರ್, ಮಹದೇವಯ್ಯ ಪಿ., ಎಸ್.ಗೋವಿಂದೇಗೌಡ, ಮೋಹನ್‌ರಾಜ್, ನಿಕಟಪೂರ್ವ ಅಧ್ಯಕ್ಷ ಸೋಮಶೇಖರ್ ಮಾತನಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ರಂಗಸ್ವಾಮಿ, ಕಸಾಪ ಕಾರ್ಯದರ್ಶಿ ಲೋಕೇಶ್, ಕೆ.ನಂಜುಂಡಸ್ವಾಮಿ, ರೋಟರಿ ಸದಸ್ಯರಾದ ಡಾ.ಪ್ರಸನ್ನ, ಆರ್.ಆನಂದ್, ನಾರಾಯಣ್, ಜಿ.ವಿ.ಶ್ರೀನಾಥ್, ಸಿ.ಎಸ್.ಮಹೇಶ್, ಕುಮಾರ್ ಅರಸೇಗೌಡ, ವಾಸುಕಿ, ತ್ರಿನೇಶ್ ಇದ್ದರು.

ಪಿ.ರವಿಕುಮಾರ್ ನಿಧನ

ತಿ.ನರಸೀಪುರ, ಆ.4– ಮೂಲತಃ ಕೊಳ್ಳೇಗಾಲ ತಾಲೂಕಿನ ಆಲಹಳ್ಳಿ ಗ್ರಾಮದ ನಿವಾಸಿ ಪಟ್ಟಣದ ಜಿಪಂ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪಿ. ರವಿಕುಮಾರ್(42) ಭಾನುವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸೋಮವಾರ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಗೌರಮ್ಮ



ಬೆಟ್ಟದಪುರ, ಆ.4– ಗ್ರಾಮದ ನಿವಾಸಿ ಹೋಟೆಲ್ ರಾಜಣ್ಣ ಅವರ ಪತ್ನಿ ಗೌರಮ್ಮ(57) ಭಾನುವಾರ ಮುಂಜಾನೆ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ವೀರಶೈವ ಲಿಂಗಾಯತ ಸಮಾಜದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮುಖ್ಯಮಂತ್ರಿಯನ್ನು ಅಧಿಕಾರದಿಂದ ಕೆಳಗಿಳಿಸಲು ಷಡ್ಯಂತ್ರ

ಸಿದ್ದರಾಮಯ್ಯ ಅಧಿಕಾರ ಕಳೆದುಕೊಂಡರೆ ಪ್ರತಿಭಟನೆ: ಕಾಂಗ್ರೆಸ್ ಪದವೀಧರ ಘಟಕದ ಜಿಲ್ಲಾಧ್ಯಕ್ಷ ಎಂ.ರಮೇಶ್ ಎಚ್ಚರಿಕೆ

ತಿ.ನರಸೀಪುರ, ಆ.4– ಬಿಜೆಪಿ, ಜೆಡಿಎಸ್‌ನವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಷಡ್ಯಂತ್ರ ನಡೆಸುತ್ತಿದ್ದು, ಒಂದು ವೇಳೆ ಮುಖ್ಯಮಂತ್ರಿಗಳು ತಮ್ಮ ಸ್ಥಾನ ಕಳೆದುಕೊಂಡರೆ ರಾಜ್ಯದ ಜನತೆ ದಂಗೆ ಏಳಲಿದ್ದಾರೆ ಎಂದು ಕಾಂಗ್ರೆಸ್ ಪದವೀಧರ ಘಟಕದ ಜಿಲ್ಲಾಧ್ಯಕ್ಷ ಎಂ.ರಮೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಯುವ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಶೋಷಿತ ವರ್ಗದ ನಾಯಕರಾಗಿ ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಅಧಿಕಾರ ನಡೆಸುತ್ತಿದ್ದಾರೆ. ಸರ್ವ ಜನಾಂಗ, ಸಮುದಾಯಕ್ಕೂ ಸಮಾನ ಅವಕಾಶಗಳನ್ನು ನೀಡುವ ಮೂಲಕ ರಾಜ್ಯ ಹಿಂದೆಂದೂ ಕಾಣದ ಆಡಳಿತ ನೀಡಿ ಎಲ್ಲಾ ವರ್ಗದ ಜನರ ಆಶಾಕಿರಣವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಈಗ ಮುಖ್ಯಮಂತ್ರಿ ಅವರ ಜನಪ್ರಿಯತೆ ಸಹಿಸದ ವಿರೋಧ ಪಕ್ಷಗಳು ಅವರ ಮೇಲೆ ಆಧಾರ ರಹಿತ ಆರೋಪ ಮಾಡುವ ಮೂಲಕ ಮುಡಾ ಹಾಗೂ ವಾಲ್ಮೀಕಿ ಹಗರಣದಲ್ಲಿ ಅವರ ಹೆಸರನ್ನು ವಿನಾಕಾರಣ ತರುವ ಮೂಲಕ ಅವರಿಗೆ ಕಳಂಕ ತರುವ ಕೆಲಸ ಮಾಡಲು ಹೊರಟಿವೆ ಎಂದು ಆರೋಪಿಸಿದರು.

ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಮಾಡುತ್ತಿರುವ ಎನ್‌ಡಿಎ ಮೈತ್ರಿಕೂಟದ ನಾಯಕರಿಗೆ ಸಿದ್ದರಾಮಯ್ಯ ಬಗ್ಗೆ ಮಾತನಾಡಲು ಯಾವ ನೈತಿಕತೆಯೂ ಇಲ್ಲ. ಬಿಜೆಪಿ ಅಧಿಕಾರಾವಧಿಯಲ್ಲಿ ನಡೆದ ಸಾವಿರಾರು ಕೋಟಿ ರೂ.ಗಳ ಹಗರಣ ಇದ್ದರೂ ಯಾವುದೇ ಹಗರಣದಲ್ಲಿ ಭಾಗಿಯಾಗದ ಸಿದ್ದರಾಮಯ್ಯ ರಾಜೀನಾಮೆ ಕೇಳಲು ನಿಮಗೆ ನಾಚಿಕೆಯಾಗುವುದಿಲ್ಲವೇ ಎಂದು ವ್ಯಂಗ್ಯವಾಡಿದರು.


ಸಭೆಯಲ್ಲಿ ಕಾಂಗ್ರೆಸ್ ಪದವೀಧರ ಘಟಕದ ಜಿಲ್ಲಾಧ್ಯಕ್ಷ ಎಂ.ರಮೇಶ್ ಮಾತನಾಡಿದರು.

ಬಿಜೆಪಿಗೆ ಅಧಿಕಾರ ದಾಹ: ಆಡಳಿತ ಪಕ್ಷಕ್ಕೆ ಜನತೆ ಅಭಿವೃದ್ಧಿ ಮಾಡುವ ತುಡಿತವಿದೆ. ಆದರೆ ವಿಪಕ್ಷದವರಿಗೆ ಅಧಿಕಾರ ಹೋದ ಬಗ್ಗೆ ಚಿಂತೆ ಇದೆ. ಹಾಗಾಗಿ ಅಧಿವೇಶನ ಸರಿಯಾಗಿ ನಡೆಸಲು ಬಿಡದೇ ಸಮಯ ವ್ಯರ್ಥ ಮಾಡಿದರು. ಈಗ ರಾಜ್ಯದೆಲ್ಲೆಡೆ ಪ್ರವಾಹ ಬಂದು ಸಾವು–ನೋವುಗಳಾಗಿದ್ದರೂ ಅದರ ಬಗ್ಗೆ ಚರ್ಚೆ ಮಾಡಲಿಲ್ಲ. ಬದಲಿಗೆ ಮುಡಾ, ವಾಲ್ಮೀಕಿ ಹಗರಣದ ಬಗ್ಗೆ ಸದನದಲ್ಲಿ ಗಲಾಟೆ ಮಾಡಿದರು.

ಮಾಹಿತಿ ಹಕ್ಕುದಾರರಿಗೆ ರಾಜ್ಯ ಪಾಲರ ಭೇಟಿ ಸಿಕ್ಕಿದ್ದೇಗೆ: ಮಾಹಿತಿ ಹಕ್ಕಿಗೆ ತನ್ನದೇ ಆದ ಮಹತ್ವವಿದೆ. ಅದನ್ನು ಕೆಲವರು ಕೆಟ್ಟ ರೀತಿ ಬಳಸಿಕೊಳ್ಳುತ್ತಿದ್ದಾರೆ. ಮೈಸೂರು ಮತ್ತು ಬೆಂಗಳೂರಿನ ಇಬ್ಬರು ಆರ್‌ಟಿಐ ಕಾರ್ಯಕರ್ತರು ವಿಪಕ್ಷದವರ ಕುಮ್ಮಕ್ಕಿನಿಂದ ಮುಡಾದಲ್ಲಿ ದೊಡ್ಡ ಹಗರಣವಾಗಿದೆ ಎಂದು ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ನನಗೆ ತಿಳಿದ ಮಾಹಿತಿಯಂತೆ ಸ್ವತಃ ಮುಖ್ಯಮಂತ್ರಿಯವರಿಗೆ ರಾಜ್ಯಪಾಲರ ಭೇಟಿ ಕಷ್ಟ. ಆದರೆ ಆರ್‌ಟಿಐ ಕಾರ್ಯಕರ್ತರಿಗೆ ಹೇಳಿದ ತಕ್ಷಣ ಭೇಟಿಗೆ ಕಾಲಾವಕಾಶ ಹೇಗೆ ಕೊಟ್ಟರು ಎಂದು ಅಚ್ಚರಿ ವ್ಯಕ್ತಪಡಿಸಿದರು.

ತಾಪಂ ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಗಣೇಶ್ ಮಾತನಾಡಿ, ಮುಡಾ, ವಾಲ್ಮೀಕಿ ಹಗರಣ ಆಧಾರವಾಗಿಟ್ಟುಕೊಂಡು ಸಿದ್ದರಾಮಯ್ಯ ಮೇಲೆ ಇಲ್ಲ ಸಲ್ಲದ ಆರೋಪ ಮಾಡುತ್ತಿರುವ ಬಿಜೆಪಿಯವರ ಧೋರಣೆ ಖಂಡನೀಯ. ಎನ್‌ಡಿಎ ಮೈತ್ರಿಕೂಟವು ರಾಜ್ಯಪಾಲರನ್ನು ಮಧ್ಯವರ್ತಿಯಾಗಿ ಮಾಡಿಕೊಂಡು ಸಿದ್ದರಾಮಯ್ಯ ಮೇಲೆ ನೋಟಿಸ್ ಜಾರಿ ಮಾಡಿಸಿದೆ. ಮುಖ್ಯಮಂತ್ರಿಗಳು ಉತ್ತಮ ಆಡಳಿತಗಾರರಾಗಿದ್ದು, ಅವರ 40 ವರ್ಷಗಳ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲ. ಹಿಂದುಳಿದವರು, ದೀನ ದಲಿತರು, ಅಲ್ಪಸಂಖ್ಯಾತರ ಬಗ್ಗೆ ಹೆಚ್ಚಿನ ಕಾಳಜಿ ಇರುವ ವ್ಯಕ್ತಿ ಬಗ್ಗೆ ಆಧಾರ ರಹಿತ ಆರೋಪ ಸರಿಯಲ್ಲ ಎಂದರು.


ಈ ವೇಳೆ ಪುರಸಭಾ ಸದಸ್ಯರಾದ ಬಾದಾಮಿ ಮಂಜು, ಮೆಡಿಕಲ್ ನಾಗರಾಜು, ತುಂಬಲ ಗ್ರಾಪಂ ಅಧ್ಯಕ್ಷ ರಾಮನಂಜಯ್ಯ, ಎಪಿಎಂಸಿ ಅಧ್ಯಕ್ಷ ಎನ್.ಮಹೇಶ್, ತಾಲೂಕು ಕುರುಬರ ಸಂಘದ ಮಾಜಿ ನಿರ್ದೇಶಕ ಎಂ.ಕೆ.ಸಹದೇವ, ಯುವ ಘಟಕದ ಅಧ್ಯಕ್ಷ ಲಿಂಗರಾಜು, ವಿದ್ಯಾರ್ಥಿ ಘಟಕದ ಅಧ್ಯಕ್ಷ ಕಿಶೋರ್ ಕುಮಾರ್, ಟೌನ್ ಅಧ್ಯಕ್ಷ ಅಂದಾನಿ ಗೌಡ, ಮುಖಂಡರಾದ ಯೋಗೇಶ್, ಸೋಮಣ್ಣ, ರವಿ, ಜಲ್ಲಿ ಮಹದೇವಸ್ವಾಮಿ, ಮಂಜುನಾಥ್, ಮಹದೇವ್, ಶ್ರೀಕಂಠ, ಕುಮಾರ್, ಪುರಿ ನಟೇಶ್, ಹಾಜರಿದ್ದರು.

ಗ್ರಂಥಾಲಯಕ್ಕೆ ಹೋಗುವ ವಿದ್ಯಾರ್ಥಿಗಳು, ಅಧ್ಯಾಪಕರ ಸಂಖ್ಯೆ ಕ್ಷೀಣ

ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ವಿಷಾದ

ಮೈಸೂರು, ಆ.4(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ಗ್ರಂಥಾಲಯಕ್ಕೆ ಹೋಗುವ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ವಿಷಾದಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಜನಜಾಗರಣ ಟ್ರಸ್ಟ್ ಹಾಗೂ ಮಂಥನ ಮೈಸೂರು ಸಂಸ್ಥೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಜಿ.ಬಿ.ಹರೀಶ್ ಅವರ 'ಎಲ್ಲರಿಗೂ ಬೇಕಾದ ಅಂಬೇಡ್ಕರ್ – ಗೊತ್ತೇ ಇರದ ಅದೆಷ್ಟೋ ಸಂಗತಿಗಳು' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನ ಕೊಡುಗೆ ನೀಡುವುದರೊಂದಿಗೆ ಸಾಕಷ್ಟು ಕೊಡುಗೆ ನೀಡುವಲ್ಲಿ ಶ್ರಮಿಸಿದ್ದಾರೆ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯಿಂದ ಡಾಕ್ಟರ್ ಆಫ್ ಸೈನ್ಸ್ ಪದವಿ ಪಡೆದಿದ್ದಾರೆ. ಅವರ ಕೃತಿಯಿಂದ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ನಾಂದಿಯಾಗಿದೆ. ಇನ್ನಷ್ಟು ಮಹತ್ತರ ವಿಚಾರಗಳು ಜನರಿಗೆ ತಿಳಿದಿಲ್ಲ ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಲೇಖಕ ಜಿ.ಬಿ.ಹರೀಶ್ ಅವರ 'ಎಲ್ಲರಿಗೂ ಬೇಕಾದ ಅಂಬೇಡ್ಕರ್ – ಗೊತ್ತೇ ಇರದ ಅದೆಷ್ಟೋ ಸಂಗತಿಗಳು' ಪುಸ್ತಕವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪ್ರೊ.ಎನ್.ಕೆ.ಲೋಕನಾಥ್ ಬಿಡುಗಡೆ ಮಾಡಿದರು.

ದೇಶದಲ್ಲಿ ಈ ಹಿಂದೆ ಕಾರ್ಮಿಕರು 14 ಗಂಟೆ ದುಡಿಯಬೇಕಾದ ಪರಿಸ್ಥಿತಿ ಇತ್ತು. ಇದನ್ನು ಗಮನಿಸಿದ ಅಂಬೇಡ್ಕರ್ ಅವರು ಕಾರ್ಮಿಕರ ಕೆಲಸದ ಅವಧಿಯನ್ನು 8 ಗಂಟೆಗೆ ಸೀಮಿತಗೊಳಿಸಿದರು. ಅಂಬೇಡ್ಕರ್ ಚಿಂತನೆ, ಹೋರಾಟದ ಫಲವಾಗಿ ಇಂದು ಕಾರ್ಮಿಕರಿಗೆ ನೆರವಾಗಿದೆ. ಇದರೊಂದಿಗೆ ಜಲ ವಿದ್ಯುತ್ ಕೇಂದ್ರ ಸ್ಥಾಪನೆ ಹಾಗೂ ವಿದ್ಯುತ್ ಉತ್ಪಾದನಾ ತಾಂತ್ರಿಕ ವಿದ್ಯುತ್ ಮಂಡಳಿ ಸ್ಥಾಪನೆ ಮಾಡಿದರು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಗ್ರಂಥಾಲಯಕ್ಕೆ ಹೋಗುವ ವಿದ್ಯಾರ್ಥಿಗಳು, ಅಧ್ಯಾಪಕರ ಸಂಖ್ಯೆ ಕ್ಷೀಣಿಸುತ್ತಿದೆ. ಗ್ರಂಥಾಲಯಕ್ಕೆ ಹೋಗಿ ಓದುವಂತೆ ಹೇಳಿದರೆ ಇ–ಬುಕ್, ಇ–ಜರ್ನಲ್ ಇದೆ ಎನ್ನುತ್ತಾರೆ. ಆದರೆ, ಇ–ಬುಕ್ ಮತ್ತು ಇ–ಜರ್ನಲ್‌ಗಳಿಂದ ಸಾಮಾನ್ಯ ಪುಸ್ತಕ ಓದಿದಂತೆ ಆಗುವುದಿಲ್ಲ. ಆ ಕಾರಣದಿಂದ ಪುಸ್ತಕದ ಪ್ರಿಂಟ್ ಕೈಯ್ಯಲ್ಲಿದ್ದಾಗ ಆಗುವ ಜ್ಞಾನಾರ್ಜನೆ ಹೆಚ್ಚಾಗಿ ಆಗುತ್ತದೆ. ಡಾ.ಅಂಬೇಡ್ಕರ್ ಅವರಂತೆ ಹೆಚ್ಚು ಓದಲು ಸಾಧ್ಯವಾಗದಿದ್ದರೂ, ಓದುವ ಹವ್ಯಾಸವಾದರೂ ಬೆಳೆಸಿಕೊಳ್ಳಬೇಕು. ಪುಸ್ತಕಗಳು ನಿರಂತರವಾಗಿ ಬಿಡುಗಡೆಯಾಗುತ್ತಿರಲೇಬೇಕು. ಅವುಗಳ ಬಗ್ಗೆ ಸಂವಾದ ನಡೆಯುತ್ತಾ, ಹೆಚ್ಚು ಹೆಚ್ಚು ವಿಷಯಗಳು ಲೇಖಕರಿಗೂ ತಿಳಿಯುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

ಕೃತಿಯ ಲೇಖಕ, ಸಾಹಿತಿ ಡಾ. ಜಿ.ಬಿ ಹರೀಶ್ ಮಾತನಾಡಿ, ಪುಸ್ತಕ ಏಕ, ಬಿಡುಗಡೆ ಅನೇಕ. ಅಂಬೇಡ್ಕರ್ ಅವರದ್ದು ತೋರಿಕೆಯ ಜ್ಞಾನವಲ್ಲ. ಆಳವಾದ ಜ್ಞಾನ. ಇಂದು ರಾಹುಲ್ ಗಾಂಧಿಯಂತಹ ಪ್ರಭಾವಿ ನಾಯಕರು ಕೆಂಪು ಪುಸ್ತಕದಲ್ಲಿ ಸಂವಿಧಾನವನ್ನು ತೋರಿಸಿ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ. ಸಂವಿಧಾನದ ರಕ್ಷಣೆಯ ಹೆಸರಲ್ಲಿ ಸಮಾಜಕ್ಕೆ ಅಪಾಯಕಾರಿ ಮನೋಭಾವನೆಯನ್ನು ತಂದೊಡ್ಡುತ್ತಿದ್ದಾರೆ. ಸಮಾಜ ಅರಿಯದ ಅಂಬೇಡ್ಕರ್ ಅವರನ್ನು ಅಧ್ಯಯನ ಮಾಡಿ ಸಮಾಜಕ್ಕೆ ಪರಿಚಯಿಸಿದ್ದೇನೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಪುಸ್ತಕ ಕುರಿತು ಡಾ. ಸುಧಾಕರ್ ಹೊಸಳ್ಳಿ ಮಾತನಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪೇಚಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಔರಾನ್ ಮೇ ಕಹಾನ್ ದಮ್ ಥಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಲ್ಕಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫ್ಯಾಮಿಲಿ ಡ್ರಾಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಬೋಟ್ (ತ)	4 ಪ್ರದರ್ಶನಗಳು
ಸಂಗಂ	
ಪೇಚಿ (ತ)	4 ಪ್ರದರ್ಶನಗಳು
ಲಿಡೋ	
ಹೆಬ್ಬುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪೇಚಿ (ತ)	4 ಪ್ರದರ್ಶನಗಳು
ಪ್ರಭಾ	
ಅಡವಿಕಟ್ಟೆ (ಕ)	2 ಪ್ರದರ್ಶನಗಳು
ಇಷ್ಕ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರಾಯನ್ (ತ): ಬೆ.10.40ಕ್ಕೆ, ಮ.1.30ಕ್ಕೆ, ರಾ.10ಕ್ಕೆ, ಔರಾನ್ ಮೇ ಕಹಾನ್ ದಮ್ ಥಾ (ಹಿಂ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಮರ್ಝಿ ಪಿಡಿಕಥಾ ಮನಿಥನ್ (ತ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಔರಾನ್ ಮೇ ಕಹಾನ್ ದಮ್ ಥಾ (ಹಿಂ): ಬೆ.10.25ಕ್ಕೆ.
ಸ್ಕ್ರೀನ್ 3	ಇಷ್ಕ್ (ಕ): ಬೆ.10.45ಕ್ಕೆ, ಹೆಬ್ಬುಲಿ (ಕ): ಮ.1.40ಕ್ಕೆ, ಬಡ್ಡಿ (ತೆ): ಸಂ.4.30ಕ್ಕೆ, ಶಿವಂ ಭಜೆ (ತೆ): ರಾ.7.20ಕ್ಕೆ, ರೂಪಾಂತರ (ಕ): ರಾ.9.55ಕ್ಕೆ
ಸ್ಕ್ರೀನ್ 4	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.45ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತೆ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಿದ್ದರಾಮಯ್ಯ ಹುಟ್ಟುಹಬ್ಬದ ಪ್ರಯುಕ್ತ ವಯನಾಡು ಭೂಕುಸಿತ ಸಂತ್ರಸ್ತರಿಗೆ ನೆರವು



ಕೇರಳದ ವಯನಾಡಲ್ಲಿ ಭೂಕುಸಿತದಿಂದ ಗಾಯಗೊಂಡ ಸಂತ್ರಸ್ತರ ನೆರವಿಗಾಗಿ ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ವೈದ್ಯಕೀಯ ಸಿಬ್ಬಂದಿಗಳ ತಂಡ ಅಗತ್ಯ ವಸ್ತುಗಳೊಂದಿಗೆ ಕೇರಳಕ್ಕೆ ಪ್ರಯಾಣ ಬೆಳೆಸಿತು.

ಮೈಸೂರು, ಆ.4(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನದ ಅಂಗವಾಗಿ ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ವೈದ್ಯಕೀಯ ಸಿಬ್ಬಂದಿಗಳ ತಂಡ, ಆಂಬುಲೆನ್ಸ್ ಹಾಗೂ ಅಗತ್ಯ ವಸ್ತುಗಳನ್ನು ಕೇರಳದ ವಯನಾಡು ಸಂತ್ರಸ್ತರ ನೆರವಿಗಾಗಿ ಕಳುಹಿಸಿಕೊಡಲಾಯಿತು.

ಗುಡ್ಡ ಕುಸಿತದಿಂದ ಕೇರಳದ ವಯನಾಡಿನ ಮುಂಡಕ್ಕೈ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ನೂರಾರು ಮಂದಿ ಗಾಯಗೊಂಡಿದ್ದು, ಕಾಳಜಿ ಕೇಂದ್ರ ಹಾಗೂ ವಿವಿಧ ಆಸ್ಪತ್ರೆಗಳಲ್ಲಿ ಇರುವ ಸಂತ್ರಸ್ತರು ಹಾಗೂ ಗಾಯಾಳುಗಳಿಗೆ ನೆರವಾಗಲು ತಂಡದೊಂದಿಗೆ ಸಾಮಗ್ರಿ ಕಳಿಸುವ ಮೂಲಕ ಮಾನವೀಯತೆ ಪ್ರದರ್ಶಿಸಿದರು.

ಇದೇ ವೇಳೆ ಶ್ರೀನಿವಾಸ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮಾಲೀಕ ಗಂಧನಹಳ್ಳಿ ವೆಂಕಟೇಶ್ ಮಾತನಾಡಿ, ಕೇರಳದ ವಯನಾಡಿನಲ್ಲಿ ಆಗಿರುವ ಭೂಕುಸಿತ ಪ್ರಕರಣದಲ್ಲಿ ಅನೇಕರು ಸಂತ್ರಸ್ತರಾಗಿದ್ದಾರೆ. ಮಾನವೀಯ ನೆಲೆಗಟ್ಟಿನಲ್ಲಿ ನೊಂದ ಜನರಿಗೆ ಆರೋಗ್ಯ ಸೇವೆ ಹಾಗೂ ನೆರವು ನೀಡಲು ತಂಡದೊಂದಿಗೆ ಅಗತ್ಯ ವಸ್ತುಗಳನ್ನು ಕಳುಹಿಸುತ್ತಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ವೈದ್ಯರಾದ ಡಾ.ಕಮಲಮ್ಮ ಡಾ.ಸುಮಂತ್, ಡಾ.ಯುವರಾಜ್, ಡಾ.ತೇಜಸ್, ಡಾ.ಗುರುರಾಜ್ ಹಾಗೂ ಇನ್ನಿತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕುಡುಮ ಶ್ರೀ ಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸೇವಾ ಟ್ರಸ್ಟ್‌ನಿಂದ ಚಾಮುಂಡಿಬೆಟ್ಟದ ಮೆಟ್ಟಿಲು ಸ್ವಚ್ಛತೆ

ಮೈಸೂರು, ಆ4(ಎಂಟಿವೈ)– ಮೈಸೂರಿನ ಜ್ಯೋತಿನಗರದ ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸೇವಾ ಟ್ರಸ್ಟ್ ಕಾರ್ಯಕರ್ತರು ಭಾನುವಾರ ಚಾಮುಂಡಿಬೆಟ್ಟದ ಮೆಟ್ಟಿಲುಗಳ ಸ್ವಚ್ಛತಾ ಕಾರ್ಯ ನಡೆಸಿ, ಮೆಟ್ಟಿಲುಗಳ ಬಳಿ ಬಿದ್ದಿದ್ದ ಅನುಪಯುಕ್ತ ವಸ್ತುಗಳನ್ನು ಸಂಗ್ರಹಿಸಿ ಪರಿಸರ ಪ್ರಜ್ಞೆ ಪ್ರದರ್ಶಿಸಿದರು.

ಆಷಾಢ ಮಾಸದ ಶುಕ್ರವಾರ ಹಾಗೂ ವರ್ಧಂತಿ ದಿನ ಬೆಟ್ಟದಲ್ಲಿ ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಕಾಲ್ನಡಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ತೆರಳಿದ್ದರಿಂದ ಮೆಟ್ಟಿಲುಗಳಲ್ಲಿ ಅರಿಶಿನ, ಕುಂಕುಮ, ಕರ್ಪೂರ, ಗಂಧದಕಡ್ಡಿ ಸೇರಿದಂತೆ ಇನ್ನಿತರ ವಸ್ತುಗಳನ್ನು ಇಂದು ನಡೆಸಿದ ಸ್ವಚ್ಛತಾ ಅಭಿಯಾನದಲ್ಲಿ ಸಂಗ್ರಹಿಸಿದರು.



ಚಾಮುಂಡಿಬೆಟ್ಟದ ಮೆಟ್ಟಿಲುಗಳನ್ನು ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸೇವಾ ಟ್ರಸ್ಟ್ ಕಾರ್ಯಕರ್ತರು ಸ್ವಚ್ಛಗೊಳಿಸಿದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಹಿರಿಯ ವಕೀಲ ಓ.ಶ್ಯಾಂಭಟ್ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದರು. ಬಳಿಕ ಪಾದದಿಂದ ಬೆಟ್ಟದವರೆಗೂ ಇರುವ 1001 ಮೆಟ್ಟಿಲುಗಳನ್ನು ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸೇವಾ ಟ್ರಸ್ಟ್ ಕಾರ್ಯಕರ್ತರು ಸ್ವಚ್ಛಗೊಳಿಸಿದರು. ಈ ವೇಳೆ ಪ್ರತಿಯೊಂದು ಮೆಟ್ಟಿಲುಗಳಲ್ಲೂ ಸಾಕಷ್ಟು ಪ್ರಮಾಣದ ಅರಿಶಿನ, ಕುಂಕುಮ ಸಂಗ್ರಹಿಸಿದರು. ಬೆಟ್ಟ ಹತ್ತುವ ಭಕ್ತರು ಪ್ರತಿಯೊಂದು ಮೆಟ್ಟಿಲುಗಳಿಗೂ ಅರಿಶಿನ ಕುಂಕುಮ ಹಚ್ಚುತ್ತಿದ್ದರಿಂದ ಎಲ್ಲಾ ಮೆಟ್ಟಿಲುಗಳ ಮೇಲೂ ಹೆಚ್ಚಿನ ಪ್ರಮಾಣದಲ್ಲಿ ಅರಿಶಿನ–ಕುಂಕುಮ ಸಂಗ್ರಹವಾಗಿತ್ತು. ತುಂತುರು ಮಳೆಯಿಂದಾಗಿ ಮೆಟ್ಟಿಲುಗಳ ಮೇಲೆ ಕಾಲಿಟ್ಟರೆ ಜಾರುವ ಸ್ಥಿತಿ ನಿರ್ಮಾಣವಾಗಿತ್ತು. ಈ ಹಿನ್ನೆಲೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸಿ ಮೆಟ್ಟಿಲುಗಳನ್ನು ಸ್ವಚ್ಛಗೊಳಿಸಲಾಯಿತು.

ಈ ಸಂದರ್ಭದಲ್ಲಿ ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ಕೆ.ಮಹದೇವ, ಟ್ರಸ್ಟ್‌ನ ಗೋಪಮ್ಮ, ಚಿನ್ನಸ್ವಾಮಿ, ಅಶೋಕ್, ಮಣಿರಾಜ್, ರಾಜೇಶ್ವರಿ, ರಾಮು ಪಾಲ್ಗೊಂಡಿದ್ದರು.

ಕನಸು ರಂಗ ತಂಡದ 'ರಂಗಸ್ವರ'ಕ್ಕೆ ಚಾಲನೆ

ಮೈಸೂರು, ಆ.4(ಎಂಕೆ)– ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ಸಾಂಸ್ಕೃತಿಕ ಭವನ(ಬಯಲು ರಂಗಮಂದಿರ)ದಲ್ಲಿ ಕನಸು ರಂಗ ತಂಡದ ರಂಗಸ್ವರ–2024ಕ್ಕೆ ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಭಾನುವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕನಸನ್ನು ನನಸಾಗಿಸಲು ಪ್ರೋತ್ಸಾಹ ನೀಡುವುದು ಅವಶ್ಯವಾಗಿದೆ. ಗುರಿಯೊಂದಿಗೆ ಸಾಗಿದರಷ್ಟೇ ಯಶಸ್ಸು ಸಾಧ್ಯ ಎಂದರಲ್ಲದೆ ಗೋಕುಲಂನ ಬಯಲು ರಂಗಮಂದಿರದಲ್ಲಿ ದೀಪಗಳ ವ್ಯವಸ್ಥೆ, ಛಾವಣಿ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಗಳ ಮೂಲಕ ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಿಗೆ ರಂಗಮಂದಿರ ವಿನಿಯೋಗ ಮಾಡಲಾಗುವುದು ಎಂದು ತಿಳಿಸಿದರು.



ಕನಸು ರಂಗ ತಂಡದ 'ರಂಗಸ್ವರ'ಕ್ಕೆ ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಚಾಲನೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶರಣ ಸಾಹಿತ್ಯ ಪರಿಷತ್ ಮೈಸೂರು ತಾಲೂಕು ಅಧ್ಯಕ್ಷ ದೇವರಾಜು ಪಿ.ಚಿಕ್ಕಳ್ಳಿ ಮಾತನಾಡಿ, ಕಲಾವಿದರಿಗೆ ಪ್ರೋತ್ಸಾಹ ನೀಡುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕನಸು ತಂಡದ ನಾಟಕ ವೀಕ್ಷಣೆಗೆ ವಿದೇಶಿಗರು ಬಂದಿರುವುದನ್ನು ನೋಡಿದರೆ ಇದೊಂದು ಅಂತರರಾಷ್ಟ್ರೀಯ ಕಾರ್ಯಕ್ರಮದಂತೆ ಕಾಣುತ್ತಿದೆ ಎಂದು ಹರ್ಷವ್ಯಕ್ತಪಡಿಸಿದರು.

ಬಳಿಕ ಮಿಡಲ್ ಕ್ಲಾಸ್ ಸಂಸಾರ ಹಾಸ್ಯ ಪ್ರಧಾನ ನಾಟಕವನ್ನು ಪ್ರಸ್ತುತಪಡಿಸಲಾಯಿತು. ಕರ್ನಾಟಕ ನಾಟಕ ಅಕಾಡೆಮಿ ಸದಸ್ಯೆ ಡಾ.ಎಂ.ಎ.ಜಾಹಿದಾ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕನಸು ರಂಗ ತಂಡದ ನಿರ್ದೇಶಕ ಪಿ.ಶ್ರೇಯಸ್ ಉಪಸ್ಥಿತರಿದ್ದರು.

ಉತ್ತಮ ಶಿಕ್ಷಕ ಪ್ರಶಸ್ತಿ: ಅರ್ಜಿ ಆಹ್ವಾನ

ಮೈಸೂರು,ಆ.4– 2024ನೇ ಸಾಲಿನ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಹ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದೆ ತಾಲೂಕಿನ ಅರ್ಹ ಶಿಕ್ಷಕರು ಅಗತ್ಯ ದಾಖಲೆಗಳನ್ನು ಆ.7ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ತಿ.ನರಸೀಪುರ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸಂವಿಧಾನ ಸಭೆ ವರ್ಸಸ್ ಅಂಬೇಡ್ಕರ್' ನಾಲ್ಕು ಸಂಪುಟಗಳ ಬಿಡುಗಡೆ

ರಾಜ್ಯದಲ್ಲಿ ಈವರೆಗೂ ಒಬ್ಬ ದಲಿತರು ಮುಖ್ಯಮಂತ್ರಿ ಆಗಿಲ್ಲವೆಂಬ ಕೊರತೆ ಇದೆ

ಹಿರಿಯ ಸಾಹಿತಿ ಪ್ರೊ.ಕೆ.ಎಸ್.ಭಗವಾನ್

ಮೈಸೂರು,ಆ.4(ಪಿಎಂ)– ಭವಿಷ್ಯದಲ್ಲಿ ಶೂದ್ರರು ಆಳ್ವಿಕೆ ಮಾಡುತ್ತಾರೆಂದು ಸ್ವಾಮಿ ವಿವೇಕಾನಂದರು ಭವಿಷ್ಯ ನುಡಿದಿದ್ದರು. ಅಂತೆಯೇ ಎಲ್ಲಾ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಾದವರು ಅಬ್ರಾಹ್ಮಣರು. ನಮ್ಮ ರಾಜ್ಯದಲ್ಲಿ ಈವರೆಗೂ ಒಬ್ಬ ದಲಿತರು ಮುಖ್ಯಮಂತ್ರಿ ಆಗಿಲ್ಲವೆಂಬ ಕೊರತೆ ಇದೆ ಎಂದು ಹಿರಿಯ ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಹೇಳಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸಭಾಂಗಣದಲ್ಲಿ ಇನ್‌ಸ್ಪೈರ್ ಗ್ರೂಪ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಎಸ್. ಚಿಕ್ಕಸಾವಕ ಅವರ 'ಸಂವಿಧಾನ ಸಭೆ ವರ್ಸಸ್ ಅಂಬೇಡ್ಕರ್' ಎಂಬ ನಾಲ್ಕು ಸಂಪುಟಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಈ ದೇಶದಲ್ಲಿ ನಾಲ್ಕು ವರ್ಣಗಳಿಲ್ಲ. ಬದಲಿಗೆ ಬ್ರಾಹ್ಮಣರು ಮತ್ತು ಶೂದ್ರರು ಎಂಬ ಎರಡು ಜಾತಿಗಳಷ್ಟೇ ಇದೆಯೆಂದು ವಿವೇಕನಂದರು ಹೇಳಿದ್ದರು. ನನ್ನದೊಂದು ಪುಸ್ತಕದಲ್ಲಿ ಇದನ್ನು ಉಲ್ಲೇಖಿಸಿದ್ದೇನೆ. ಅಷ್ಟೆಯಲ್ಲದೆ, ಭವಿಷ್ಯದಲ್ಲಿ ಶೂದ್ರರು ಆಳ್ವಿಕೆ ಮಾಡುತ್ತಾರೆಂದೂ ವಿವೇಕಾನಂದರು ಭವಿಷ್ಯ ನುಡಿದಿದ್ದರು. ಅಂತೆಯೇ ಎಲ್ಲಾ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಾದವರು ಅಬ್ರಾಹ್ಮಣರು. ನಮ್ಮ ರಾಜ್ಯದಲ್ಲಿ ಇದುವರೆಗೂ ಒಬ್ಬರು ದಲಿತರು ಮುಖ್ಯಮಂತ್ರಿ ಆಗಿಲ್ಲವೆಂಬ ಕೊರತೆ ಇದೆ. ದಲಿತ ಸಮುದಾಯದಲ್ಲಿ ಮುಖ್ಯಮಂತ್ರಿಯಾಗಲು ಈ ಹಿಂದೆ ಅನೇಕರು ಸಮರ್ಥರಿದ್ದರು. ಪ್ರಸ್ತುತ ಮಲ್ಲಿಕಾರ್ಜುನ ಖರ್ಗೆ ಇದ್ದಾರೆ ಎಂದು ತಿಳಿಸಿದರು.



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಭಾನುವಾರ 'ಸಂವಿಧಾನ ಸಭೆ ವರ್ಸಸ್ ಅಂಬೇಡ್ಕರ್' ನಾಲ್ಕು ಸಂಪುಟಗಳನ್ನು ಬಿಡುಗಡೆ ಮಾಡಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಅಪಾರ ಶ್ರಮ ವಹಿಸಿ ರಚಿಸಿರುವ ಸಂವಿಧಾನವೇ ನಮ್ಮ ರಾಷ್ಟ್ರೀಯ ಧರ್ಮ ಗ್ರಂಥ. ಊಟ–ತಿಂಡಿ ಸರಿಯಾಗಿ ಮಾಡದೇ ಅನಾರೋಗ್ಯದ ನಡುವೆ ಶ್ರಮವಹಿಸಿ ಸಂವಿಧಾನ ರಚಿಸಿದರು. ಅಂಬೇಡ್ಕರ್ ಅವರು ಗಾಂಧಿಯವರಿಗಿಂತಲೂ ದೊಡ್ಡವರು. ಇಂದು ಬಿಡುಗಡೆಗೊಂಡ ಚಿಕ್ಕಸಾವಕ ಅವರ ನಾಲ್ಕನೇ ಸಂಪುಟದಲ್ಲಿ ಕೂಡ ಇದನ್ನು ಉಲ್ಲೇಖಿಸಲಾಗಿದೆ. ಆದರೆ ಯಾವ ವಿಚಾರದಲ್ಲಿ ಗಾಂಧಿಯವರನ್ನು ಒಪ್ಪಲಾಗದು ಎಂಬುದು ಮುಖ್ಯ. ಗಾಂಧಿಯವರು ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆ ಅಪಾರ. ಆ ಬಗ್ಗೆ ಅಪಾರ ಗೌರವವಿದೆ ಎಂದರು.

ಗಾಂಧಿ ಸನಾತನ ಹಿಂದೂ ಧರ್ಮ ಒಪ್ಪಿದ್ದರು. ಚಾತುರ್ವರ್ಣ ಧರ್ಮ ಕೂಡ ಇದೇ ಆಗಿದೆ. ಮನುಸ್ಮೃತಿಯನ್ನೂ ಒಪ್ಪಿಕೊಂಡಿದ್ದರು. ಅವರು ಸಾವನ್ನಪ್ಪುವಾಗ ಶ್ರೀ ರಾಮ್ ಅಂದರು. ಶ್ರೀರಾಮನು ಶಂಭುಕನ ತಲೆ ಕಡಿಯುತ್ತಾನೆ. ಶಂಭುಕ ಒಬ್ಬ ಅಬ್ರಾಹ್ಮಣ. ಅಂಬೇಡ್ಕರ್ ಅವರು 1927ರಲ್ಲಿ ಮನುಸ್ಮೃತಿ ಸುಟ್ಟು ಹಾಕಿದರು. ಅವರಿಗಿಂತ ಒಂದು ವಾರ ಮೊದಲು ತಮಿಳುನಾಡಿನಲ್ಲಿ ಪೆರಿಯಾರ್ ಈ ಕೆಲಸ ಮಾಡಿದ್ದರು. ಶೂದ್ರ ಎಂದರೆ ಮನುಸ್ಮೃತಿ ಪ್ರಕಾರ ಬ್ರಾಹ್ಮಣರ ಗುಲಾಮ ಎಂದು ಅರ್ಥೈಸಿದ್ದು, ಇದಲ್ಲದೆ, ಇನ್ನು ಅವಮಾನಕರ ಅರ್ಥಗಳನ್ನೂ ನೀಡಲಾಗಿದೆ. ಹಾಗಾಗಿ ಅಂಬೇಡ್ಕರ್ ಹಾಗೂ ಪೆರಿಯಾರ್ ಅವರು ಮನುಸ್ಮೃತಿಯನ್ನು ಸುಟ್ಟರು ಎಂದು ಹೇಳಿದರು.

ನಾವು ಖಂಡಿತ ಬ್ರಾಹ್ಮಣ ಸಮುದಾಯದ ವಿರೋಧಿಗಳಲ್ಲ. ಶ್ರೀರಾಮಕೃಷ್ಣ ಪರಮಹಂಸರನ್ನು ಗೌರವಿಸಿ, ಪೂಜಿಸುತ್ತೇವೆ. ಏಕೆಂದರೆ ಅವರು ದಲಿತರ ಮನೆಯಲ್ಲಿ ಸ್ವಚ್ಛತೆ ಕೆಲಸ ಮಾಡಿದರು. ಅಂತಹ ಗುರುಗಳ ಶಿಷ್ಯ ನಾನೆಂದು ವಿವೇಕಾನಂದರು ಇದನ್ನು ದಾಖಲು ಮಾಡಿದ್ದಾರೆ. ಅಂಬೇಡ್ಕರ್ ಈ ದೇಶದ ಎಲ್ಲಾ ನೊಂದವರ ಪರವಾಗಿದ್ದಾರೆ. ಮಹಿಳೆಯರಿಗೆ ಆಸ್ತಿ ಹಕ್ಕು ಬರಬೇಕೆಂದು ಅವರು ಹೋರಾಟ ಮಾಡಿದರು. ಅದರಲ್ಲಿ ಬ್ರಾಹ್ಮಣ ಸಮುದಾಯದ ಮಹಿಳೆಯರೂ ಸೇರುತ್ತಾರೆ. ಅವರು ಕೊಟ್ಟ ಸಂವಿಧಾನ ಎಲ್ಲರಿಗೂ ಸಮಾನತೆ ನೀಡಿದೆ. ವಿಶ್ವಸಂಸ್ಥೆಯು ಅಂಬೇಡ್ಕರ್ ಅವರ ಜನ್ಮದಿನವನ್ನು ವಿಶ್ವಜ್ಞಾನ ದಿನವಾಗಿ ಘೋಷಣೆ ಮಾಡಿದೆ ಎಂದು ತಿಳಿಸಿದರು.

ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ, ಹಿರಿಯ ಸಾಹಿತಿ ಹೊರೆಯಾಲ ದೊರೆಸ್ವಾಮಿ, ನ್ಯಾಯವಾದಿ ಬಿ.ಆರ್.ರಂಗಸ್ವಾಮಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಮೇಯರ್ ಪುರುಷೋತ್ತಮ್, ಭೀಮವಾದ ಮಾಸ ಪತ್ರಿಕೆ ಸಂಪಾದಕ ಡಾ.ಆರ್. ಮೋಹನ್ ರಾಜ್, ಕೃತಿಗಳ ಕರ್ತೃ ಎಸ್.ಚಿಕ್ಕಸಾವಕ ಮತ್ತಿತರರು ಹಾಜರಿದ್ದರು.

FLAT FOR SALE
3 BHK FLAT
at Silver Springs Apartment, Hootagalli.
Please Call : 90718 99999

WANTED
ACCOUNTANT
For a reputed company in Hootagalli Industrial Area, Mysore.
Post: Accountant Full time or Part time.
Requirements: knowledge of accounting in computer (tally, stock statement, Double entry system, Balance sheet) share resume to
9448307358
kvvsetty@hotmail.com

ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಹುಣಸೂರು.

ಆರ್.ಎ.ನಂ. 113/2023

ಮೇಲ್ಮನವಿದಾರರು: ಎಸ್.ಎಂ. ಕೃಷ್ಣೇಗೌಡ, ಬಿನ್, ಲೇಟ್ ಮುದ್ದೇಗೌಡ, ಸಿದ್ದಾಪುರ ಗ್ರಾಮ, ಹೆಬ್ಬಾಳು ಹೋಬಳಿ, ಕೆ.ಆರ್.ನಗರ ತಾಲ್ಲೂಕು.

ವಿರುದ್ಧ

ಎದುರುದಾರರು: ತಹಸಿಲ್ದಾರ್‌ರವರು ಮತ್ತು ಇತರರು.

ಪತ್ರಿಕೆ ಪ್ರಕಟಣೆ.

ಮೇಲ್ಕಂಡ ಮೇಲ್ಮನವಿದಾರರು ಎದುರುದಾರರ ವಿರುದ್ಧ ಕೆ.ಆರ್.ನಗರ ತಾಲ್ಲೋಕು, ಹೆಬ್ಬಾಳು ಹೋಬಳಿ ಸಿದ್ದಾಪುರ ಗ್ರಾಮಕ್ಕೆ ಸೇರಿದ ಸರ್ವೆ.ನಂ. 4/1 ರಲ್ಲಿ 20 ಗುಂಟೆ ಪೈಕಿ 0.10 ಗುಂಟೆ ಜಮೀನಿನ ಖಾತೆಯನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ತಂದಿರುತ್ತಾರೆ. ಹೀಗಿರುವಾಗ 2ನೇ ಎದುರುದಾರರು, ರಾಮೇಗೌಡ ಬಿನ್. ಲೇಟ್ ದೇವೇಗೌಡ, ಸಿದ್ದಾಪುರ ಗ್ರಾಮ, ಹೆಬ್ಬಾಳುಹೋಬಳಿ, ಕೆಆರ್.ನಗರ ತಾಲ್ಲೋಕು, 5ನೇ ಎದುರುದಾರರಾದ ಶ್ರೀಮತಿ ನಾಗಮಣಿ (ಗಾಯತ್ರಿ) ಬಿ.ಲೇಟ್ ರಾಜೇಗೌಡ, ಕಗ್ಗೆರೆ, ಕಸಬಾ ಹೋಬಳಿ, ಕೆಆರ್.ನಗರ ತಾಲ್ಲೂಕು ಮತ್ತು 6ನೇ ಎದುರುದಾರರಾದ ಎಸ್.ಡಿ.ಲೋಕೇಶ ಬಿನ್. ಲೇಟ್ ದೇವೇಗೌಡ, ಸಿದ್ದಾಪುರ ಗ್ರಾಮ, ಹೆಬ್ಬಾಳು ಹೋಬಳಿ, ಕೆ.ಆರ್.ನಗರ ತಾಲ್ಲೋಕು ಈ ವಿಳಾಸದಲ್ಲಿ ವಾಸವಾಗಿದ್ದು ಈ ನ್ಯಾಯಾಲಯದಿಂದ ಅನೇಕ ಬಾರಿ ನೋಟೀಸು ಜಾರಿ ಮಾಡಿದರು ಅದೇ ವಿಳಾಸದಲ್ಲಿ ವಾಸವಿದ್ದರೂ ಸಹ ತೆಗೆದುಕೊಂಡಿರುವುದಿಲ್ಲ. ಸದರಿ ದಾವಾವು ದಿನಾಂಕ 28-8-2024 ರಂದು ಮಧ್ಯಾಹ್ನ 3-00 ಘಂಟೆಗೆ ನಿಗದಿಪಡಿಸಿದ್ದು ನೀವು ನ್ಯಾಯಾಲಯವು ನಿಗದಿಪಡಿಸಿರುವ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಸಹಿ/-
ಬಿ.ಎ.ಸುರೇಶ್‌ಕುಮಾರ್
ಬಿ.ಕಾಂ.ಎಲ್.ಎಲ್.ಬಿ.,
ವಕೀಲರು, ಹುಣಸೂರು
ಮೇಲ್ಮನವಿದಾರರ ಪರ ವಕೀಲರು

ಸಹಿ/-
ತಹಶೀಲ್ದಾರ್
ಉಪವಿಭಾಗಾಧಿಕಾರಿಗಳ ನ್ಯಾಯಾಲಯ
ಹುಣಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಪುಟ್ಟಮ್ಮರವರು
(ಶ್ರೀ ಲೇ ತಮ್ಮಯ್ಯನವರ ಧರ್ಮಪತ್ನಿ)

ಉತ್ತರ ಕ್ರಿಯಾಧಿ
05-08-2024
ಸೋಮವಾರ
ಬೆ.10.30 ಗಂಟೆಗೆ
ಸ್ಥಳ: ಬಂಡಿಪಾಳ್ಯ ಗ್ರಾಮ.
ದುಃಖತಪ್ತರು:
ಮೃತರ ಮಕ್ಕಳು, ನಾಗೇಶ, ಮಹೇಶ ಮತ್ತು ಸೊಸೆಯಂದಿರು ಕುಟುಂಬವರ್ಗದವರು
ಭೋಜನ: 1 ಗಂಟೆಗೆ

ಸಾರ್ವಜನಿಕ ಪ್ರಕಟಣೆ

ಆದಾಗಿ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ-570031, ಜೆ.ಪಿ.ನಗರ, ಜೆಡ್ ಎಕ್ಸ್‌ಪೆನ್ಸ್ ಬಡಾವಣೆ, 1ನೇ ಮೇನ್, 3ನೇ ಕ್ರಾಸ್, ಮನೆ ನಂ.56 ರಲ್ಲಿ ವಾಸವಾಗಿರುವ ಈರಪ್ಪ.ಕೆ.ಜಿ ರವರ ಮಗ ಸುಮಾರು 47 ವರ್ಷ ವಯಸ್ಸಿನ ಶ್ರೀ ಕೆ.ಇ.ಅರುಣ್ ಕುಮಾರ್ (ಆಧಾರ್ ನಂ.4263 3522 0165) ರವರು ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮರಟಿಕ್ಯಾತನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶೇಖರ್.ಎಂ.ಬಿ ರವರ ಧರ್ಮಪತ್ನಿ ಸುಮಾರು 39 ವರ್ಷ ವಯಸ್ಸಿನ ಶ್ರೀಮತಿ ಶೋಭ.ಎಸ್ (ಆಧಾರ್ ನಂ. 7965 3449 4981) ರವರಿಂದ ಕ್ರಯಕ್ಕೆ ಕೊಂಡು ಕೊಳ್ಳಲು ಇಚ್ಚಿಸಿ ಕ್ರಯದ ವ್ಯವಹಾರವನ್ನು ಮಾಡಲು ನಿಶ್ಚಯಿಸಿರುತ್ತಾರೆ.

ಅದ್ದರಿಂದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಯಾವುದೇ ರೀತಿಯ ಕಾನೂನು ಬದ್ಧ ಹಕ್ಕು-ವಗ್ಗೈರೆ, ಭಾಗಾಂಶ ಮತ್ತು ಹಿತಾಸಕ್ತಿ ಇದ್ದಲ್ಲಿ ಈ ದಿನದಿಂದ 07 ದಿನದ ಒಳಗಾಗಿ ಸಂಬಂಧಪಟ್ಟ ದಾಖಾಲಾತಿಗಳೊಂದಿಗೆ ಈ ಕೆಳಕಂಡ ವಕೀಲರನ್ನು ಸಂಪರ್ಕಿಸಿ ತಕರಾರನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸದರಿ ಕ್ರಯದ ವ್ಯವಹಾರವನ್ನು ಮುಂದುವರೆಸುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮಕ್ಕೆ ಸೇರಿದ ಹಾಲೀ ಬೋಗಾದಿ ಪಟ್ಟಣ ಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಬರುವ ನಮೂನೆ-3 ರ ಸ್ವತ್ತಿನ ಸಂಖ್ಯೆ.7429886737, ದಾಖಲೆ ಸಂಖ್ಯೆ. 2493788 ನಿರ್ಧರಣಾ ಸಂಖ್ಯೆ. 1108/6/1 ರ ಪೂರ್ವ ಪಶ್ಚಿಮ :- (18+16)2 ಮೀಟರ್‌ಗಳು ಮತ್ತು ಉತ್ತರ ದಕ್ಷಿಣ :- 9.14 ಮೀಟರ್‌ಗಳುಳ್ಳ ಒಟ್ಟು 155.38 ಚದರ ಮೀಟರ್‌ವುಳ್ಳ ಖಾಲಿ ನಿವೇಶನದ ಪೂರ್ತಾ ಸ್ವತ್ತು ಮತ್ತು ಇದಕ್ಕೆ ಚೆಕ್ಕುಬಂದಿ :-ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ : ಸರ್ವೆ ನಂ.6 ರ ಸ್ವತ್ತು, ಉತ್ತರಕ್ಕೆ : ಖಾತಾ ನಂ. 1108/6 ರ ಸ್ವತ್ತು, ದಕ್ಷಿಣಕ್ಕೆ : ಉಳಕೆ ಸ್ವತ್ತು.

Sd/- M.G.Siddaraju, BBM., LLB
Advocate En.no. KAR 2787103. No. 2773/1, CH-21/2, Roopa Complex, 1" Floor, 2 Cross, Railway gate Road, K.G.koppalu, Mysore.
Mob: 7899099995 / 9964604906.

ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶತಾಯುಷಿ ಶ್ರೀಮಾನ್ ಚಾಮುಂಡಪ್ಪನವರು

ಇವರು ದಿ|| 26-07-2024ನೇ ಶುಕ್ರವಾರ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 05-08-2024ನೇ ಸೋಮವಾರ ಬೆಳಗ್ಗೆ 9.30 ಗಂಟೆಗೆ ಷ|| ಬ್ರ|| ಸ್ವಾ|| ಶ್ರೀ ಪರಶಿವಮೂರ್ತಿಸ್ವಾಮಿಗಳು ಶ್ರೀ ಮಹಾಂತೇಶ್ವರ ಮಠ, ಬರಡನಪುರ ಇವರ ದಿವ್ಯ ಪಾದಪೂಜೆಯನ್ನು ಹಾಗೂ ಹರಗುರು ಚರಮೂರ್ತಿಗಳ ದಿವ್ಯ ಸಮ್ಮುಖದಲ್ಲಿ ಮಧ್ಯಾಹ್ನ 12.00 ಗಂಟೆಗೆ ಕೈಲಾಸ ಶಿವಗಣಾರಾಧನೆಯನ್ನು ನಮ್ಮ ಸ್ವಗೃಹ ಸಿಂಧುವಳ್ಳಿ ಗ್ರಾಮ, ಜಯಪುರ ಹೋ||, ಮೈಸೂರು ತಾ|| ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀಮತಿ ಚಿನ್ನಮ್ಮ ಮತ್ತು ಮಕ್ಕಳು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಂಗಡಿ ದೇವಪ್ಪನವರ ಕುಟುಂಬವರ್ಗದವರು.

ಭಜನೆ: ದಾಸೋಹ ಚಕ್ರವರ್ತಿ ಭಜನಾ ಸಂಘ, ಕಟ್ಟವಾಡಿ
ಶಿವಕಥೆ: ರಾತ್ರಿ 9.00 ಗಂಟೆಗೆ ಸಚಿನ್ ಮತ್ತು ವೃಂದದವರಿಂದ, ಮಂಡ್ಯ

16ನೇ ವರ್ಷದ ಸವಿನೆನಪು



ಶ್ರೀ ಚಿಕ್ಕನೀಲೆಗೌಡರು (ದಾಸನಕೊಪ್ಪಲು)
ಎಸ್‌ಎಲ್‌ವಿ ಬೋರ್ಡಿಂಗ್ & ಲಾಡ್ಜಿಂಗ್, ಎಸ್.ಡಿ.ಆರ್. ಟ್ರೇಡರ್ಸ್ (ಕೆ.ಎಸ್. ಗದ್ದಿಗೆ)

ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ಸಣ್ಣಮ್ಮ APMC ಮಾಜಿ ಸದಸ್ಯರು, ಹುಣಸೂರು
ಲಕ್ಷ್ಮಿ, ಮಮತ ಮತ್ತು ಕೆಂಚೇಗೌಡ
ಸವಿತ ಮತ್ತು ಸುರೇಶ್ ಎನ್.
ಅನಿತ ಮತ್ತು ಕೃಷ್ಣೇಗೌಡ
ಅಶ್ವಿನಿ ಮತ್ತು ಪ್ರವೀಣ್, ಮನುಪ್ರಿಯ ಮತ್ತು ಅರುಣ್, ರೋಹಿತ್, ನಿತಿನ್ ಮತ್ತು ಮೊಮ್ಮಕ್ಕಳು, ದಾಸನಕೊಪ್ಪಲು

ಶ್ರೀಮತಿ ಪ್ರೇಮ ಮತ್ತು ಸಿದ್ದರಾಮೇಗೌಡ,
ಗ್ರಾ.ಪಂ. ಮಾಜಿ ಸದಸ್ಯರು, ಮರಟಿಕ್ಯಾತನಹಳ್ಳಿ
ಪಲ್ಲವಿ ಮತ್ತು ಸಿದ್ದು
ಕಾವ್ಯ ಮತ್ತು ಮಹೇಶ್
ಕೋಮಲ ಮತ್ತು ವೈ. ಕಿರಣ್
ನಿಶಾಂತ್ ಎಸ್.ಗೌಡ ಮತ್ತು ಮೊಮ್ಮಕ್ಕಳು
ರೂಪನಗರ, ದಾಸನಕೊಪ್ಪಲು

SANTHOSH SHELTERS PRIVATE LIMITED
REQUIREMENT FOR THE POST OF
CIVIL ENGINEERS
Qualification: BE (Minimum 3 to 5 years experience in Apartment / Villas Project)
Salary offered based on the experience.
Food & Accommodation provided.
Email: **sales@santhoshshelters.com**
Mob: **+91-9611113680**

ರತ್ನ ಪ್ಯಾರಾ ಮೆಡಿಕಲ್ ಕಾಲೇಜು
ರಮಾವಿಲಾಸ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಪಕ್ಕ
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
Direct 2nd PUC
98866 54463

2.5 BHK
HOME INTERIORS @
₹ 2.5 Lakh*
Home Space Mart
*T&C Apply
✆91089 23123

SSG: Shree Shankar Group
Opposite to Silent shore Resort, Industrial area Hootagalli.
WANTED
1) Telecallers 10 members
2) Sales executive (driving must)
Salary as per experience, both fresher and experienced can apply
7760635708

BECOME A TEACHER
Nursery Teacher Training (NTT)
Primary Teacher Training (PTT)
For SSLC, PUC or any Degree (Pass or Fail)
Course provided by all India early childhood care & Education (R)
ADMISSIONS OPEN
- 100% Job Guarantee
- Earn Minimum Rs.15,000/- Month
- Certificate & Marks Card
- Learn in a recognised School
- Interact with real children
- Course recognised all over India

JNANA GANGOTHRI CONVENT
NURSERY, PRIMARY, HIGH SCHOOL & TEACHER TRAINING
Rajendra Nagar, Mysore 570007
Call or WhatsApp : **91139 80741**

CONSTRUCTION WORK
(Experience with 100 + Buildings)
We undertake all types of Building Construction Work on **ACTUAL COST+ PERCENTAGE basis** or on **LUMP SUM basis.**
Contact:
94498 21503

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ.,
ಎನ್. ಮಾಧವರಾವ್ ವೃತ್ತ, ಮೈಸೂರು

ಸ್ವಾತಂತ್ರ ದಿನಾಚರಣೆಯ ಅಂಗವಾಗಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 2023-24 ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರುವ ಅರ್ಹ ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ಅರ್ಜಿ ಪಡೆದು ದೃಢೀಕೃತ ಅಂಕಪಟ್ಟಿ, ಅಧಾರ್ ಕಾರ್ಡ್ ಪ್ರತಿ, 2 ಭಾವಚಿತ್ರ ಮತ್ತು ಸದಸ್ಯರ ಪಾಸ್ ಪುಸ್ತಕದ ನಕಲು ಪ್ರತಿಯೊಂದಿಗೆ ಆಗಸ್ಟ್ 13ರೊಳಗೆ ಸಲ್ಲಿಸಲು ಕೋರಲಾಗಿದೆ. ಸಂಪರ್ಕಿಸಿ: 9880371421, 9844775166

1. ಚಿನ್ನಾಭರಣಗಳ ಮೇಲೆ ಶೇ 9.5 ರಂತೆ ಗ್ರಾಂಗೆ ರೂ. 5000/- ಸಾಲ ನೀಡಲಾಗುತ್ತಿದೆ.
2. ಮನೆ ಹಾಗೂ ನಿವೇಶನಗಳ ಮೇಲೆ ಶೇ 12.5 ರಂತೆ ಗರಿಷ್ಠ 20 ಲಕ್ಷ ಸಾಲ ನೀಡಲಾಗುತ್ತಿದೆ. (ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1% ರಿಯಾಯಿತಿ ನೀಡಲಾಗುವುದು)
3. ಠೇವಣಿಗಳ ಮೇಲೆ ಗರಿಷ್ಠ ಶೇ 8.0 ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 8.5 ರಂತೆ ಬಡ್ಡಿ ನೀಡಲಾಗುತ್ತಿದೆ.
4. 2024ನೇ ಸಾಲಿನ ಯಶಸ್ವಿನಿ ಯೋಜನೆಯ ಕಾರ್ಡಗಳು ಬಂದಿದ್ದು ಮಾನ್ಯ ಸದಸ್ಯರುಗಳು ಪಡೆದುಕೊಳ್ಳಬೇಕಾಗಿ ವಿನಂತಿ.

ಸಹಿ/- ಪ್ರತಿಧ್ವನಿಪ್ರಸಾದ್ ಅಧ್ಯಕ್ಷರು | ಸಹಿ/- ಡಿ.ಬಸವರಾಜು(ಬಸಪ್ಪ) ಉಪಾಧ್ಯಕ್ಷರು | ಸಹಿ/- ಡಿ. ಅನಂತವೀರಪ್ಪ ಪ್ರ.ವ್ಯವಸ್ಥಾಪಕರು

